# ಬಾಲುರಾಯರಿಗೆ ನಮಸ್ಕಾರ

## ಅಕ್ಷರ ಕೆ.ವಿ.

ಕಾವ್ಯ, ವಿಮರ್ಶೆ, ಅನುವಾದ, ಗ್ರಂಥ ಸಂಪಾದನೆ, ನಾಟಕ – ಇತ್ಯಾದಿ ಹಲವು ಕ್ಷೇತ್ರಗಳಲ್ಲಿ ಕಳೆದ ಸುಮಾರು ಅರ್ಧ ಶತಮಾನದಷ್ಟು ಕಾಲ ಮುಖ್ಯವಾದ ಕೆಲಸಗಳನ್ನು ಮಾಡಿದ ಹಿರಿಯ ಲೇಖಕ ಶಾ. ಬಾಲುರಾವ್ ಈಚೆಗೆ ಅಚಾನಕವಾಗಿ ನಿಧನರಾದರು. ಅವರ ಮರಣದ ಸುದ್ದಿ ಕನ್ನಡದ ಪತ್ರಿಕೆಗಳ ಒಳಪುಟಗಳಲ್ಲಿ ಬಾಲಂಗೋಚಿಯ ಹಾಗೆ ಬಂತು. ಅದು ಅಸಹಜವೇನಲ್ಲ. ಯಾಕೆಂದರೆ ಬಾಲುರಾಯರು ರಾಜಧಾನಿಯ ಅತ್ಯುನ್ನತ ಸಾಹಿತ್ಯ ಸಂಸ್ಥೆಯಾದ ಸಾಹಿತ್ಯ ಅಕಾಡೆಮಿಯಲ್ಲಿ ಇದ್ದರಾದರೂ, ಕನ್ನಡ ಸಂಸ್ಕೃತಿಯ ಹಲವು ದಿಗ್ಗಜರೊಂದಿಗೆ ತುಂಬ ಹತ್ತಿರದ ಸಂಬಂಧವುಳ್ಳವರಾಗಿದ್ದರೂ ಸ್ವತಃ ಸಂಸ್ಕೃತಿಯ ರಂಗಸ್ಥಳದಲ್ಲಿ ಮುನ್ನೆಲೆಗೆ ಕಾಣಿಸಿಕೊಂಡವರಲ್ಲ. ಬಹಳ ಕಾಲ ಅವರು ದೂರದ ದೆಹಲಿಯಲ್ಲಿ ಬದುಕಿ ಬಾಳಿದ್ದೂ ಇದಕ್ಕೆ ಕಾರಣವಿರಬೇಕು. ಆದರೆ, ಕನ್ನಡ ನಾಡಿನಿಂದ ಭೌತಿಕವಾಗಿ ಎಷ್ಟೇ ದೂರದಲ್ಲಿದ್ದರೂ ಅವರದ್ದೊಂದು ಕಿರುದನಿ ಕನ್ನಡದಲ್ಲಿ ಕೇಳಿಸುತ್ತಲೇ ಇತ್ತು. ತಮ್ಮ ಒಂದು ಇಂಗ್ಲಿಷ್ ಕವನ ಸಂಕಲನವನ್ನು ಅವರು 'ದಿ ಸ್ಟಿಲ್ ಸ್ಮಾಲ್ ವಾಯ್ಸ್' ಎಂದು ಕರೆದುಕೊಂಡಿದ್ದಾರೆ. 'ಇನ್ನೂ ಸಣ್ಣದಾಗಿರುವ ದನಿ' ಅಥವಾ 'ಯಾವತ್ತೂ ಸಣ್ಣದೇ ಆಗಿ ಕೇಳುವ ಮಾತು' ಅಥವಾ 'ನೀರವದ ನಡುವಿನ ಧ್ವನಿ' – ಎಂಬೆಲ್ಲ ಅರ್ಥಗಳನ್ನು ಧ್ವನಿಸುವ ಈ ಪದಗುಚ್ಛವು ನಿಜವಾಗಿ ಬಾಲುರಾಯರ ವ್ಯಕ್ತಿತ್ವವನ್ನು ವರ್ಣಿಸಬಲ್ಲ ಒಂದು ಸಮರ್ಥ ವಿಶೇಷಣ. ಕಿರುದನಿಗೆ ತುಸುವೇ ಹೆಚ್ಚು ಒತ್ತು ಬಿದ್ದರೂ ಅದು ಕೀರುಧ್ವನಿಯಾಗುತ್ತದೆ – ಎಂಬ ಅಭಿನಯವಿವೇಕ ಬಾಲುರಾಯರ ಸಾಂಸ್ಕೃತಿಕ ವ್ಯಕ್ತಿತ್ವಕ್ಕೆ ಇತ್ತೆಂದು ನಾನು ಭಾವಿಸುತ್ತೇನೆ. ಹಾಗಾಗಿಯೇ ನವೋದಯದ ಉಬ್ಬರದ ಕಾಲದಲ್ಲೇ ಬೆಳೆದೂ ಅವರು ನವೋದಯದ ವಿಶಿಷ್ಟ 'ವಾಗ್ವಿಲಾಸ'ವನ್ನು ರೂಢಿಸಿಕೊಳ್ಳದೇ ಉಳಿದಿದ್ದರು.

ಬಾಲುರಾಯರ ಬರಹದ ಬದುಕು ಹಲವು ದಶಕಗಳಷ್ಟು ದೀರ್ಘವಾದದ್ದಾದರೂ ನಾನು ಅವರನ್ನು ನಿಕಟವಾಗಿ ನೋಡಿದ್ದು ಕಳೆದ ಇಪ್ಪತ್ತು ವರ್ಷಗಳಿಂದೀಚೆಗೆ ಮಾತ್ರ. ಶ್ರೀರಂಗಪಟ್ಟಣದಲ್ಲಿ ಜನಿಸಿ ಮೈಸೂರಿನಲ್ಲಿ ವಿದ್ಯಾಭ್ಯಾಸ ಮಾಡಿದ ಅವರು



ಹುಬ್ಬಳ್ಳಿಯಲ್ಲಿ ಪತ್ರಕರ್ತರಾಗಿ ಕೆಲಸ ಮಾಡುತ್ತಿದ್ದರೆಂದೂ 'ಲೇಖಕ' ಎಂಬ ಪತ್ರಿಕೆ ಹೊರಡಿಸುತ್ತಿದ್ದರೆಂದೂ ಮುಂದೆ ಮುಂಬಯಿಗೆ ಸ್ಥಳಾಂತರಗೊಂಡು ಆಮೇಲೆ ದೆಹಲಿಯ ಸಾಹಿತ್ಯ ಅಕಾಡೆಮಿಯಲ್ಲಿ 'ಇಂಡಿಯನ್ ಲಿಟರೇಚರ್' ಪತ್ರಿಕೆಯ ಮುಖ್ಯಸ್ಥರಾಗಿ ಕೆಲಸಮಾಡಿದರೆಂದೂ ನಾನು ಕೇಳಿ ತಿಳಿದಿದ್ದೇನೆ. ನಮ್ಮ ಕುಟುಂಬಕ್ಕೆ ಅವರು ಹಿಂದಿನಿಂದಲೂ ಸ್ನೇಹಿತರಾಗಿದ್ದುದರಿಂದ ಚಿಕ್ಕಂದಿನಲ್ಲಿಯೇ ನಾನವರನ್ನು ನೋಡಿದ್ದೆ. ಆದರೆ, ಅವರ ಸರಿಯಾದ ಪರಿಚಯವಾಗಿದ್ದು ೧೯೮೦ರ ದಶಕದ ಆರಂಭದ ಮೂರು ವರ್ಷಗಳಲ್ಲಿ; ನಾನು ದೆಹಲಿಯ ರಾಷ್ಟ್ರೀಯ ನಾಟಕಶಾಲೆಯಲ್ಲಿ ಓದುತ್ತಿದ್ದ ಕಾಲದಲ್ಲಿ.

ಆಗವರು ಸಾಹಿತ್ಯ ಅಕಾಡೆಮಿಯ ತಮ್ಮ ಪುಟ್ಟ ಕಛೇರಿಯಲ್ಲಿ 'ಹೂ ಈಸ್ ಹೂ ಆಫ್ ಇಂಡಿಯನ್ ಲಿಟರೇಚರ್'ನ ಕರಡು ತಿದ್ದುತ್ತಲೋ ಅಕಾಡೆಮಿ ಪತ್ರಿಕೆಗೆ ಬಂದ ಲೇಖನಗಳ ಪ್ರಕಟಣಪೂರ್ವ ಪರಿಷ್ಕರಣೆಯ ಕೆಲಸದಲ್ಲೋ ತೊಡಗಿಕೊಂಡಿರುತ್ತಿದ್ದರು. ನಾಟಕದಲ್ಲಿ ವಿಶೇಷ ಆಸಕ್ತಿಯಿದ್ದುದರಿಂದ ನಾಟಕಶಾಲೆಯ ಎಲ್ಲ ಪ್ರಯೋಗಗಳನ್ನೂ ನೋಡಲು ಅವರು ಬರುತ್ತಿದ್ದರು. ತಮ್ಮ ಕಛೇರಿಗೆ ಕನ್ನಡದ ಹಲವು ವಿದ್ಯಾರ್ಥಿಗಳನ್ನು ಕರೆದೊಯ್ದು ನಿರ್ಭಿಡೆಯ ತಮ್ಮ ಅಭಿಪ್ರಾಯಗಳನ್ನು ಹೇಳುತ್ತಿದ್ದರು. ಒತ್ತಾಯದಿಂದ ಮನೆಗೆ ಕರೆದೊಯ್ದು ಊಟ ಹಾಕುತ್ತಿದ್ದರು, ಕಾವ್ಯ ಓದುತ್ತಿದ್ದರು, ಶಾಸ್ತ್ರೀಯ ಸಂಗೀತದ ಧ್ವನಿಸುರುಳಿಗಳನ್ನು ಕೇಳಿಸುತ್ತಿದ್ದರು, ಕವಿ-ಕಲಾವಿದರ ತಮ್ಮ ಒಡನಾಟದ ಕತೆಗಳನ್ನೆಲ್ಲ ಯಾವುದೇ ಮುಚ್ಚುಮರೆಯಿಲ್ಲದೆ, ಸ್ವಂತದ ಇಷ್ಟಾನಿಷ್ಟಗಳ ಸ್ಪಷ್ಟ ವ್ಯಾಖ್ಯಾನಗಳ ಸಮೇತ, ವರ್ಣಿಸುತ್ತಿದ್ದರು. ನನ್ನ ತಂದೆಗಿಂತಲೂ ವಯಸ್ಸಾದ ಇವರು ನನ್ನನ್ನು ಹೀಗೆ ಸ್ನೇಹಿತನಂತೆ ನೋಡುತ್ತಾರಲ್ಲ – ಎಂದು ಆಗ ನನಗೆ ಅಚ್ಚರಿಯಾಗಿತ್ತು. ಆದರೆ, ಆಮೇಲೆ ಗೊತ್ತಾಗುತ್ತ ಬಂತು – ಬಾಲುರಾಯರ ಇಂಥ ಬಳಗ ಬಹು ದೊಡ್ಡದಾಗಿತ್ತು. ಬೇಂದ್ರೆ, ಶಿವರಾಮ ಕಾರಂತ, ಅಡಿಗರಿಂದ ಆರಂಭ ಮಾಡಿ ಅನಂತಮೂರ್ತಿ, ಬಿ.ವಿ.ಕಾರಂತರನ್ನೂ ಒಳಗೊಂಡು ಜಯಂತ ಕಾಯ್ಕಿಣಿಯವರೆಗೆ ಹಲವು ವಯೋಮಾನದ ಲೇಖಕರೊಂದಿಗೆ ಸಮಾನಸ್ಕಂಧರಾಗಿ ವ್ಯವಹಾರ ನಡೆಸುವ ವ್ಯಾಪ್ತಿ ಅವರಿಗಿತ್ತು.

ಕನ್ನಡದಲ್ಲಿ ನವೋದಯ ಮತ್ತು ನವ್ಯಗಳೆರಡೂ ಕಡೆ ಪಾಲ್ಗೊಂಡ ಲೇಖಕರನ್ನು ಸಮನ್ವಯ ಲೇಖಕರೆಂದೂ ಇವೆರಡೂ ಚಳುವಳಿಗಳ ನಡುವಿನ ಸೇತುವೆಯೆಂದೂ ವರ್ಣಿಸುವ ರೂಢಿಯಿದೆ. ಆದರೆ ಬಾಲುರಾಯರಿಗೆ ಇಂಥ ಯಾವ ವರ್ಣನೆಯೂ ಸರಿಯಾಗಿ ಹೊಂದುವುದಿಲ್ಲ. ಯಾಕೆಂದರೆ ಬಾಲುರಾಯರು ಇವೆರಡೂ ಮಾರ್ಗದ ಲೇಖಕರೊಡನೆ ಸಹಸ್ಪಂದನದ ಸಂಬಂಧವಿಟ್ಟುಕೊಂಡೂ ಅವರೆಲ್ಲರನ್ನೂ ಕಟುವಾಗಿ

ಟೀಕಿಸಬಲ್ಲ ಎಚ್ಚರವನ್ನೂ ಉಳಿಸಿಕೊಂಡಿದ್ದರು. ಉದಾಹರಣೆಗೆ, ಕನ್ನಡ ಕಾವ್ಯಕ್ಕೆ ಸಂಬಂಧಿಸಿದಂತೆ ಅವರು ಬೇಂದ್ರೆ ಮತ್ತು ಅಡಿಗರ ಬಗ್ಗೆ ಸಮಸಮನಾದ ಪ್ರೀತಿಯನ್ನು ಇಟ್ಟುಕೊಂಡಿದ್ದರು. ಇಬ್ಬರ ಕಾವ್ಯದ ಸಾಲುಗಳೂ ಕವನದ ಸಂದರ್ಭಗಳೂ ಸಂಬಂಧಿಸಿದ ಐತಿಹ್ಯಗಳೂ ಅವರಿಗೆ ತುಂಬ ಪರಿಚಿತವಾಗಿತ್ತು. ಒಮ್ಮೆ ಮಾತ್ರ ಆಪ್ತವಾಗಿ ಅವರು ಅಡಿಗರಿಗಿಂತ ಬೇಂದ್ರೆಯೇ ಹೆಚ್ಚು ಕಾಲ ನಿಲ್ಲುವ ಕವಿ ಎಂದು ಹೇಳಿದ್ದು ನನಗೆ ನೆನಪಿದೆ. ಅದಕ್ಕೆ ಅವರ ನವೋದಯದ ಹಿನ್ನೆಲೆ ಕಾರಣವೋ ಎಂದೂ ಆಗ ನಾನು ಯೋಚಿಸಿದ್ದಿದೆ. ಆದರೆ, ತಟ್ಟನೆ ಅವರು ಆಫ್ರಿಕಾದ ಇತ್ತೀಚಿನ ಒಬ್ಬ ನಾಟಕಕಾರನ ಬಗ್ಗೆ ಅಥವಾ ಜಪಾನಿನ ಸಮಕಾಲೀನ ಕವಿಗಳ ಬಗ್ಗೆ ಉತ್ಸಾಹ ತೋರಿಸಿ ನನ್ನ ಪ್ರಮೇಯವನ್ನು ಬುಡಮೇಲು ಮಾಡುತ್ತಿದ್ದರು. ನಿಜವಾಗಿ, ಬಾಲುರಾಯರಿಗೆ ಸಮಕಾಲೀನ ಲೇಖಕರ ಬಗ್ಗೆ ತುಂಬ ಕುತೂಹಲ ಮತ್ತು ಕಟುವಾದ ವಿಮರ್ಶೆಯ ಅಭಿಪ್ರಾಯಗಳೂ ಒಟ್ಟಿಗೇ ಇದ್ದವು. ಈಚೆಗೆ ಅವರು ತಮ್ಮ ಹೆಂಡತಿಯ ಅಜ್ಜ ಬಿ.ಎಂ.ಶ್ರೀ ಅವರ ಹೆಸರಿನಲ್ಲಿ ಆರಂಭಿಸಿದ ಒಂದು ಪ್ರಶಸ್ತಿಯು ಕನ್ನಡದಲ್ಲಿ ಆಯಾ ವರ್ಷ ತಮ್ಮ ಮೊದಲ ಕವನ ಸಂಕಲನವನ್ನು ಪ್ರಕಟಿಸಿದ ಅತ್ಯುತ್ತಮ ಕವಿಗೆ ಮೀಸಲಾಗಿದೆ ಎಂಬುದನ್ನು ನಾವಿಲ್ಲಿ ನೆನಪಿಸಿಕೊಳ್ಳಬಹುದು.

ಲೇಖಕರೊಂದಿಗಿನ ಸಂಪರ್ಕದಲ್ಲಿ ಬಹುತ್ವ ಇರುವ ಹಾಗೆಯೇ ಬಾಲುರಾವ್ ಅವರ ಬರವಣಿಗೆಯ ಸಮೂಹದಲ್ಲೂ ವಿಶಿಷ್ಟವಾದೊಂದು ಬಹುತ್ವವಿದೆ. ಬರವಣಿಗೆಯ ಹಲವಾರು ಕ್ಷೇತ್ರಗಳಲ್ಲಿ ಸಮರ್ಥವಾಗಿ ಕೆಲಸ ಮಾಡಿರುವ ಅವರು, ನನಗೆ ಗೊತ್ತಿರುವ ಪ್ರಕಾರ, ತಮ್ಮನ್ನು ಪ್ರಥಮತಃ ಕವಿಯೆಂದು ಗುರುತಿಸಿಕೊಳ್ಳಲು ಬಯಸುತ್ತಿದ್ದರು. ಆದರೆ, ಅವರು ಪ್ರಕಟಿಸಿದ್ದು ನಾಲ್ಕು ಕವನ ಸಂಕಲನಗಳನ್ನು ಮಾತ್ರ; ಅದರಲ್ಲೂ ಎರಡು ಸಂಕಲನಗಳು ಕೇವಲ ನಾಲ್ಕೈದು ಸಾಲಿನ ಚುಟುಕು ಕವಿತೆಗಳನ್ನು ಒಳಗೊಂಡಂಥವು. ತಾನು ಯಾತಕ್ಕೆ ಇಂಥ ಕಿರುಕವಿತೆಗಳನ್ನೇ ಬರೆಯುವ ಮಾರ್ಗವನ್ನು ಆರಿಸಿಕೊಂಡೆ ಎಂಬುದಕ್ಕೆ ಬಾಲುರಾಯರು ತಮ್ಮ 'ನಡೆದದ್ದೇ ದಾರಿ' ಕವನಸಂಕಲನದ ಮುನ್ನುಡಿಯಲ್ಲಿ ಕೆಲವು ಸೂಚನೆಗಳನ್ನು ಕೊಡುತ್ತಾರೆ – ''ಇಂದಿನ ಕನ್ನಡ ಕಾವ್ಯ ಇತ್ತ ವಸ್ತು-ವಿಷಯ, ಅತ್ತ ತಂತ್ರ-ಅಭಿವ್ಯಕ್ತಿ – ಎರಡರಲ್ಲೂ ಅತಿಯಾದ ಗಂಭೀರದೃಷ್ಟಿ ತಾಳಿ, ಏಕಮುಖವಾಗಿ ಸಾಗಿದೆ...... ಕವಿತೆ ಒಟ್ಟು ಬದುಕಿನ ಪ್ರತಿಧ್ವನಿ ಅನ್ನುವುದಾದರೆ ಬದುಕಿನಲ್ಲಿ ಸಲ್ಲುವುದೆಲ್ಲವೂ ಕವಿತೆಯಲ್ಲೂ ಸಲ್ಲಬೇಕು. ಗಂಭೀರ ವಿಷಯಗಳ ಜತೆಗೆ, ಮೇಲ್ನೋಟಕ್ಕೆ ಸಾಧಾರಣ, ಅಲ್ಪ, ಕ್ಷುಲ್ಲಕ ಎಂದು ಅನಿಸುವುದು ಸಹ, ಅದು ಬದುಕಿಗೆ ಸಂಗತವಾದರೆ, ಕಲ್ಪನಾಶೀಲನಾದ ಕವಿಯ ಕೈಯಲ್ಲಿ ಕವಿತೆಯಾಗಿ ಮಾರ್ಪಟ್ಟು ಓದುಗರಿಗೆ ಖುಶಿ



ಕೊಡುವಂತಾಗಬೇಕು.'' ಬಾಲುರಾಯರ ಪ್ರಸಿದ್ಧ ಕಿರುಕವನಗಳ ಸಂಕಲನ 'ಸೂರ್ಯ ಇವನೊಬ್ಬನೇ'ಯ ಸಾಲುಗಳನ್ನು ಓದಿ ಸವಿದ ಯಾರಿಗೂ ಈ ಮಾತಿನ ಸತ್ಯಕ್ಕೆ ಬೇರೆ ಸಮರ್ಥನೆಯನ್ನು ಕೊಡುವ ಅಗತ್ಯವಿಲ್ಲ.

ಬಾಲುರಾಯರ ಒಂದು ನಾಟಕ – 'ಬೆಕ್ಕು ಬಾವಿ' ಕೂಡಾ ಕಾವ್ಯವನ್ನು ಕುರಿತ ಅವರ ಇಂಥ ಧೋರಣೆಯ ಇನ್ನೊಂದು ರೂಪವೆನ್ನುವಂತಿದೆ. ಹಳೆಮೈಸೂರು ಭಾಗದ ಒಂದು ಮನೆಯಲ್ಲಿ ಬೆಕ್ಕೊಂದು ಬಾವಿಗೆ ಬಿದ್ದಿದೆ, ಅದನ್ನು ಹೇಗೆ ತೆಗೆಸಬೇಕೆಂದು ಮನೆಯವರೆಲ್ಲ ಒದ್ದಾಡುತ್ತಿರುವಾಗ ಬಾವಿ ಇಳಿಯುವ ಕೆಲಸದ ಪರಿಚಯವೇ ಇಲ್ಲದಿರುವ ಒಬ್ಬ ತನ್ನ ತುರ್ತು ಅಗತ್ಯಕ್ಕಾಗಿ ಜೀವದ ಹಂಗುತೊರೆದು ಆ ಕೆಲಸ ಮಾಡಿ ಹೋಗುವುದು ಆ ನಾಟಕದ ಕಥೆ. ಮೇಲ್ನೋಟಕ್ಕೆ ಈ ನಾಟಕ ಕೈಲಾಸಮ್ ಕಾಲದಲ್ಲಿ ಬಂದ ಸರಳ ಕೌಟುಂಬಿಕದ ಹಾಗೆ ಕಂಡರೂ ಅಲ್ಲಿ ನಡೆಯುವ 'ಸರಳ-ಕ್ಷುಲ್ಲಕ' ಘಟನೆಯು ಬದುಕಿನ ತುರ್ತು ಮತ್ತು ಛಲಗಳ ಬಗ್ಗೆ ಗಹನವಾದೊಂದು ಜಿಜ್ಞಾಸೆಯ ಕಡೆಗೆ ಬೆಟ್ಟುಮಾಡುವಂತಿದೆ. ಬಾಲುರಾಯರಿಗೆ ಅತ್ಯಂತ ಪ್ರಿಯವಾಗಿದ್ದ ಜಪಾನಿನ ಹಯುಕು ಪದ್ಯಗಳ ಸರಳತೆ ಮತ್ತು ಧ್ಯಾನಸ್ಥಗುಣವನ್ನು ಏಕತ್ರಗೊಳಿಸಿದ ಅನುಭವವನ್ನು ಈ ನಾಟಕ ಬಿಂಬಿಸುವಂತಿದೆ.

ಕಾವ್ಯವನ್ನು ಬಿಟ್ಟರೆ ಬಾಲುರಾಯರ ಪೂರ್ಣ ಆಸಕ್ತಿ ಮತ್ತು ಶ್ರಮ ವ್ಯಯವಾಗಿದ್ದು ಗ್ರಂಥ ಸಂಪಾದನೆ ಮತ್ತು ಅನುವಾದಗಳಲ್ಲಿ. ಉದಾಹರಣೆಗೆ, ೧೯೬೦ರ ದಶಕದಲ್ಲೇ ಬಂದ ಅವರ 'ಷೇಕ್‌ಸ್ಪಿಯರ್‌ಗೆ ನಮಸ್ಕಾರ' ಆ ಮಾದರಿಯ ಕೆಲಸದಲ್ಲಿ ಕನ್ನಡದಲ್ಲಿ ಇದುವರೆಗೂ ಯಾರೂ ಮೀರಲಾಗದ ಎತ್ತರವೊಂದನ್ನು ನಿರ್ಮಿಸಿಕೊಟ್ಟಿದೆ. ಆ ಪುಸ್ತಕದ ಆದಿಯಲ್ಲಿರುವ ಷೇಕ್‌ಸ್ಪಿಯರನ ಪರಿಚಯ ಹೆಚ್ಚಿನ ಇಂಗ್ಲಿಷ್‌ನ ಪುಸ್ತಕಗಳಲ್ಲೂ ಸಿಗದಷ್ಟು ಆಪ್ತವೂ ವ್ಯಾಪಕವೂ ಆಗಿದೆ. ಅನುವಾದಗಳ ಸಂಗ್ರಹ, ನಾಟಕಗಳ ಕಥೆ ಮತ್ತು ಟಿಪ್ಪಣಿಗಳು ಇವತ್ತಿಗೂ ಗ್ರಂಥಸಂಪಾದಕರಿಗೆ ಇರಬೇಕಾದ ಶಿಸ್ತುಗಳಿಗೆ ಆದರ್ಶ ಉದಾಹರಣೆಗಳೆಂಬಂತಿವೆ. ಬಾಲುರಾವ್ ಅವರು ಬೆನ್ನುಹತ್ತಿ ಬರೆಸಿಕೊಂಡ ಆರ್.ಎಸ್.ನಾಯ್ಡು ಅವರ ರೇಖಾಚಿತ್ರಗಳು ಮತ್ತು ಬಾಲುರಾಯರೇ ಸ್ವತಃ ಮಾಡಿದ ಮುದ್ರಣವಿನ್ಯಾಸಗಳು ಈ ಪುಸ್ತಕಕ್ಕೆ ಒಂದು ಸಂಗ್ರಹಣಮೌಲ್ಯವನ್ನು ತಂದುಕೊಟ್ಟಿವೆ. ಈ ಎಲ್ಲ ಗುಣಗಳು ಬಾಲುರಾಯರ ಈಚಿನ ಸಂಪಾದನೆ-ಅನುವಾದಗಳಲ್ಲೂ ಇವೆ. ಬ್ರೆಖ್ಟ್ ಕವಿತೆಗಳ ಅನುವಾದಕ್ಕೆ ಅವರು ಬರೆದ ಮುನ್ನುಡಿ, ಆನಾ ಅಹ್ಮತೋವಾಳ ಸಾಂಸ್ಕೃತಿಕ ಸಂದರ್ಭವನ್ನು ಕುರಿತ ಅವರ ಮುನ್ನುಡಿ – ಇವೆಲ್ಲ ಇಂಥ ಕೆಲಸ ಮಾಡುವವರಿಗೆ ದಾರಿದೀಪಗಳ ಹಾಗೆ ಇರುವಂಥವು.

ಕಾವ್ಯದ ಅನುವಾದಗಳಿಗೆ ಸಂಬಂಧಿಸಿದಂತೆ ಬಾಲುರಾವ್ ಅವರಲ್ಲಿ ಕಾಣುವ ಒಂದು ಹಠ ತುಂಬ ಅಪರೂಪದ್ದು ಮತ್ತು ಮಹತ್ವದ್ದು. ಅನ್ಯಭಾಷೆಯಿಂದ ಕಾವ್ಯವನ್ನು ಅನುವಾದಿಸುವಾಗ ಸಾಧ್ಯವಾದಷ್ಟೂ ಆ ಮೂಲ ಭಾಷೆಯನ್ನೇ ಕಲಿತು ಅದರ ಸ್ವಾರಸ್ಯಗಳನ್ನೂ ಪದವೈಶಿಷ್ಟ್ಯಗಳನ್ನೂ ಅರಿತು ಭಾಷಾಂತರಿಸಬೇಕು – ಎನ್ನುವುದು ಬಾಲುರಾಯರ ಖಾಯಂ ಧೋರಣೆಯಾಗಿತ್ತು. ಅದಕ್ಕಾಗಿಯೇ ಅವರು ಬಂಗಾಲಿ, ಜರ್ಮನ್, ರಷಿಯನ್ ಮತ್ತು ಪಾರಸಿ ಭಾಷೆಗಳ ಪ್ರಾಥಮಿಕ ಪಾಠಗಳನ್ನು ಮೊದಲು ರೂಢಿಸಿಕೊಂಡು ಆಮೇಲೆ ಸುಭಾಷ್ ಮುಖೋಪಾಧ್ಯಾಯ, ಬ್ರೆಖ್ಟ್, ಅನಾ ಆಹ್ಮತೋವಾ ಮತ್ತು ಉಮರ್ ಖಯ್ಯಾಮರ ಕಾವ್ಯದ ಅನುವಾದಕ್ಕೆ ಕೈಹಾಕಿದರು. ಅಷ್ಟೇ ಅಲ್ಲ ಅವರು ತಮ್ಮ ಅನುವಾದಗಳ ಉದ್ದಕ್ಕೂ ಮೂಲದ ಸಾಲುಗಳ ವಿಶೇಷವನ್ನು ಕುರಿತು ಟಿಪ್ಪಣಿಗಳನ್ನು ಕೊಡುತ್ತಿದ್ದರು ಮತ್ತು ಪುಸ್ತಕಕ್ಕೆ ಅನುಬಂಧವಾಗಿ ಮೂಲದ ಭಾಷೆಯಲ್ಲಿಯೇ ಲಿಪ್ಯಂತರ ಮಾಡಿ ಒಂದೆರಡಾದರೂ ಪದ್ಯಗಳನ್ನು ಕೊಡುವ ಮೂಲಕ ಪ್ರತಿಯೊಬ್ಬ ಓದುಗರೂ ತುಸುವಾದರೂ ಆ ಅನ್ಯಭಾಷೆಗೆ ಮುಖಾಮುಖಿಯಾಗುವಂತೆ ಮಾಡುತ್ತಿದ್ದರು.

ಮುದ್ರಣದ ವಿಷಯದಲ್ಲೂ ಅಷ್ಟೆ. ಯಾವ ಪುಸ್ತಕಕ್ಕೆ ಯಾವ ಮಾದರಿಯ ಚಿತ್ರಗಳನ್ನು ಹಾಕಬೇಕು ಎಂಬುದರ ಬಗ್ಗೆ ಅವರು ಸಾಕಷ್ಟುಕಾಲ ಹುಡುಕಿ ಅಪರೂಪದ ಚಿತ್ರಗಳನ್ನು ತಲಾಶ್ ಮಾಡಿ ಸಮಕಾಲೀನ ಚಿತ್ರಕಾರರಿಂದ ಅದರ ಪ್ರತಿ ಮಾಡಿಸುತ್ತಿದ್ದರು. ಹಸ್ತಪ್ರತಿಯಲ್ಲಿಯೇ ಅಕ್ಷರಗಳ ಅಳತೆ, ರೂಪ, ಸಾಲುಗಳ ನಡುವಿನ ಅಂತರ, ಇಂಡೆಂಟ್, ಪ್ಯಾರಾದ ಸೂಚನೆ – ಮೊದಲಾದ ತಾಂತ್ರಿಕ ವಿವರಗಳನ್ನು ಸ್ಪಷ್ಟವಾಗಿ ನಮೂದಿಸುತ್ತಿದ್ದರು. ಪ್ರತಿ ಪುಸ್ತಕವನ್ನೂ ಎರಡು ಮೂರು ಬಾರಿ ಸ್ವತಃ ಕರಡು ತಿದ್ದಿ ಪ್ರತಿಯೊಂದು ಪುಟವನ್ನೂ ಒಂದು ಕಲಾಕೃತಿಯೆಂಬಂತೆ ವಿಮರ್ಶಿಸಿ ಸೂಚನೆ ಕೊಡುತ್ತಿದ್ದರು. ಇಂಗ್ಲಿಷ್‌ನಲ್ಲಿ ಕಾಪಿ ಎಡಿಟಿಂಗ್ ಎಂದು ಕರೆಯಲಾಗುವ ಹಸ್ತಪ್ರತಿ ಪರಿಷ್ಕರಣೆ ಮತ್ತು ಮುದ್ರಣವಿನ್ಯಾಸಗಳ ಕೆಲಸವನ್ನು ಬಾಲುರಾಯರಷ್ಟು ವ್ಯಾಪಕವಾಗಿ ಮಾಡುವ ಯಾವುದೇ ಪ್ರಕಾಶಕರೂ ಇವತ್ತು ಕನ್ನಡದಲ್ಲಿ ಇಲ್ಲ ಎಂಬ ಮಾತು ಖಂಡಿತವಾಗಿಯೂ ಅತಿಶಯೋಕ್ತಿಯಲ್ಲ.

ವೈಯಕ್ತಿಕವಾಗಿ ನನಗೆ ತುಂಬ ಪ್ರಭಾವ ಬೀರಿದ್ದು ಬಾಲುರಾಯರ ಇಂಥ ಗ್ರಂಥಸಂಪಾದನೆ, ಹಸ್ತಪ್ರತಿ ಪರಿಷ್ಕರಣೆ ಮತ್ತು ಪುಸ್ತಕಮುದ್ರಣಗಳ ಶಿಸ್ತು. ಒಮ್ಮೆ ನಾಟಕಶಾಲೆಯ ಒಂದು ಬ್ರೋಷರ್‌ನ್ನು ನಾನು ವಿನ್ಯಾಸಗೊಳಿಸಬೇಕಾದಾಗ ಅದನ್ನು ಸಂಪೂರ್ಣ ಅವರ ಕಛೇರಿಯಲ್ಲಿ ಕೂತು ಅವರ ಮೇಲ್ವಿಚಾರಣೆಯಲ್ಲೇ ಮಾಡಿದ್ದು, ಆ ಸಂದರ್ಭದಲ್ಲಿ ಅವರು ಅಕ್ಷರಜೋಡಣೆಯಿಂದ ಆರಂಭಿಸಿ ಪುಟವಿನ್ಯಾಸದವರೆಗಿನ



ಎಲ್ಲ ಪ್ರಾಥಮಿಕ ಪಾಠಗಳನ್ನೂ ಹೇಳಿಕೊಟ್ಟಿದ್ದು ಮಾತ್ರವಲ್ಲ, ಮುದ್ರಣದ ವೇಳೆಯಲ್ಲೂ ನನ್ನ ಬೆನ್ನು ಬಿಡದೆ ಮುದ್ರಣಾಲಯಕ್ಕೆ ಬಂದು ನಿಂತುಕೊಂಡಿದ್ದು – ನನಗೆ ಯಾವತ್ತೂ ಮರೆಯಲಾಗದ ಪಾಠಗಳನ್ನು ಕಲಿಸಿದೆ. ಆಮೇಲೂ ಅವರ ಪುಸ್ತಕಗಳ ಪ್ರಕಟಣೆಯ ಸಂದರ್ಭದಲ್ಲಿ ಈ ವಿಷಯದಲ್ಲಿ ಅವರೊಂದಿಗೆ ಹಲವಾರು ಬಾರಿ ನಾವು ಗುದ್ದಾಡಿ ಸುಸ್ತಾಗಿದ್ದೇವೆ; ಜತೆಗೇ ಪ್ರತಿ ಬಾರಿಯೂ ಹೊಸಹೊಸ ಸಂಗತಿಗಳನ್ನು ಕಲಿತುಕೊಂಡಿದ್ದೇವೆ. ಹಾಗಾಗಿ, ಕಂಪ್ಯೂಟರ್ ಮುದ್ರಣದ ಇವತ್ತಿನ ಕಾಲದಲ್ಲಿ, ಪುಟವಿನ್ಯಾಸದ ಪ್ರಾಥಮಿಕ ತಿಳುವಳಿಕೆಯೂ ಇಲ್ಲದ ಹಲವರು ಅಧ್ವಾನದಿಂದ ಮುದ್ರಿಸಿದ ಪುಟಗಳನ್ನು ಹಲವು ಬಣ್ಣಗಳ ಹೊದಿಕೆಯಲ್ಲಿ ಸುತ್ತಿ ಅದನ್ನೇ ಮುದ್ರಣದ ಸೊಗಸು ಎಂದು ತಿಳಿಯುವಾಗೆಲ್ಲ ನನಗೆ ಬಾಲುರಾಯರ ಪಾಠಗಳು ಪ್ರಯೋಜನಕ್ಕೆ ಬರುತ್ತವೆ.

ಬಾಲುರಾಯರ ನಿಧನಕ್ಕೆ ಸಾಂಪ್ರದಾಯಿಕವಾದ ಯಾವ ಮಾತಿನ ಅಲಂಕಾರದ ಶ್ರದ್ಧಾಂಜಲಿಯೂ ಅನವಶ್ಯಕ. ಡಿ.ವಿ.ಜಿ.ಯವರಿಂದ ಆರಿಸಿ ಬಾಲುರಾಯರೇ ತಮ್ಮ ಪುಸ್ತಕಕ್ಕೆ ಹೆಸರು ಕೊಟ್ಟ ಒಂದು ನುಡಿಗಟ್ಟನ್ನೇ ತಿರುಗಿಸಿ ಅವರಿಗೆ ಹೇಳುವುದೇ ಸಮರ್ಪಕವೆಂದು ನನಗನ್ನಿಸುತ್ತದೆ – ಬಾಲುರಾಯರಿಗೆ ನಮಸ್ಕಾರ.

(ಕೃಪೆ: ಪ್ರಜಾವಾಣಿ ಸಾಪ್ತಾಹಿಕ ಪುರವಣಿ)

**ಶಿಶಿರ ಪಯಣ**

ನೀನಾಸಮ್‌ನ ಹಳೆಯ ವಿದ್ಯಾರ್ಥಿಗಳು ಕೂಡಿ ರಚಿಸಿಕೊಂಡ ತಿಪಟೂರಿನ 'ಪ್ರೊಥಿಯೂ' ತಂಡವು ಮೂರು ನಾಟಕಗಳನ್ನು ಸಿದ್ಧಪಡಿಸಿಕೊಂಡು ಇದೇ ಫೆಬ್ರವರಿ-ಮಾರ್ಚಿಯಲ್ಲಿ ಕರ್ನಾಟಕದ ಹಲವು ಕಡೆ ನಾಟಕ ಪ್ರದರ್ಶನಗಳನ್ನು ಕೊಡುವ 'ಶಿಶಿರ ಪಯಣ'ವೆಂಬ ಯೋಜನೆಯನ್ನು ನಡೆಸುತ್ತಿದೆ. ಅದರ ಅಂಗವಾಗಿ ಈ ನಾಟಕಗಳನ್ನು ಪ್ರದರ್ಶಿಸಲಾಗುತ್ತಿದೆ:

೧. **ಧರ್ಮದುರಂತ**, ರಚನೆ : ಎಂ. ಆರ್. ಶ್ರೀನಿವಾಸಮೂರ್ತಿ, ವಿನ್ಯಾಸ, ನಿರ್ದೇಶನ : ರಘುನಂದನ. ೨. **ಚೂರಿಕಟ್ಟೆ ಅರ್ಥಾತ್ ಕಲ್ಯಾಣಪುರ**, ರಚನೆ, ನಿರ್ದೇಶನ : ಅಕ್ಷರ ಕೆ.ವಿ., ವಿನ್ಯಾಸ : ಚನ್ನಕೇಶವ. ೩. **ಮಾಸ್ತಿಕಥೆ – ಮೂರು** : ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರ ವೆಂಕಟಶಾಮಿಯ ಪ್ರಣಯ, ಜೋಗ್ಯೋರ ಅಂಜಪ್ಪನ ಕೋಳಿಕಥೆ, ವೆಂಕಟಿಗನ ಹೆಂಡತಿ – ಕಥೆಗಳ ವಾಚಿಕವಿನ್ಯಾಸ, ನಿರ್ದೇಶನ : ನಟರಾಜ ಹೊನ್ನವಳ್ಳಿ. ೪. **ನಾನು**: ಗೋಪಾಲಕೃಷ್ಣ ಅಡಿಗ ಅವರ ಆಯ್ದ ಕಾವ್ಯ ಭಾಗಗಳನ್ನಾಧರಿಸಿದ ಏಕವ್ಯಕ್ತಿ ರಂಗಪ್ರಸ್ತುತಿ, ಪ್ರಸ್ತುತಿ : ಚನ್ನಕೇಶವ, ಪರಿಕಲ್ಪನೆ : ಅಕ್ಷರ ಕೆ. ವಿ.

# ಭಾರತದಲ್ಲಿ ಹಿಂದುತ್ವವಾದದ ಬೆಳವಣಿಗೆ

ಕೆ. ಫಣಿರಾಜ

*೨೦೦೦ ಡಿಸೆಂ. ೨೪-೨೫ರಂದು ನೀನಾಸಮ್ ಪ್ರತಿಷ್ಠಾನ ಮತ್ತು ಮಲೆನಾಡು ಅಭಿವೃದ್ಧಿ ಪ್ರತಿಷ್ಠಾನಗಳ ಆಶ್ರಯದಲ್ಲಿ ಸಾಗರದ ಎಲ್.ಬಿ. ಕಾಲೇಜಿನಲ್ಲಿ ನಡೆದ 'ಶತಮಾನದ ತಿರುವಿನ ಬಿಕ್ಕಟ್ಟುಗಳು' ಅಧ್ಯಯನ ಶಿಬಿರದಲ್ಲಿ ಮಂಡಿಸಿದ ಪ್ರಬಂಧ*

ನಿಮಗೆ ಕೊಟ್ಟಿರುವ ಕಾರ್ಯಸೂಚಿಯಲ್ಲಿ ನಾನು ''ಭಾರತದಲ್ಲಿ ಕೋಮುವಾದದ ಬೆಳವಣಿಗೆ'' ಎಂಬ ವಿಷಯದ ಬಗ್ಗೆ ಮಾತನಾಡುತ್ತೇನೆ ಎಂದು ಇದೆ. ಅದರಲ್ಲಿ ಸ್ವಲ್ಪ ಬದಲಾವಣೆ ಮಾಡಿಕೊಂಡು ನಾನು ''ಭಾರತದಲ್ಲಿ ಹಿಂದುತ್ವವಾದದ ಬೆಳವಣಿಗೆ'' ಎಂಬ ವಿಷಯದ ಬಗ್ಗೆ ಮಾತನಾಡುತ್ತೇನೆ. ಭಾರತದಲ್ಲಿ ಕೋಮುವಾದದ ಬೆಳವಣಿಗೆಯ ಬಗ್ಗೆ ಪಾಂಡಿತ್ಯಪೂರ್ಣ ವಿಶ್ಲೇಷಣೆ ನಡೆಸುವಾಗ ಮುಸ್ಲಿಮ್ ಕೋಮುವಾದವನ್ನು ಮರೆಯುವ ಹಾಗಿಲ್ಲ – ಮರೆಯಬಾರದು ಎಂದೇ ನನ್ನ ನಂಬಿಕೆ. ಆದರೆ ನನ್ನ ಮಾತುಗಳು ಪಂಡಿತನೊಬ್ಬನ ಮಾತುಗಳಲ್ಲ; ನಾಗರಿಕನೊಬ್ಬನ ಮಾತುಗಳು. ಸಾಮಾನ್ಯ ನಾಗರಿಕರು 'ಎಚ್ಚರದ ಭಂಟ' ರಲ್ಲ; ಪಕ್ಕದ ಮನೆಯವನ ರಾಜಕೀಯ ಒಲವು ಯಾವುದು? ಎಂದು ನಿಗಾವಹಿಸುವ ಜರೂರತ್ತು ನಾಗರಿಕರಿಗೆ ಇರಬೇಕಾಗಿಲ್ಲ. ನಾಗರಿಕರು ತಮ್ಮ ಸಂಸಾರವನ್ನು ಸರಿದೂಗಿಸುವ ವ್ಯವಹಾರ ದಲ್ಲಿಯೇ ಒಂದಲ್ಲ ಒಂದು ಬಗೆಯ – ಅದು ಬಿ.ಜೆ.ಪಿ.ಗೆ ವೋಟು ಹಾಕುವುದೂ ಹೌದು – ರಾಜಕೀಯವನ್ನು ಮೈಗೂಡಿಸಿಕೊಳ್ಳುತ್ತಾರೆ ಎನ್ನುವುದು ಸರಿ. ಆದರೆ ಈ ರಾಜಕೀಯ ನೆರೆಕೆರೆಯವರ ಮೇಲೆ ನಿಮ್ಮ ರಾಜಕೀಯವನ್ನು ದೃಢಪಡಿಸಿ ಎಂದು ಒತ್ತಾಯ ಹೇರುವಂತಹುದು ಅಲ್ಲ. ನಾನು ಕೂಡ ಒಬ್ಬ ನಾಗರಿಕ; ಇವತ್ತು ಹಿಂದುತ್ವವಾದ ನನ್ನ ಮನೆ ಬಾಗಿಲಿಗೆ ಬಂದು 'ಹಿಂದುತ್ವವಾದದ ಬಗ್ಗೆ ನಿನ್ನ ನಿಲುವನ್ನು ದೃಢಪಡಿಸು! ಹಿಂದುತ್ವವನ್ನು ವಿರೋಧಿಸಿದರೆ ನೀನು ದೇಶದ್ರೋಹಿಯಾಗುತ್ತೀಯ' ಎಂದು ಒತ್ತಾಯಮಾಡುತ್ತಿದೆ. ಈ ಬಗೆಯ ಒತ್ತಾಯಕ್ಕೆ ನಾಗರಿಕರು ಪ್ರತಿ ಕ್ರಿಯಿಸುವುದು ಅನಿವಾರ್ಯವಾಗಿದೆ. ಈ ಕಾರಣಕ್ಕಾಗಿಯೇ ಹಿಂದುತ್ವವಾದದ ಕಡೆ ಗಮನಹರಿಸಬೇಕು ಎಂದು – ನಾಗರಿಕನಾಗಿ – ನನಗೆ ಅನ್ನಿಸುತ್ತಿದೆ.

ನನ್ನ ನಿಲುವಿಗೆ ಪೂರಕವಾಗಿ ಕೆಲವು ಅಂಕಿ-ಅಂಶಗಳನ್ನು ಕೊಡುತ್ತೇನೆ. ೧೯೫೪



ರಿಂದ ೧೯೯೩ರ ವರೆಗಿನ ೪೦ ವರ್ಷಗಳಲ್ಲಿ ಭಾರತದಲ್ಲಿ ೧೫,೫೨೪ ಕೋಮು ಗಲಭೆಗಳು ನಡೆದಿವೆ; ಅಂದರೆ ವರ್ಷಕ್ಕೆ ಸರಾಸರಿ ೩೮೮–ದಿನ ಒಂದಕ್ಕೆ, ಒಂದಕ್ಕಿಂತ ಹೆಚ್ಚು – ಗಲಭೆಗಳು (ಬಹುಶಃ ಕರ್ನಾಟಕದಲ್ಲಿ ವ್ಯಕ್ತಿಯೊಬ್ಬ ಎಣಿಸಬಹುದಾದ ಜಾತ್ರೆಗಳಿಗಿಂತ ಹೆಚ್ಚು!). ಈ ಗಲಭೆಗಳಲ್ಲಿ ೧೧,೪೧೫ ಜನ ಪ್ರಾಣ ಕಳೆದುಕೊಂಡಿದ್ದಾರೆ – ವರ್ಷಕ್ಕೆ ಸರಾಸರಿ ೨೮೫; ಇದು ನಾಗರಿಕನೊಬ್ಬ ತನ್ನ ಊರಿನಲ್ಲಿ ಕಾಣಬಹುದಾದ ಮರಣಗಳಿಗಿಂತ ಜಾಸ್ತಿ. ಈ ಅಂಕಿ-ಅಂಶಗಳ ದಶಕವಾರು ವಿಂಗಡಣೆ, ಇನ್ನೂ ಕೆಲವು ಅಂಶಗಳನ್ನು ಸ್ಪಷ್ಟಪಡಿಸುವುದರಿಂದ, ಅದನ್ನು ಸ್ವಲ್ಪ ನೋಡಬಹುದು. ಪ್ರತಿ ದಶಕದಲ್ಲಿ, ಒಂದು ವರ್ಷದಲ್ಲಿ ನಡೆದ ಅತಿಕಡಿಮೆ ಮತ್ತು ಅತಿ ಹೆಚ್ಚು ಗಲಭೆಗಳ ವಿವರ ಹೀಗಿದೆ:

| ದಶಕ | ಅತಿ ಕಡಿಮೆ (ವರ್ಷ) | ಅತಿ ಜಾಸ್ತಿ (ವರ್ಷ) |
|---|---|---|
| ೧೯೫೪-೬೩ | ೨೬ (೧೯೬೦) | ೯೨ (೧೯೬೧) |
| ೧೯೬೪-೭೩ | ೧೩೩(೧೯೬೬) | ೧೦೭೦(೧೯೬೪) |
| ೧೯೭೪-೮೩ | ೧೬೯(೧೯೭೬) | ೫೦೦ (೧೯೮೩) |
| ೧೯೮೪-೯೩ | ೪೭೬(೧೯೮೬) | ೧೯೯೧(೧೯೯೨) |

(ಎಲ್ಲಾ ಅಂಕಿ-ಅಂಶಗಳನ್ನು ಕ್ರಿಷ್ಟೋಫ್ ಜೆಫ್ರೆಲೊಟ್‌ರ ''ದಿ ಹಿಂದು ನ್ಯಾಷನಾಲಿಸ್ಟ್ ಮೂವ್‌ಮೆಂಟ್ ಅಂಡ್ ಇಂಡಿಯನ್ ಪಾಲಿಟಿಕ್ಸ್: ೧೯೨೫- ೧೯೯೦ಸ್'', ಪೆಂಗ್ವಿನ್, ನ್ಯೂದೆಹಲಿ, ೧೯೯೬, ಈ ಪುಸ್ತಕದಿಂದ ತೆಗೆದುಕೊಳ್ಳಲಾಗಿದೆ.)

ದಶಕದಿಂದ ದಶಕಕ್ಕೆ ಗಲಭೆಗಳ ಪ್ರಮಾಣ ಜಾಸ್ತಿಯಾಗುತ್ತಿರುವುದು ಮಾತ್ರವಲ್ಲ, ಒಟ್ಟು ಗಲಭೆಗಳಲ್ಲಿ ಅರ್ಧದಷ್ಟು ೧೯೮೩-೯೩ರ ದಶಕದಲ್ಲಿ ನಡೆದಿವೆ – ಈ ಹತ್ತು ವರ್ಷದಲ್ಲಿಯೇ ರಾಮಜನ್ಮ ಭೂಮಿ ಚಳುವಳಿ ಪ್ರಾರಂಭವಾಗಿ, ಬಾಬ್ರಿ ಮಸೀದಿ ವಿನಾಶ ಮತ್ತು ದೇಶದ ತುಂಬಾ ಕೋಮುಗಲಭೆಗಳಲ್ಲಿ ಕೊನೆಗೊಂಡಿತ್ತು ಎನ್ನುವುದನ್ನು ಗಮನಿಸಬೇಕು. ಈ ಗಲಭೆಗಳಿಗೆ ಕಾರಣಕರ್ತರು ಯಾರು ಎನ್ನುವ ವಿಷಯ ಗುಟ್ಟಾಗಿ ಏನೂ ಉಳಿದಿಲ್ಲ. ಗಲಭೆಯ ಸಾವು-ನೋವುಗಳು ಮುಚ್ಚಿಡಲಾಗದ ಮಟ್ಟ ಮುಟ್ಟಿದಾಗ, ತನಿಖೆ ಮಾಡಲು ಸರ್ಕಾರ ಹೈಕೋರ್ಟ್ ಮುಖ್ಯನ್ಯಾಯಾಧೀಶರ ಅಧ್ಯಕ್ಷತೆಯಲ್ಲಿ ಆಯೋಗಗಳನ್ನು ನಿಯೋಜಿಸುತ್ತದೆ. ಅಂತಹ ಐದು ಆಯೋಗಗಳ ವರದಿ, ಗಲಭೆಗಳಿಗೆ ಸಂಘಪರಿವಾರದವರೆ ಪ್ರಮುಖ ಕಾರಣ ಎಂದು ಮುಲಾಜಿಲ್ಲದೆ ಹೇಳಿವೆ; ಆ ವರದಿಗಳು:

೧. ೧೯೯೨-೯೩ರ ಮುಂಬೈ ಗಲಭೆ – ಶ್ರೀ ಕೃಷ್ಣ ವರದಿ

೨. ೧೯೭೦ರ ಭಿವಂಡಿ ಗಲಭೆ – ಟಿ.ಪಿ. ಮದನ್ ವರದಿ

೩. ೧೯೭೧ರ ತಲ್ಲಿಚ್ಚೇರಿ ಗಲಭೆ – ಜೋಸೆಫ್ ವಿದ್ಯಾಥಿಲ್ ವರದಿ

೪. ೧೯೬೯ರ ಅಹ್ಮದಾಬಾದ್ ಗಲಭೆ – ಜಗಮೋಹನ ರೆಡ್ಡಿ ವರದಿ

೫. ೧೯೮೨ರ ಕನ್ಯಾಕುಮಾರಿ ಗಲಭೆ – ವೇಣುಗೋಪಾಲ್ ವರದಿ

ಈ ವರದಿಗಳು ಏನು ಹೇಳುತ್ತವೆ ಎನ್ನುವುದಕ್ಕೆ ಉದಾಹರಣೆಯಾಗಿ, ಜೋಸೆಫ್ ವಿದ್ಯಾಥಿಲ್ ವರದಿಯ ಈ ಸಾಲುಗಳನ್ನು ನೋಡಬಹುದು. ಇದು ಸರಳವಾದ ಇಂಗ್ಲಿಷ್‌ನಲ್ಲಿ ಇರುವುದರಿಂದ, ಹಾಗೇ ಓದಿಬಿಡುತ್ತೇನೆ:

> In Tellicherry the Hindus and Muslims were living as brothers for centuries. The 'Mopla riots' did not affect the cordial relationship that existed between two communities in Tellicherry. It was only after the RSS and Janasangha setup their units and began activities in Tellicherry that there came a change in the situation. There, anti Muslim propaganda, its reactions on the Muslims who rallied rounded their communal organisation, the Muslim league that championed their cause, and the communal tension that followed prepared the background for disturbances (....) That is what the rioters who attacked the house of Mohammad asked him to do -- "If you want to save your life, you should go round the house three times repeating the words 'Rama, Rama'." Mohammad did that. But you cannot expect 70 million Muslims of India to do that as a condition for maintaining the communal harmony in the country. This attitude of the RSS can only help to compel the Muslims to take shalter under their own communal organisations. ['Damming Verdict', Sabrang communications and Publishers, Mumbai, 1998.]

ವೇಣುಗೋಪಾಲ್ ವರದಿ, ಆರ್.ಎಸ್.ಎಸ್. ಗಲಭೆಗಳನ್ನು ಯೋಜನಬದ್ಧವಾಗಿ ಕಾರ್ಯಗತಗೊಳಿಸುವುದನ್ನು ವಿವರಿಸುತ್ತದೆ; ಶ್ರೀಕೃಷ್ಣ ಮತ್ತು ಜಗಮೋಹನ್‌ರೆಡ್ಡಿ ವರದಿಗಳು ಸಂಘಪರಿವಾರದ ಕೃತ್ಯಗಳನ್ನು ಕಾನೂನು ಪಾಲಕರೇ ಮರೆಮಾಚುವುದರ ಬಗ್ಗೆ ಕಟು ಟೀಕೆ ಮಾಡಿವೆ. ಸಂಘಪರಿವಾರದವರು ಗಲಭೆಗಳ ಹೊಣೆಯನ್ನು ನೇರವಾಗಿ ಯಾವತ್ತೂ ಒಪ್ಪಿಕೊಂಡದ್ದಿಲ್ಲ. ಅವರ ಪ್ರಕಾರ ಗಲಭೆಗಳು, 'ನಿರಂತರ ಅನ್ಯಾಯಕ್ಕೆ ತುತ್ತಾಗಿರುವ ಹಿಂದುಗಳು ತೋರಿಸುವ ಹತಾಶ ಪ್ರತಿಕ್ರಿಯೆ. 'ಹಿಂದುಗಳಿಗೆ ಆಗುತ್ತಿರುವ ಅನ್ಯಾಯ' ಎಂದು ಸಂಘ ಪರಿವಾರದವರು ಪ್ರಚಾರ ಮಾಡುವ ಕೆಲವು ಉದಾಹರಣೆಗಳನ್ನು ಸ್ವಲ್ಪ ನೋಡೋಣ:



೧. ಭಾರತದ ಪ್ರಭುತ್ವ 'ಹಿಂದು'ಗಳನ್ನು ಕಡೆಗಾಣಿಸಿ, ಎಲ್ಲಾ ಸವಲತ್ತುಗಳನ್ನು ಅಲ್ಪಸಂಖ್ಯಾತರ ಮಡಿಲಿಗೆ ಸುರಿಯುತ್ತದೆ ಎನ್ನುವ ಭಾವನೆಯನ್ನು ಸಂಘ ಪರಿವಾರದವರು ಜನಪ್ರಿಯಗೊಳಿಸಿದ್ದಾರೆ. ಅಲ್ಪ ಸಂಖ್ಯಾತರಿಗೆ ಎಷ್ಟು ಸವಲತ್ತುಗಳಿವೆ ಎನ್ನುವುದನ್ನು ಒಂದಿಷ್ಟು ಅಂಕಿ-ಅಂಶಗಳ ಮೂಲಕ ಪರಿಶೀಲಿಸಬಹುದು. ೧೯೯೦ರ ಎನ್.ಎಸ್.ಎಸ್. ಅಂಕಿ ಅಂಶಗಳ ಪ್ರಕಾರ ಸರ್ಕಾರ ಒದಗಿಸುವ ಉದ್ಯೋಗ ಅವಕಾಶಗಳಲ್ಲಿ ಮುಸ್ಲಿಮರ ಪಾಲು (ಆಯಾ ಕ್ಷೇತ್ರಗಳಲ್ಲಿ ಒಟ್ಟು ಉದ್ಯೋಗಿಗಳ ಶೇಕಡವಾರು) ಈ ರೀತಿ ಇದೆ: ಪಿ.ಎ.ಎಸ್. -ಶೇ. ೩.೨೭, ಐ.ಪಿ.ಎಸ್ - ಶೇ. ೨.೭, ಐ. ಎಫ್.ಎಸ್. - ಶೇ. ೩.೩೭, ಕೇಂದ್ರಾಧೀನ ಸೇವೆ - ಶೇ. ೧.೫೬, ಕೇಂದ್ರ ಸರ್ಕಾರಿ ಕಛೇರಿ - ಶೇ. ೪, ಸಾರ್ವಜನಿಕ ಉದ್ಯಮ ಶೇ. ೧೦.೮೫, ರಾಜ್ಯ ಸರ್ಕಾರಿ ಕಛೇರಿ ಶೇ. ೬.೧, ಸಹಕಾರ ಕ್ಷೇತ್ರ - ಶೇ. ೨.೭೬, ಗ್ರಾಮೀಣ ಉದ್ಯೋಗಗಳಲ್ಲಿ ಸೌಲಭ್ಯ - ಶೇ. ೮.೧೪, ಬ್ಯಾಂಕ್ ಸಾಲ - ಶೇ. ೩.೭೩, ಲೈಸೆನ್ಸ್ ಖೋಟ (ವಿಶೇಷವಾಗಿ ಲಾರಿ, ರಿಕ್ಷ) ಶೇ. ೬.೯೭. ಕಳ್ಳರು, ಸ್ಮಗ್ಲರ್‌ಗಳು ಇದಕ್ಕಿಂತ ಜಾಸ್ತಿ ಇರಲಿಕ್ಕಿಲ್ಲ ತಾನೆ!

೨. ಈಗ ಬಿ.ಜೆ.ಪಿ.ಯ ಕೇಂದ್ರ ವಕ್ತಾರರಾಗಿರುವ ವಿಜಯ್‌ಕುಮಾರ್ ಮಲ್ಹೋತ್ರ 'ಭಾರತದಲ್ಲಿ ಹಿಂದುಗಳಾಗಿರುವುದು ಒಂದು ಪಾಪವೇ?' ಎನ್ನುವ ಕಿರುಹೊತ್ತಿಗೆಯನ್ನು ಬರೆದಿದ್ದಾರೆ (ಜಾಗರಣ ಪ್ರಕಾಶನ, ಬೆಂಗಳೂರು); ಈ ಬರಹದಲ್ಲಿ ಸರ್ಕಾರಗಳು ಅಲ್ಪಸಂಖ್ಯಾತರನ್ನು ಓಲೈಸುತ್ತಿರುವ ಪರಿಯನ್ನು ಕೆಲವು ಉದಾಹರಣೆಗಳ ಮೂಲಕ ಅವರು ವಿವರಿಸಿದ್ದಾರೆ. ಒಂದು ಉದಾಹರಣೆ ಹೀಗಿದೆ: ೧೯೮೪ರಲ್ಲಿ ಯು.ಜಿ.ಸಿ. (ವಿಶ್ವವಿದ್ಯಾಲಯ ಅನುದಾನ ಆಯೋಗ) ಒಂದು ಯೋಜನೆಯನ್ನು ತಯಾರಿಸಿತು. ಈ ಯೋಜನೆಯ ಗುರಿ ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ಐ.ಎ.ಎಸ್, ಐ.ಪಿ.ಎಸ್, ಐ.ಎಫ್.ಎಸ್. ಮತ್ತು ಇತರ ಪ್ರತಿಷ್ಠಿತ ಆಡಳಿತಾತ್ಮಕ ಪರೀಕ್ಷೆಗಳಿಗಾಗಿ ವಿಶೇಷ ತರಬೇತಿ ವರ್ಗಗಳನ್ನು ನಡೆಸುವುದು. ಇದಕ್ಕಾಗಿ ಸರ್ಕಾರ ೩೦ ಲಕ್ಷ ರೂಪಾಯಿ ಖರ್ಚು ಮಾಡುತ್ತಿದೆ. ಹಿಂದುಗಳಿಗೆ ಈ ರೀತಿಯ ಸೌಲಭ್ಯವಿಲ್ಲ. 'ಹಿಂದುಗಳಾಗಿ ಹುಟ್ಟುವುದೇ ಪಾಪ ಎಂಬ ಭಾವನೆ ಹಿಂದುಗಳಲ್ಲಿ ಮನೆ ಮಾಡಿದೆ' ಎಂದು ಮಲ್ಹೋತ್ರ ಹೇಳುತ್ತಾರೆ. ಇದೇ ಸೌಲಭ್ಯ ಪರಿಶಿಷ್ಠ ಜಾತಿ ಮತ್ತು ವರ್ಗಗಳ ಅಭ್ಯರ್ಥಿಗಳಿಗೂ ಇದೆ ಎನ್ನುವುದನ್ನು ಮಲ್ಹೋತ್ರ ಒಪ್ಪಿಕೊಳ್ಳುತ್ತಾರೆ. ಅಂದರೆ ಯು.ಜಿ.ಸಿ.ಯ ಯೋಜನೆಯ ಹಿಂದೆ ಇರುವ ತತ್ತ್ವ 'ಪಾಸಿಟಿವ್ ಡಿಸ್‌ಕ್ರಿಮಿನೇಶನ್' ಮತ್ತು 'ಅಫರ್ಮೆಟಿವ್ ಆ್ಯಕ್ಷನ್' – ಸಾಮಾಜಿಕವಾಗಿ ದುಸ್ಥಿತಿಯಲ್ಲಿರುವ ಜಾತಿ, ಸಮುದಾಯಗಳಿಗೆ ಸಮಾಜದಲ್ಲಿ ಮಾನವಂತ ಸ್ಥಾನ ಗಳಿಸಿಕೊಳ್ಳಲಿಕ್ಕೆ ಒಂದು ನೆಲೆ ಒದಗಿಸಿಕೊಡುವ ತತ್ತ್ವ. ಈ ತತ್ತ್ವವನ್ನು , ನಿನ್ನೆ

ಸ್ನೇಹಿತರಾದ ಸದಾನಂದ್, ಒಳ್ಳೆಯ ಉದಾಹರಣೆಯೊಂದಿಗೆ ವಿವರಿಸಿದ್ದಾರೆ. ಈ ತತ್ವವನ್ನು ಭಾರತದ ಉಳ್ಳವರು ಹಾಗೂ ಮೇಲ್ಜಾತಿಗಳ ಜನ ಯಾವತ್ತೂ ವಿರೋಧಿಸುತ್ತಾರೆ. ಸಂಘಪರಿವಾರದವರಿಗೂ ಈ ತತ್ವದ ಬಗ್ಗೆ ಪ್ರೀತಿ ಏನೂ ಇಲ್ಲ. ಮಲ್ಲೊತ್ತ್ರ, ಸಾಮಾಜಿಕ ತತ್ವವನ್ನು ನೇರವಾಗಿ ಎದುರಿಸುವುದಕ್ಕೆ ಬದಲಾಗಿ ಹಿಂದುಗಳನ್ನು ಮುಸ್ಲಿಮರ ವಿರುದ್ಧ ಎತ್ತಿಕಟ್ಟಲು ಪ್ರಯತ್ನಿಸುತ್ತಾರೆ.

೩. ಸಂಘಪರಿವಾರದವರು ಲಾಗಾಯ್ತಿನಿಂದಲೂ ಮುಸ್ಲಿಮ್ ಮತ್ತು ಕ್ರಿಶ್ಚಿಯನ್ನರು ವಿದೇಶಿ ಏಜೆಂಟರು ಎಂದು ಹೇಳುತ್ತಿದ್ದಾರೆ; ಇತ್ತೀಚೆಗಂತೂ, ಪ್ರತಿಯೊಬ್ಬ ಸಾಮಾನ್ಯ ಮುಸ್ಲಿಮನೂ ಐ.ಎಸ್.ಐ. ಏಜೆಂಟ್ ಆಗಿ ಕಾಣತೊಡಗಿದ್ದಾನೆ. ಎಲ್.ಕೆ. ಅದ್ವಾನಿಯವರು ಕೇಂದ್ರ ಗೃಹಮಂತ್ರಿಗಳಾದ ತಕ್ಷಣ, ದೇಶದಲ್ಲಿ ನಡೆಯುತ್ತಿರುವ ಐ.ಎಸ್.ಐ. ಚಟುವಟಿಕೆಗಳ ಬಗ್ಗೆ 'ಶ್ವೇತಪತ್ರ' ಪ್ರಕಟಿಸುವುದಾಗಿ ಹೇಳಿದರು. ಅವರ ಇಂಗಿತ ಏನಾದರೂ ಇರಲಿ, ದೇಶದಲ್ಲಿ ಅಂತಹ ಚಟುವಟಿಕೆಗಳನ್ನು ತನಿಖೆ ಮಾಡಿ ಕಾನೂನು ಬದ್ಧವಾಗಿ ನಿಯಂತ್ರಿಸುವುದು ಅವರ ಕೆಲಸ; ಅಷ್ಟನ್ನು ಒಪ್ಪಿಕೊಳ್ಳೋಣ. ವರ್ಷವಾದರೂ ಶ್ವೇತಪತ್ರ ತಯಾರಾಗಲಿಲ್ಲ. ನಂತರ ಅದ್ವಾನಿ, ಶ್ವೇತಪತ್ರ ಸಾಧ್ಯವಿಲ್ಲ, ಸಂಸತ್ತಿನಲ್ಲಿ ಒಂದು ಹೇಳಿಕೆ ಕೊಡಬಹುದು ಎಂದರು. ಅದೂ ಆಗಲಿಲ್ಲ. ಕೊನೆಗೆ, ಯಾವುದಕ್ಕೂ ಸಾಕ್ಷಿ-ಪುರಾವೆಗಳು ದೊರಕುತ್ತಿಲ್ಲ ಎಂದು ಕೇಂದ್ರದ ಗೃಹ ಮಂತ್ರಿಗಳೇ ಕೈ ಹೊಸೆದುಕೊಂಡರು. ಕೇಂದ್ರದ ಗೃಹಮಂತ್ರಿಗಳ ಸರ್ವಪ್ರಯತ್ನದ ನಂತರವೂ ಐ.ಎಸ್.ಐ. ಚಟುವಟಿಕೆಗಳ ಬಗ್ಗೆ ನಿಚ್ಚಳವಾದ ಚಿತ್ರ ದೊರಕುವುದಿಲ್ಲ ಎಂದಾದರೆ, ಸಂಘಪರಿವಾರದವರು ತಾಕೀತು ಮಾಡುವ ಹಾಗೆ ನಾವು ನೆರೆಮನೆಯ ಮುಸ್ಲಿಮನನ್ನು ಅನುಮಾನದಿಂದ ನೋಡಬೇಕೋ?

ಹಿಂದುತ್ವದ ಕೋಮುವಾದದ ಬಗ್ಗೆ ಯಾಕೆ ಮಾತನಾಡಲು ಇಚ್ಛಿಸುತ್ತೇನೆ ಎಂದು ವಿವರಿಸಲು ಈ ಪ್ರಸ್ತಾವನೆ ಅಗತ್ಯ ಅಂತ ನನಗೆ ಅನ್ನಿಸಿತು. ಈಗ ೧೮೭೦ರ ದಶಕದಿಂದ ೧೯೪೦ರ ದಶಕದವರೆಗಿನ ಹಿಂದುತ್ವದ ಇತಿಹಾಸವನ್ನು ಸಂಕ್ಷಿಪ್ತವಾಗಿ ವಿವರಿಸಲು ಪ್ರಯತ್ನಿಸುತ್ತೇನೆ.

ನಮ್ಮ ಪುಸ್ತಕದಲ್ಲಿ[೧] ಕೋಮುವಾದವನ್ನು ಈ ರೀತಿಯಾಗಿ ಗುರುತಿಸಿದ್ದೇವೆ:

*ರಾಜಕೀಯ ಅಧಿಕಾರಕ್ಕಾಗಿ ಒಂದು ಧರ್ಮದ ಅನುಯಾಯಿಗಳನ್ನು ಇನ್ನೊಂದು ಧರ್ಮದವರ ವಿರುದ್ಧ ಎತ್ತಿಕಟ್ಟುವುದು ಮತ್ತು ಬಹುಸಂಖ್ಯಾತರ ಸಂಸ್ಕೃತಿಗೆ ಅಲ್ಪಸಂಖ್ಯಾತರು ಹೊರಗಿನವರು ಎಂದು ವಾದಿಸಿ ಅವರ ಬಗ್ಗೆ ದ್ವೇಷ ತಿರಸ್ಕಾರಗಳನ್ನು ಬೆಳೆಸುವುದು ಕೋಮುವಾದ.*

ಗ್ಯಾನೇಂದ್ರ ಪಾಂಡೆ, ಕೋಮುವಾದ 'ವಸಾಹತುಶಾಹಿಯಿಂದ ಪಡೆದ ಜ್ಞಾನದ



ಒಂದು ರೂಪ' ಎಂದಿದ್ದಾರೆ. ಅವರ ಪ್ರಕಾರ ಕೋಮುವಾದ ಧರ್ಮಾಧಾರಿತ ಕೋಮುಗಳಿಗೆ ಮಾತ್ರ ಸೀಮಿತವಾದುದಲ್ಲ; ವಸಾಹತುಶಾಹಿ ಮತ್ತು ವಸಾಹತೋತ್ತರ ಕಾಲಘಟ್ಟಗಳಲ್ಲಿ ಕೋಮುವಾದ ಜಾತಿ ಹಾಗೂ ಭಾಷಾಧಾರಿತ ಕೋಮುಗಳ ಅಭಿವ್ಯಕ್ತಿಯೂ ಹೌದು. ಕೋಮು ಯಾವುದೆ ಆಗಿರಲಿ, ಕೋಮುವಾದ ಮತ್ತೊಂದು ಕೋಮಿನವರ ವಿರುದ್ಧ ತನ್ನ ಕೋಮಿನವರನ್ನು ಎತ್ತಿಕಟ್ಟುವ ಮತೀಯ (ideological) ಸಲಕರಣೆ.[೨] ಕೋಮುವಾದಿಗಳ ಶಕ್ತಿ ಎಲ್ಲಾ ವಿರೋಧಿ ಕೋಮಿನವರ ಮೇಲೆ ಕೇಂದ್ರೀಕೃತವಾಗಿರುತ್ತದೆ; ಹೀಗಾಗಿ ಅವರು ಎದುರಾಳಿ ಕೋಮುವಾದಿಗಳ ಪ್ರತಿಬಿಂಬವೇ ಆಗಿರುತ್ತಾರೆ; ಅಥವಾ ಎದುರಾಳಿಯ ರೂಪವನ್ನು ಎಳೆ ಎಳೆಯಾಗಿ ಅನುಕರಿಸುವುದೇ ಕೋಮುವಾದಿಗಳ ವೈಚಾರಿಕ ಜರೂರತ್ತು ಆಗಿರುತ್ತದೆ. ಕೋಮುವಾದಿಗಳ ಕಾರ್ಯಕ್ಷೇತ್ರ ಇಷ್ಟು ಸರಳವೂ, ಸೀಮಿತವೂ ಆಗಿರುವುದರಿಂದ, ಅವರು ಯಾವ ಹೊಸ ವಿಚಾರಗಳನ್ನೂ ಪ್ರತಿಪಾದಿಸುವುದಿಲ್ಲ; ಬದಲಿಗೆ ರೂಢಿಯಲ್ಲಿ ಇರುವ ವಿಚಾರ ಮಾದರಿಗಳಲ್ಲಿ ತಮ್ಮ ಯೋಜನೆಗೆ ಹೊಂದುವಂತಹದ್ದನ್ನು ಎತ್ತಿಕೊಂಡು ತಮ್ಮ ಅನುಕೂಲಕ್ಕೆ ತಕ್ಕ ಹಾಗೆ ವಿಸ್ತರಿಸಿಕೊಳ್ಳುತ್ತಾರೆ ಹಾಗೂ ತಮಗೆ ಫಾಯ್ದೆಯಾಗುವ ರೀತಿಯಲ್ಲಿ ಹರಿತಮಾಡಿಕೊಳ್ಳುತ್ತಾರೆ, ಎಂದು ಸಮಾಜಶಾಸ್ತ್ರಜ್ಞ ಜಾನ್ ಝುವೊಸ್ ಹೇಳುತ್ತಾರೆ.[೩] ಡೆನ್ಮಾರ್ಕಿನ ವಿದ್ವಾಂಸ ಪೀಟರ್ ವ್ಯಾಂಡರ್ ವೀರ್, ದಕ್ಷಿಣ ಏಶಿಯಾದಲ್ಲಿ ಧರ್ಮಾಧಾರಿತ ಕೋಮುವಾದ 'ಧಾರ್ಮಿಕ ರಾಷ್ಟ್ರೀಯವಾದ' ವಾಗಿ ಚಾಲ್ತಿಯಲ್ಲಿ ಇದೆ; ಇದು 'ಸ್ವಯಂತಂತ್ರವಾದಿ ರಾಷ್ಟ್ರೀಯವಾದ' ದ (liberal nationalism) ಒಂದು ಅತಿಯಾದ ರೂಪ ಎನ್ನುತ್ತಾರೆ.[೪] ವ್ಯಾಂಡರ್ ವೀರ್ ಹೇಳುವುದೇನೊ ಸರಿ; ಆದರೆ ಅದು ಅಷ್ಟೇ ಅಲ್ಲ. ದಕ್ಷಿಣ ಏಶಿಯಾದಲ್ಲಿ ಕೋಮುವಾದ, 'ಸ್ವಯಂತಂತ್ರವಾದಿ ರಾಷ್ಟ್ರೀಯತೆ'ಯ ವಿಚಾರಗಳಿಂದ ತಮ್ಮ ಯಜಮಾನಿಕೆಗೆ ಸಂಚಕಾರ ಬರುತ್ತದೆ ಎಂದು ಅರಿತುಕೊಂಡ ಹಿತಾಸಕ್ತಿಗಳು, ಸಮಾಜದ ಎಲ್ಲ ವಲಯಗಳಲ್ಲೂ ತಮ್ಮ ಪ್ರಭಾವವನ್ನು ಗಟ್ಟಿಗೊಳಿಸಲು ಬಳಸುವ ಮತೀಯ ಸಲಕರಣೆ ಎಂದು ಝುವೊಸ್ ವಾದಿಸುತ್ತಾರೆ. ಚಿಂತಕ ಐಜಾಜ್ ಅಹಮದ್ ಈ ವಿಚಾರವನ್ನು ಮತ್ತಷ್ಟು ನಿಚ್ಚಳವಾಗಿ ವಿವರಿಸಿದ್ದಾರೆ. ಭಾರತದಲ್ಲಿ ಪ್ರಭುತ್ವ ಸೆಕ್ಯುಲರ್ ಸಂವಿಧಾನಕ್ಕೆ ಬದ್ಧವಾಗಿದೆ; ಭಾರತದ ಸಮಾಜ ಸೌಹಾರ್ದತೆ ಮತ್ತು ಸಹಿಷ್ಣುತೆಗೆ ಹೆಸರಾದದ್ದು ಎಂದು ಜನಸಾಮಾನ್ಯರೂ ನಂಬುತ್ತಾರೆ; ಆದರೆ ಅಲ್ಪ ಸಂಖ್ಯಾತರ ಮೇಲೆ ನಡೆಯುತ್ತಿರುವ ಹಿಂಸೆಗಳಿಗೆ ಪ್ರಭುತ್ವ ಉತ್ತರದಾಯಿಯಾಗಬೇಕು ಎಂದು ದೊಡ್ಡ ಸಂಖ್ಯೆಯಲ್ಲಿ ಜನ ಯಾಕೆ ಒತ್ತಾಯಿಸುತ್ತಿಲ್ಲ? ಎಂಬ ಸಮಸ್ಯೆಯನ್ನು ಐಜಾಜ್ ಅಹ್ಮದ್ ಪ್ರಸ್ತಾಪಿಸುತ್ತಾರೆ. ಈ ಸಮಸ್ಯೆಗೆ ಅವರು ಕೊಡುವ

ವಿವರಣೆ ಎಂದರೆ: ಭೂಹೀನರು, ಕೆಳಜಾತಿಯ ಜನರು ಮತ್ತು ಹೆಂಗಸರ ಮೇಲೆ ನಡೆಯುವ ಹಿಂಸೆಗಳಿಗೆ ನಮ್ಮಲ್ಲಿ ಸಾಮಾಜಿಕ ಬೆಂಬಲವಿದೆ; ಒಂದು ರೀತಿಯ ಹಿಂಸೆ ಸಹ್ಯವಾಗಬಹುದಾದರೆ ಮತ್ತೊಂದು ರೀತಿಯ ಹಿಂಸೆ ಕೂಡ ಸಹ್ಯವೂ, ಸಮ್ಮತವೂ ಆಗಿಬಿಡುತ್ತದೆ; ಇಂತಹ 'ಕ್ರೌರ್ಯದ ಸಂಸ್ಕೃತಿ'ಯ ಒಳಗೆ ಹಿಂದುತ್ವ ಕೋಮುವಾದ ಕೆಲಸ ಮಾಡುತ್ತಿದೆ; ಈ ಅರ್ಥದಲ್ಲಿ ಕೋಮುವಾದ ಆಸ್ತಿಹೀನರು ಮತ್ತು ಹೆಂಗಸರನ್ನು ತುಳಿಯುವ ರಾಜಕೀಯ-ಸಾಮಾಜಿಕ ಯಜಮಾನಿಕೆಯ ಮುಂದುವರಿಕೆಯೇ ಆಗಿದೆ.[೫] ಭಾರತದ ಮತ್ತೊಬ್ಬ ಪ್ರಭಾವಶಾಲಿ ಚಿಂತಕರಾದ ಆಶಿಶ್‌ನಂದಿ 'ರಾಷ್ಟ್ರೀಯವಾದ'ವೇ ಅನೈತಿಕವಾದದ್ದು ಎಂಬ ನಿಲುವಿನಿಂದ ಸೆಕ್ಯುಲರ್ ಸ್ವಯಂತಂತ್ರವಾದಿ ರಾಷ್ಟ್ರೀಯತೆಯನ್ನೂ ಕಟು ವಿಮರ್ಶೆ ಮಾಡುವವರು. ವಸಾಹತುಶಾಹಿ ಆಳ್ವಿಕೆ ತನ್ನ ಆಳ್ವಿಕೆಯ ಸಮರ್ಥನೆಗಾಗಿ ಬಳಸಿಕೊಳ್ಳುತ್ತಿದ್ದ ಸೆಕ್ಯುಲರ್ ಚಿಂತನೆಗಳಿಗೂ, ಭಾರತದ ಸೆಕ್ಯುಲರ್ ರಾಷ್ಟ್ರೀಯ ಚಳುವಳಿಯ ಚಿಂತನೆಗಳಿಗೂ ಹತ್ತಿರದ ಸಂಬಂಧವಿದೆ ಎಂದು ಆಶಿಶ್‌ನಂದಿ ತಮ್ಮ ಹಲವಾರು ಬರಹಗಳಲ್ಲಿ ವಾದಿಸಿದ್ದಾರೆ. ಆದರೆ ರವೀಂದ್ರನಾಥ ಠಾಕೂರರನ್ನು ಕುರಿತು ಬರೆದ ಪುಸ್ತಕದಲ್ಲಿ, ಭಾರತದ ಸೆಕ್ಯುಲರ್ ರಾಷ್ಟ್ರೀಯ ಚಳುವಳಿ ವಸಾಹತುಶಾಹಿ ವಿರೋಧಿ ಹೋರಾಟದಲ್ಲಿ ಪಶ್ಚಿಮದ ಯಜಮಾನ ವಿಚಾರಗಳಿಗಿಂತ ಭಿನ್ನವಾದ ವೈಚಾರಿಕ ನೆಲೆಗಳನ್ನು ಕಂಡುಕೊಂಡದ್ದು ಹೌದು; ಆದರೆ ತಮ್ಮ ಒಲವು ಇರುವುದು, ಈ ಭಿನ್ನಮತದ ವಿಚಾರಧಾರೆಯೊಳಗೇ ವಿಶಿಷ್ಟ ಭಿನ್ನಮತ ತೋರಿದ ಗಾಂಧಿಜೀ ಮತ್ತು ಠಾಕೂರರ ವಿಚಾರಗಳ ಕಡೆಗೆ ಎಂದು ನಂದಿ ಹೇಳಿದ್ದಾರೆ[೬]; ಅವರ ದೇಶಿಯಚಿಂತನೆ ಮತ್ತು ವಸಾಹತುಪೂರ್ವ ಸಮುದಾಯ ಜೀವನಗಳ ಪರವಾದ ದೃಷ್ಟಿಕೋನದ ಲಂಗರು ಇರುವುದು ಈ ಬಗೆಯ ವಿಚಾರಧಾರೆಗಳಲ್ಲಿ. ಈ ನೆಲೆಯಿಂದಲೇ, ಆಶಿಶ್ ನಂದಿ ತಮ್ಮ ಸಹವರ್ತಿಗಳ ಜೊತೆ ರಾಮಜನ್ಮಭೂಮಿ ಚಳುವಳಿಯ ಅಧ್ಯಯನಮಾಡಿ, ಹಿಂದುತ್ವವಾದಕ್ಕೂ ಸಾಂಪ್ರದಾಯಿಕ ಜೀವನ ವಿಧಾನಗಳಿಗೂ ತೋರಿಕೆಯ ಸಂಬಂಧವೂ ಇಲ್ಲ ಎಂದು ತೋರಿಸಿರುವುದು ಮಾತ್ರವಲ್ಲ, ಹಿಂದುತ್ವವಾದ ಸದರಿ ಜೀವನವಿಧಾನಗಳನ್ನು ಧ್ವಂಸ ಮಾಡುವಂತಹದ್ದು ಎಂದು ಉದಾಹರಣೆ ಸಹಿತ ವಿವರಿಸಿದ್ದಾರೆ.[೭] 'ಹಿಂದುತ್ವ ವಾದ' ಮತ್ತು 'ಹಿಂದು ರಾಷ್ಟ್ರೀಯವಾದ'ಗಳ ಬಗ್ಗೆ ಪಾಂಡಿತ್ಯಪೂರ್ಣ ಅಧ್ಯಯನ ಮಾಡಿರುವ ಕ್ರಿಷ್ಟೋಫ್ ಜೆಫ್ರಲೊಟ್, ಹಿಂದುತ್ವವಾದಿಗಳ ವಿಚಾರ ಮತ್ತು ಕಾರ್ಯತಂತ್ರಗಳನ್ನು 'ದೂಷಣೆ ಮತ್ತು ಅನುಕರಣೆ' ಎಂಬ ಪರಿಕಲ್ಪನೆಯ ಮೂಲಕ ವಿವರಿಸಿದ್ದಾರೆ. ಒಂದು ಕಡೆಯಿಂದ 'ಅನ್ಯಧರ್ಮ'ಗಳ ಜನರ ವಿಚಾರ, ಆಚರಣೆ ಮತ್ತು ನಂಬಿಕೆಗಳನ್ನು ಕ್ಷುದ್ರ, ಅಸಹಿಷ್ಣು, ಆಕ್ರಮಣಕಾರಿ ಎಂದು ದೂಷಿಸುತ್ತಲೇ, ಆ ಧರ್ಮಗಳನ್ನು ನಂಬುವವರ



ಒಗ್ಗಟ್ಟು ಮತ್ತು ಆಂತರಿಕ ಸಂಘಟನೆಗಳನ್ನು ಉತ್ಪ್ರೇಕ್ಷಿಸಿ ಮೆಚ್ಚಿಕೊಳ್ಳುವುದು; ಮತ್ತೊಂದು ಕಡೆಯಿಂದ 'ಹಿಂದು ಧರ್ಮ'ದ ಆಚಾರ-ವಿಚಾರಗಳು ಪ್ರಪಂಚದಲ್ಲಿಯೇ ಅತ್ಯಂತ ಶ್ರೇಷ್ಠ ಎಂದು ಹೊಗಳುತ್ತಲೇ, ನಾವು ನಮ್ಮೊಳಗೆ ಹರಿದು ಹಂಚಿ ಹೋಗಿ, ಶ್ರೇಷ್ಠತೆಯ ಅರಿವಿಲ್ಲದ ದುರ್ಬಲ ಮತ್ತು ಹೇಡಿ ಜನಾಂಗವಾಗಿಬಿಟ್ಟಿದ್ದೇವೆ ಎಂದು ಹಳಹಳಿಸುವುದು; ಅನ್ಯ ಧರ್ಮೀಯರ ರೀತಿಯಲ್ಲಿಯೇ ನಾವು ಪುನರ್ ಸಂಘಟಿತರಾಗದಿದ್ದರೆ, ಅವರು ನಮ್ಮನ್ನು ಹುಟ್ಟಲಿಲ್ಲ ಅನ್ನಿಸಿಬಿಡುತ್ತಾರೆ ಎಂಬ ಭಯಗ್ರಸ್ತ ವಾತಾವರಣವನ್ನು ಕಟ್ಟುವುದು; ಈ ಸ್ಥಿತಿಯಿಂದ ಪಾರಾಗಿ, ವಿರೋಧಿಗಳ ಮೇಲೆ ವಿಜಯಸಾಧಿಸುವ ಸಲುವಾಗಿ ಸೆಮೆಟಿಕ್ ಧರ್ಮಗಳಾದ ಇಸ್ಲಾಮ್ ಮತ್ತು ಕ್ರಿಶ್ಚಿಯನ್ ಧರ್ಮಗಳ ಮಾದರಿಯಲ್ಲಿ 'ಏಕತ್ರ ಹಿಂದು ಧರ್ಮ', 'ಹಿಂದು ಪವಿತ್ರ ಗ್ರಂಥ', 'ಹಿಂದುಗಳಿಗೆ ಅತಿಪವಿತ್ರವಾದ ಸ್ಥಳ'ಗಳನ್ನು ಕಲ್ಪಿಸಿಕೊಳ್ಳುವುದು; ಈ ರೀತಿಯ 'ಕಲ್ಪಿತ ಧರ್ಮ'ದ ಆಧಾರದಲ್ಲಿ, ಜನರನ್ನು ಒಂದೇ ಧರ್ಮ, ಸಂಸ್ಕೃತಿ, ಆಚರಣೆಗಳಲ್ಲಿ ಮಾತ್ರ ಅಚಲನಂಬಿಕೆ ಇಡುವ ಏಕರೂಪಿ ಸಮುದಾಯವನ್ನಾಗಿ ಸಂಘಟಿಸುವ ಕಾರ್ಯಕ್ಕೆ ಚರ್ಚ್, ಉಲೇಮಗಳನ್ನು ಅನುಕರಣೀಯ ಮಾದರಿಗಳನ್ನಾಗಿ ಇಟ್ಟುಕೊಳ್ಳುವುದು – ಇದು ಹಿಂದುತ್ವ ಕೋಮುವಾದದ 'ದೂಷಣೆ ಮತ್ತು ಅನುಕರಣೆ' ಯ ಮಾದರಿ.[೮]

ಇಲ್ಲಿಯೇ ನಾವು ಹಿಂದುತ್ವ ಕೋಮುವಾದಕ್ಕೂ ಮತ್ತು ಧಾರ್ಮಿಕ ಸುಧಾರಣಾ ಚಳುವಳಿಗಳಿಗೂ ಇರುವಂತಹ ವ್ಯತ್ಯಾಸವನ್ನು ಗಮನಿಸಬೇಕು. ಸುಧಾರಣವಾದಿ ಚಳುವಳಿಗಳು ಆಯಾ ಕಾಲದ ಧಾರ್ಮಿಕ ಮತ್ತು ಸಾಮಾಜಿಕ ಕಟ್ಟಳೆಗಳ ಒಳಗೇ ಕೆಳಸ್ತರದ ಜನರಿಗೆ ಮರ್ಯಾದೆಯ ಸ್ಥಾನಮಾನಕ್ಕಾಗಿ ಒತ್ತಾಯಿಸಿದಂತಹವು. ರೂಢಿಯಲ್ಲಿ ಇರುವ ಸಾಮಾಜಿಕ ಚೌಕಟ್ಟನ್ನು ಹಿಗ್ಗಿಸಿ, ಸಾಕಷ್ಟು ಜನರನ್ನು ಒಳಗೊಳ್ಳುವಂತಹ ಪಂಥಗಳನ್ನು ಕಟ್ಟುವುದು ಸುಧಾರಣವಾದಿ ಚಳುವಳಿಗಳಲ್ಲಿ ಕಂಡು ಬರುವ ಮಾದರಿ. ಇಲ್ಲಿ ಜನ ತಿಕ್ಕಾಡುವುದು ತಮ್ಮನ್ನು 'ಹೊರಗೆ' ಇಟ್ಟಿರುವ ಧರ್ಮದ ವಿರುದ್ಧ ; 'ಹೊರಗಿನವರು' 'ಒಳಗೆ' ಬರಬೇಕೆಂದರೆ ಧರ್ಮದ ವ್ಯಾಕರಣ 'ಹೊರಗಿನವರ' ತುರ್ತಿಗೆ ಅನುಗುಣವಾಗಿ ವಿಸ್ತಾರವಾಗಬೇಕು; 'ಹೊರಗಿನವರು' ತಮ್ಮ ಸ್ಥಾನವನ್ನು ಬಿಟ್ಟುಕೊಡದೆ 'ಧರ್ಮ' ದ 'ಒಳಗೆ' ಸೇರುವುದು ಸುಧಾರಣವಾದಿ ಚಳುವಳಿಗಳ ವೈಶಿಷ್ಟ್ಯ. ಈ ಚಳುವಳಿಗಳ ಮೇಲೆ ಅನ್ಯಧರ್ಮಗಳ ಪ್ರಭಾವ ಇರಬಹುದು; ಆದರೆ ಆ ಧರ್ಮಗಳ ಬಗ್ಗೆ ಅಂಜಿಕೆ, ಅಭದ್ರತೆ ಖಂಡಿತ ಕಂಡುಬರುವುದಿಲ್ಲ. ನಮ್ಮ ದೇಹದ ಅಸಮತೋಲನವೆ ರೋಗಕ್ಕೆ ಕಾರಣ, ಮದ್ದು ಕೊಡಬೇಕಾದದ್ದು ನಮ್ಮ ದೇಹಕ್ಕೆ ಎನ್ನುವುದು ಸುಧಾರಣವಾದದ ನಿಲುವು. ಈ

ಚಳುವಳಿಗಳ ವಿಧಾಯಕ ಕಾರ್ಯಕ್ರಮಗಳು ರೂಢಿಯಲ್ಲಿ ಇರುವ ಧರ್ಮಾಚರಣೆಗಳನ್ನು ಮೆತ್ತಗಾಗಿಸಿ, ಒಂದಿಷ್ಟು ಸಮಾನತೆ ತರುವ ಕಡೆಗೆ ದೃಷ್ಟಿ ನೆಟ್ಟುಕೊಂಡಿರುವಂತಹವು. ತಮ್ಮ ಕಾರ್ಯಕ್ರಮಗಳ ಸೋಲಿಗೆ, ತಮ್ಮ ಸಮಾಜದ ಬಿಗು ನಿಲುವು ಮತ್ತು ತಮ್ಮ ವಿಚಾರಗಳಲ್ಲಿ ಇರುವ ಕೊರತೆಯೇ ಕಾರಣ; ಇಂತಹ ಸಂದರ್ಭಗಳಲ್ಲಿ ಕೆಳಸ್ತರದ ಜನ ಅನ್ಯಧರ್ಮಗಳಲ್ಲಿ ಸೆಲೆ ಕಂಡುಕೊಳ್ಳಲು ಇಚ್ಛಿಸಿದರೆ ತಪ್ಪೇನೂ ಇಲ್ಲ ಎನ್ನುವುದು ಸುಧಾರಣವಾದದ ತಾತ್ವಿಕತೆ. ಈ ವಿಷಯ ಪ್ರಸ್ತಾಪಿಸಿದ್ದು ಯಾಕೆಂದರೆ, ಕೋಮುವಾದಿಗಳು ಖ್ಯಾತ ಸುಧಾರಣವಾದಿಗಳ ಮಾತು-ಕೃತಿಗಳನ್ನು ತುಂಡುತುಂತಾಗಿ ತಮ್ಮ ವಾದದ ಸಮರ್ಥನೆಗೆ ಬಳಸಿಕೊಂಡು, ತಾವು ಸುಧಾರಣವಾದಿ ಚಳುವಳಿಗಳ ನಿಜವಾದ ವಾರಸುದಾರರು ಎಂದು ಜನರನ್ನು ನಂಬಿಸುವ ಪ್ರಯತ್ನ ಮಾಡುತ್ತಾರೆ. ಆದರೆ ಇದೆಲ್ಲಾ ತಮ್ಮ ಕಾರ್ಯಾಚರಣೆಗೆ ಜನಸಮ್ಮತಿ ಗಳಿಸಿಕೊಳ್ಳುವ ಕಾರ್ಯತಂತ್ರವೇ ಹೊರತು, ಸುಧಾರಣವಾದ ಮತ್ತು ಕೋಮುವಾದಗಳಿಗೆ ತೋರಿಕೆಯ ಸಂಬಂಧ ಕೂಡ ಇರುವುದಿಲ್ಲ; ಕೋಮುವಾದದಿಂದ ಸುಧಾರಣವಾದಕ್ಕೆ ಸುಲಭವಾದ ಒಳದಾರಿಗಳಿಲ್ಲ. ಇದಕ್ಕೆ ಒಂದು ಉದಾಹರಣೆಯನ್ನು ಕೊಡಬಹುದು. ಆರ್.ಎಸ್.ಎಸ್. ಮಾತ್ರವೇ ಹಿಂದುಗಳ ಹಿತವನ್ನು ನೈಜವಾಗಿ ಕಾಪಾಡುವ ಸಂಘಟನೆ ಎಂದು ವಿವರಿಸುವ ಪತ್ಯ ಒಂದರಲ್ಲಿ ಈ ಸಾಲುಗಳಿವೆ:

> *ಪ್ರಸ್ತುತ ಸನ್ನಿವೇಶದಲ್ಲಿ ಹಿಂದುಗಳು ತಮ್ಮ ಪ್ರಾಣ ಮಾನಗಳ ಸಂರಕ್ಷಣೆಗಾಗಿ ನಿರ್ಭಯವಾಗಿ ಎದ್ದು ನಿಲ್ಲಬೇಕಾದುದು ತೀರ ಅಗತ್ಯ – ಇದು ಡಾ। ಹೆಡಗೆವಾರರ ದೃಢವಾದ ನಿಲುವು. ಈ ವಿಚಾರಗಳಲ್ಲಿ ಅವರ ಮತ್ತು ಗಾಂಧಿಜೀಯವರ ದೃಷ್ಟಿಕೋನಗಳು ಮೇಳವಿಸಿದ್ದು ಒಂದು ಸುಂದರ ಸುಯೋಗ. ತಮ್ಮ ಮೊತ್ತ ಮೊದಲ ದೇಶವ್ಯಾಪ್ತಿಯಾದ ಪ್ರವಾಸದ ನಂತರ ಗಾಂಧಿಜೀ ಬರೆದಿದ್ದ ವಾಕ್ಯ ಇದು: ''ಸರ್ವಸಾಧಾರಣ ಮುಸಲ್ಮಾನನು ಗೂಂಡಾ; ಮತ್ತು ಹಿಂದುವು ಹೇಡಿ; ನನ್ನ ಸ್ವಂತ ಅನುಭವದ ಮಾತು ಇದು. ಹೇಡಿಗಳಿದ್ದೆಡೆ ಗೂಂಡಾಗಳಿರುವುದು ಅನಿವಾರ್ಯ''. ಗಾಂಧಿಜೀಯವರ ಈ ಮಾತು ತುಂಬ ಅರ್ಥಗರ್ಭಿತ. ಮುಸಲ್ಮಾನರ ಆಕ್ರಾಮಕ ಪ್ರವೃತ್ತಿಯನ್ನು ತಡೆಗಟ್ಟಬೇಕಾದರೆ ಹಿಂದುಗಳು ತಮ್ಮ ಪುಕ್ಕಲುತನ ಬಿಡಬೇಕೆಂದು ಹಿಂದುಗಳಿಗೆ ಪರೋಕ್ಷವಾಗಿ ಗಾಂಧಿಜೀ ನೀಡಿದ್ದ ಎಚ್ಚರಿಕೆ ಇದು.*[೬]

ಗಾಂಧಿಜೀಯ ಈ ವಾಕ್ಯ ಯಾವ ಸಂದರ್ಭದ್ದು? ಯಾವ ಪತ್ಯದಲ್ಲಿ ಇದೆ? ಗ್ರಂಥಸೂಚಿ ಯಾವುದು? ಮುಂತಾದ ಯಾವ ವಿಷಯಗಳನ್ನೂ ಲೇಖಕರು ತಿಳಿಸುವುದಿಲ್ಲ. ಈ ತುಂಡು ವಾಕ್ಯಕ್ಕೆ ತಮ್ಮ 'ಪರೋಕ್ಷ' ಅರ್ಥ ಕಲ್ಪಿಸುವುದು ಅವರಿಗೆ ಮುಖ್ಯ. ಗಾಂಧಿಜೀಯ ಬದುಕು ಮತ್ತು ಬರಹಗಳು ಗೌಪ್ಯವಾಗೇನೂ ಇಲ್ಲ. ಬೇಕೆಂದರೆ ಈ 'ಪರೋಕ್ಷ ಎಚ್ಚರ'ದ ಸತ್ಯಾಸತ್ಯೆಗಳನ್ನು ಪರಿಶೀಲಿಸಬಹುದು; ಈ



ತುಂಡು 'ಪರೋಕ್ಷ' ಸೂಚನೆಯ ಎದುರಿಗೆ ಇಡಿ ಇಡಿ 'ಪ್ರತ್ಯಕ್ಷ' ಬರಹಗಳನ್ನು ಸಮರ್ಥನೆಗಾಗಿ ನಿಲ್ಲಿಸಬಹುದು – ಕೆ.ವಿ. ಸುಬ್ಬಣ್ಣ ಬಲು ಚೆಂದದಲ್ಲಿ ಅನುವಾದಿಸಿರುವ 'ಸ್ವರಾಜ್ಯದ ಹಾದಿ ಹೆಜ್ಜೆಗಳು' ಪುಸ್ತಕದಲ್ಲಿಯೇ ಕೋಮುವಾದಿ ವಿಚಾರಗಳ ವಿರುದ್ಧ ಕಡಿಮೆ ಎಂದರೆ ನೂರು quotable quotes ಸಿಗುತ್ತವೆ. ವಿಚಾರ ಅದಲ್ಲ.

ಧಾರ್ಮಿಕ ಸುಧಾರಣವಾದ ಧಾರ್ಮಿಕ ರಾಷ್ಟ್ರೀಯವಾದಕ್ಕೆ ಪ್ರೇರಣೆಯಾಗುವುದು, ಅಲ್ಲಿಂದ ಕೋಮುವಾದಕ್ಕೆ ಸ್ಥಿತ್ಯಂತರ ಹೊಂದುವುದು – ವ್ಯಾಂಡರ್ ವೀರ್ ವಿವರಿಸಿರುವ ಹಾಗೆ – ದಕ್ಷಿಣ ಏಶಿಯಾದಲ್ಲಿ ಕಂಡುಬರುವ ವಿದ್ಯಮಾನವೇನೋ ನಿಜ. ಆದರೆ ಇದು ಸರಳರೇಖೆಯ ಹಾದಿಯಲ್ಲಿ ನಡೆದ ಸ್ಥಿತ್ಯಂತರವಲ್ಲ; ಯಾವುದೇ ಕಾಲಘಟ್ಟದಲ್ಲೂ ಒಂದು ಸ್ಥಿತಿ ಚರಿತ್ರೆಯ ರಂಗದಲ್ಲಿ ತನ್ನ ಪಾತ್ರವನ್ನು ಮುಗಿಸಿ, ಮುಂದಿನ ಸ್ಥಿತಿಗೆ ತನ್ನ ಸಂಪೂರ್ಣ ಸತ್ವವನ್ನು ಧಾರೆ ಎರೆದು ಜಾಗ ಖಾಲಿ ಮಾಡಬೇಕು ಎಂದೇನೂ ಇಲ್ಲ. ಕಳೆದ ೧೨೫ ವರ್ಷಗಳ ಭಾರತದ ಚರಿತ್ರೆಯಲ್ಲಿ ಇದು ಹಲವು ಅನಿರೀಕ್ಷಿತ ತಿರುವುಗಳನ್ನು ಪಡೆದುಕೊಂಡ ಕಥಾನಕ. ಈ ಕಥಾನಕದ ಮೊದಲ ಭಾಗವನ್ನು ಈಗ ಒಂದಿಷ್ಟು ಗಮನಿಸೋಣ.

ಭಾರತದಲ್ಲಿ ಬ್ರಿಟಿಷ್ ವಸಾಹತುಶಾಹಿಯ ಆಳ್ವಿಕೆಯು ಭೂಖಂಡದ ಆಡಳಿತ ಮತ್ತು ಆರ್ಥಿಕ ಉತ್ಪಾದನೆಯ ಮೇಲೆ ತನ್ನ ಯಜಮಾನಿಕೆಯನ್ನು ಸ್ಥಾಪಿಸುವುದರ ಜೊತೆಗೆ ಮತೀಯ (ideological) ಯಜಮಾನಿಕೆಯನ್ನೂ ವಿವಿಧ ಜ್ಞಾನಶಾಖೆಗಳ ಮೂಲಕ ಗಟ್ಟಿ ಮಾಡಿತು. ಭೂಖಂಡದ ಚರಿತ್ರೆಯನ್ನು ಧರ್ಮದ ಆಧಾರದಲ್ಲಿ ವಿಭಜಿಸುವ ನಿರೂಪಣೆ, ಸಂಸ್ಕೃತಿಯ 'ಪೌರಾತ್ಯವಾದಿ' ನಿರ್ವಚನ ಹಾಗೂ ಕೋಮುಗಳ ಸಂಖ್ಯಾಬಲದ ಮೂಲಕ ಸಾಮಾಜಿಕ ಸಂರಚನೆಯ ವಿಶ್ಲೇಷಣೆ – ಇವು ಪ್ರಭಾವಶಾಲಿಯಾದ ಮತೀಯ ಸಲಕರಣೆಗಳಾಗಿದ್ದವು.

ಜೇಮ್ಸ್ ಮಿಲ್‌ರಂತಹ ವಸಾಹತುಶಾಹಿ ಇತಿಹಾಸಕಾರರು ಭಾರತ ಭೂಖಂಡದ ಚರಿತ್ರೆಯನ್ನು ಹಿಂದು, ಮುಸ್ಲಿಮ್ ಮತ್ತು ಬ್ರಟಿಷ್ ಆಳ್ವಿಕೆಗಳಾಗಿ ವಿಭಜಿಸಿ, 'ವಿದೇಶಿ'ಯರಾದ ಮುಸ್ಲಿಮ್ ಅರಸರ ಆಕ್ರಮಣದಿಂದ ಹಿಂದುಗಳ ಸ್ವದೇಶಿ ಆಳ್ವಿಕೆ ಅವನತಿಹೊಂದಿತು; ಬ್ರಿಟಿಷರು, ಮುಸ್ಲಿಮರ ಆಕ್ರಮಣವನ್ನು ತಡೆದು ಹಿಂದುಗಳ ಗೌರವವನ್ನು ಕಾಪಾಡಿದ ನ್ಯಾಯವಂತರು ಎಂದು ನಿರೂಪಿಸಿದರು. ಪೌರಾತ್ಯವಾದಿ ಗಳು (ಓರಿಯಂಟಲಿಸ್ಟರು), ಪ್ರಾಚೀನಯುಗದಲ್ಲಿ ಹಿಂದುಗಳು ಜಗತ್ತಿನಲ್ಲೇ ಶ್ರೇಷ್ಠವಾದ ಸಂಸ್ಕೃತಿಯನ್ನು ಹೊಂದಿದ್ದರು; ನಂತರದ ಕಾಲದಲ್ಲಿ, ಆಂತರಿಕ ಒಡಕು, ಪರಕೀಯ ಸಂಸ್ಕೃತಿಗಳ ಧಾಳಿ ಇವುಗಳ ಫಲವಾಗಿ ತಮ್ಮ ಘನತೆಯ ಲವಲೇಶ ಅರಿವೂ ಇಲ್ಲದ ಕ್ಷುದ್ರರಂತೆ ಬಾಳುತ್ತಿದ್ದಾರೆ; ಆಧುನಿಕ ಜಗತ್ತಿನಲ್ಲಿ ಶ್ರೇಷ್ಠ

ನಾಗರಿಕತೆ ಹೊಂದಿರುವ ತಾವು, ಹಿಂದುಗಳಿಗೆ ಅವರ ಗತವೈಭವದ ಅರಿವು ಮೂಡಿಸುವ ಪವಿತ್ರಕಾರ್ಯದಲ್ಲಿ ತೊಡಗಿದ್ದೇವೆ ಎಂಬ ನಂಬಿಕೆಯಿಂದ ಪ್ರಾಚೀನ ಗ್ರಂಥಗಳ ಸಂಪಾದನೆ ಮತ್ತು ವಿಶ್ಲೇಷಣೆ ನಡೆಸತೊಡಗಿದ್ದರು. ಆಧುನಿಕ ಶಾಲೆ-ಕಾಲೇಜು ಕಲಿತವರ ಮೇಲೆ ಈ ನಮೂನೆಯ ಚರಿತ್ರೆ ಮತ್ತು ಸಾಂಸ್ಕೃತಿಕ ವಾಙ್ಮಯ ಹೆಚ್ಚಿನ ಪ್ರಭಾವ ಬೀರಿತು. ಈ ರೀತಿಯ ಶಿಕ್ಷಣ ಪಡೆದ ಜನರೇ ವಸಾಹತುಶಾಹಿಗೆ ವಿರುದ್ಧವಾಗಿ ವಾಗ್ವಾದಗಳನ್ನು ಕಟ್ಟತೊಡಗಿದರು. ಈ ವಾಗ್ವಾದಗಳು ಮೂರು ಬಗೆಯವಾಗಿದ್ದವು: ೧. ಪುನರುತ್ಥಾನವಾದಿ ವಾಗ್ವಾದ, ೨. ಸ್ವಯಂತಂತ್ರವಾದಿ ವಾಗ್ವಾದ, ೩. ಸಮಾಜವಾದಿ ವಾಗ್ವಾದ. ಅನುಕೂಲಕ್ಕೋಸ್ಕರ ವಾಗ್ವಾದಗಳನ್ನು ಈ ರೀತಿ ಗುರುತಿಸಬಹುದೇ ಹೊರತು, ಅಂದು ಚಾಲ್ತಿಗೆ ಬಂದ ವಾಗ್ವಾದಗಳನ್ನು ಕಟ್ಟುನಿಟ್ಟಾಗಿ ಚೌಕಟ್ಟಿನ ಒಳಗೆ ಕೂಡಿಸಲು ಬರುವುದಿಲ್ಲ; ಗಾಂಧಿಜೀ, ಜ್ಯೋತಿಭಾ ಫುಲೆ, ಅಂಬೇಡ್ಕರ್, ಸೋಶಿಯಲಿಸ್ಟರ ವಾಗ್ವಾದಗಳನ್ನು ಒಂದೇ ವೈಚಾರಿಕಗೂಟಕ್ಕೆ ಕಟ್ಟಿಹಾಕುವುದು ಅಸಾಧ್ಯ. ಸುಶಿಕ್ಷಿತರ ರಾಜಕೀಯ ಚಳುವಳಿಯಾಗಿ ಪ್ರಾರಂಭವಾದ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್‌ನಲ್ಲಿ ಈ ಮೂರು ನಮೂನೆಯ ವಾಗ್ವಾದಗಳು ಭಿನ್ನ ಪ್ರಮಾಣದಲ್ಲಿ ಕಲಸಿಹೋಗಿದ್ದವು. ೧೯೨೦ರ ನಂತರ, ಚಳುವಳಿಗೆ ಸಾಮೂಹಿಕ ಸ್ವರೂಪ ಬಂದಮೇಲೆ ವಾಗ್ವಾದಗಳ ವೈವಿಧ್ಯತೆ ಮತ್ತಷ್ಟು ಹೆಚ್ಚಾಯಿತು ಎಂದೇ ಹೇಳಬಹುದು. ಅದೇನೇ ಇದ್ದರೂ, ಹಿಂದು ರಾಷ್ಟ್ರವಾದ ಹಾಗೂ ಹಿಂದುತ್ವ ಕೋಮುವಾದಗಳಿಗೆ ಬೀಜರೂಪವಾದ ಪುನರುತ್ಥಾನ ವಾದಿ ವಾಗ್ವಾದವನ್ನು ಒಂದಿಷ್ಟು ಗಮನಿಸೋಣ.

೧೮೭೧ರಲ್ಲಿ ನಡೆದ ಭಾರತದ ಪ್ರಥಮ ಜನಗಣತಿಯಲ್ಲಿ ಜನರನ್ನು ಧರ್ಮದ ಆಧಾರದಲ್ಲಿ ವಿಂಗಡಿಸಲಾಯಿತು. ಭೂಖಂಡದ ಜನಜೀವನದ ಎಲ್ಲ ವೈವಿಧ್ಯತೆ ಗಳನ್ನೂ ಇಸ್ತ್ರಿಮಾಡಿ ಜನರನ್ನು ಹಿಂದು, ಮುಸ್ಲಿಮ್, ಕ್ರೈಸ್ತ, ಸಿಖ್, ಭೌದ್ಧ, ಜೈನರೆಂದು ವಿಭಜಿಸಲಾಯಿತು. ಈ ಬಗೆಯ ಜನಗಣತಿಯ ಫಲವಾಗಿ 'ಹಿಂದುಗಳು' ಸಾಮಾನ್ಯ ಗುಣಲಕ್ಷಣಗಳನ್ನುಳ್ಳ – ಒಂದೇ 'ಧರ್ಮ'ವನ್ನು ನಂಬುವ – ಬಹುಸಂಖ್ಯಾತ ಜನವರ್ಗವೆಂಬ ಪರಿಕಲ್ಪನೆ ಚಾಲ್ತಿಗೆ ಬಂತು. ಈ ನಮೂನೆಯ ಸಾಮಾಜಿಕಕಸಿಯ ಪ್ರಭಾವದಲ್ಲಿ ಪಂಜಾಬ್‌ನ ದಯಾನಂದ ಸರಸ್ವತಿ 'ಆರ್ಯ ಸಮಾಜ' ಚಳುವಳಿಯನ್ನು ಪ್ರಾರಂಭಿಸಿದರು.

ದಯಾನಂದ ಸರಸ್ವತಿ, ಬ್ರಿಟಿಷರು ಶಕ್ತಿಶಾಲಿ ಪ್ರಭುತ್ವ ಸ್ಥಾಪಿಸಲು ಕಾರಣ ಅವರು 'ಒಂದು ಧರ್ಮ' ಮತ್ತು 'ಒಂದು ಸಂಸ್ಕೃತಿ'ಯ ಆಧಾರದಲ್ಲಿ ದಕ್ಷ, ಸಕ್ಷಮ ರಾಷ್ಟ್ರವಾಗಿರುವುದು ಎಂದು ಬಲವಾಗಿ ನಂಬಿದ್ದರು. 'ಬಹುಸಂಖ್ಯಾತ' ಹಿಂದುಗಳ



ಮೇಲೆ ಬ್ರಿಟಿಷರು ಹಿಡಿತ ಹೊಂದಲು ಸಾಧ್ಯವಾಗಿರುವುದು ಹಿಂದುಗಳು ದುರ್ಬಲರಾಗಿರುವುದರಿಂದ; ದೌರ್ಬಲ್ಯಕ್ಕೆ ಕಾರಣ ಹಿಂದುಗಳು ಜಾತಿ-ಉಪಜಾತಿಗಳ ಆಧಾರದಲ್ಲಿ ನೂರಾರು ನಂಬಿಕೆ-ಆಚರಣೆಗಳಲ್ಲಿ ಹಂಚಿ ಹೋಗಿರುವುದು; ಇದು ಪುರಾತನ 'ಹಿಂದು ಸತ್ವ'ಕ್ಕೆ ವ್ಯತಿರಿಕ್ತವಾದದ್ದು; ಪುರಾತನ ಕಾಲದ ಆರ್ಯರು, ಟಿಬೆಟ್‌ನ ಪರ್ವತ ಶ್ರೇಣಿಗಳಲ್ಲಿ ನಿರಾಕಾರಿ ದೇವರ ಜೊತೆ ಜ್ಞಾನಾನುಸಂಧಾನ ನಡೆಸಿ, ವೇದಗಳ ಜ್ಞಾನಪಡೆದು, ಪ್ರಸ್ಥಭೂಮಿಗೆ ಇಳಿದುಬಂದು ಜನಜೀವನ ಪ್ರಾರಂಭಿಸಿ ದರು; ಆಗ ಮೂರ್ತಿಪೂಜೆ ಮತ್ತು ಜಾತಿಪದ್ಧತಿಗಳು ಇರಲಿಲ್ಲ; ಸಾಮಾಜಿಕ ಶ್ರಮವನ್ನು ವರ್ಣಾಶ್ರಮದ ಆಧಾರದಲ್ಲಿ ವಿಭಜಿಸಿಕೊಂಡು ಆರ್ಯರು ಒಂದು ಸಕ್ಷಮ ಸಮಾಜವನ್ನು ಕಟ್ಟಿದರು; ಆ ಸಮಾಜದಲ್ಲಿ ವಾಸಿಸುವ ಜನರು ಒಂದೇ ಧರ್ಮ ಮತ್ತು ಸಂಸ್ಕೃತಿಗೆ ಸೇರಿದವರಾಗಿದ್ದರಿಂದ 'ಒಂದು ರಾಷ್ಟ್ರ'ವಾಗಿದ್ದರು; ನಂತರದ ಶತಮಾನಗಳಲ್ಲಿ ಮೂರ್ತಿಪೂಜೆ, ಜಾತಿಪದ್ಧತಿಗಳು ಶುರುವಾಗಿ ಆರ್ಯಧರ್ಮ ಹರಿದು ಹಂಚಿ ಕ್ಷುದ್ರ 'ಹಿಂದು ಧರ್ಮ' ದ ರೂಪ ಪಡೆಯಿತು; ನಮ್ಮ ಇಂದಿನ ಸ್ಥಿತಿಗೆ ಅಸಂಖ್ಯಾತ ವಿಭಜನೆಯನ್ನು ಪ್ರತಿಪಾದಿಸುವ ಹಿಂದುಧರ್ಮವೇ ಕಾರಣ; ನಾವು ವೇದಕಾಲದ ಆರ್ಯರ ಧರ್ಮ ಮತ್ತು ಸಂಸ್ಕೃತಿಗಳಿಗೆ ಮರಳುವ ಮೂಲಕ ಪುನಃ ಸಶಕ್ತ ರಾಷ್ಟ್ರವಾಗಬೇಕು ಎನ್ನುವುದು ದಯಾನಂದರ ವಿಚಾರಗಳ ಸಾರ. ಸ್ಪಷ್ಟವಾಗಿ ಇದು ಕ್ರಿಶ್ಚಿಯನ್ ಧರ್ಮಕ್ಕೆ ಸರಿಸಾಟಿಯಾಗಬಲ್ಲ ಹಿಂದುಧರ್ಮವನ್ನು ನಿರೂಪಿಸುವ ಪ್ರಯತ್ನವಾಗಿತ್ತು. ವ್ಯಕ್ತಿಯೊಬ್ಬ ಹುಟ್ಟುತ್ತಲೆ ವರ್ಣವನ್ನು ಕಟ್ಟಿಕೊಂಡು ಬರುವುದಿಲ್ಲ; ಸಾಧನೆಗೆ ಅನುಗುಣವಾಗಿ ಸಮಾಜದಲ್ಲಿ ಅವನ ವರ್ಣ ನಿರ್ಣಯವಾಗುತ್ತದೆ; ಜೀವನದಲ್ಲಿ ಆದರ್ಶ ಸಂಸ್ಕಾರ ಮತ್ತು ಜ್ಞಾನಗಳನ್ನು ಪಡೆದವನು ಉನ್ನತ ವರ್ಣಕ್ಕೆ ಅರ್ಹನಾಗುತ್ತಾನೆ ಎಂದು ದಯಾನಂದರು ವಾದಿಸಿದರು. ಈ ರೀತಿಯ ವರ್ಣಾಂತರಗಳನ್ನು ಉತ್ತೇಜಿಸುವ ಸಲುವಾಗಿ ಅವರು 'ಶುದ್ಧಿ' ಎನ್ನುವ ಆಚರಣೆಯನ್ನು ಜಾರಿಗೆ ತಂದರು. ಅವರ ಆದರ್ಶ ಸಂಸ್ಕಾರ ಮತ್ತು ಸಂಸ್ಕೃತಿಗಳು ವೈದಿಕ ಧರ್ಮದವಾಗಿದ್ದವು. ಪಂಜಾಬ್ ಮತ್ತು ಸಿಂಧ್ ಪ್ರಾಂತ್ಯಗಳಲ್ಲಿ ಆರ್ಯಸಮಾಜ ಚಳುವಳಿ ಪ್ರಭಾವಶಾಲಿಯಾಗಿ ಬೆಳೆಯಿತು. ೧೮೮೧ರ ಜನಗಣತಿಯಲ್ಲಿ ಆರ್ಯಸಮಾಜಕ್ಕೆ ಸೇರಿದವರು ತಮ್ಮನ್ನು ಹಿಂದುಗಳು ಎಂದಲ್ಲದೆ 'ಆರ್ಯರು' ಎಂದು ಗುರುತಿಸಿಕೊಳ್ಳಬೇಕು ಎನ್ನುವ ಪ್ರಚಾರವೂ ಸಾಕಷ್ಟು ಯಶಸ್ವಿಯಾಯಿತು. ಆರ್ಯಸಮಾಜದವರು ಹಲವಾರು ಸಂಘಸಂಸ್ಥೆಗಳನ್ನು ಕಟ್ಟಿದರು; ಇವುಗಳಲ್ಲಿ ತುಂಬಾ ಪ್ರತಿಷ್ಠಿತವಾಗಿ ಬೆಳೆದದ್ದು 'ಆಂಗ್ಲೋವೇದಿಕ್' ಕಾಲೇಜುಗಳು (ಈ ಕಾಲೇಜುಗಳೇ ೧೯೩೦ರ ದಶಕದಲ್ಲಿ ಆರ್.ಎಸ್.ಎಸ್.

ಚಟುವಟಿಕೆಗಳಿಗೆ ಫಲವತ್ತು ನೆಲ ಒದಗಿಸಿದವು). ಪಂಜಾಬ್ ಪ್ರಾಂತ್ಯದ ಮೇಲ್ಜಾತಿ ಮತ್ತು ಮೇಲ್ವರ್ಗದವರು ಆರ್ಯಸಮಾಜದ ಬೆಂಬಲಿಗರಾಗಿದ್ದರು. ಇವರಲ್ಲಿ ಲಾಲ್‌ಚಂದ್ ಮತ್ತು ಲಾಲ ಲಜಪತ್‌ರಾಯ್ ಪ್ರಮುಖರು.

೧೮೮೦-೧೯೦೦ ರವರೆಗೆ ಆರ್ಯಸಮಾಜದವರು ಏಕರೂಪಿ ಧರ್ಮ ಮತ್ತು ಸಾಂಸ್ಕೃತಿಕ ಆಚರಣೆಗಳನ್ನು ಸಂಘಟಿಸುವುದರಲ್ಲಿ ಆಸಕ್ತರಾಗಿದ್ದರೆ ಹೊರತು, ಮತ್ತೊಂದು ಧರ್ಮದ 'ಆಕ್ರಮಣಕಾರಿ ಶಕ್ತಿ'ಯ ಎದುರಾಗಿ ಧಾರ್ಮಿಕ ರಾಷ್ಟ್ರದ ತುರ್ತನ್ನು ಪ್ರತಿಪಾದಿಸುತ್ತಿರಲಿಲ್ಲ. ಈ ಅವಧಿಯಲ್ಲಿ ರಾಷ್ಟ್ರದ ಪರಿಕಲ್ಪನೆಗೆ ಧಾರ್ಮಿಕ ರೂಪವನ್ನು, ರಾಜಕೀಯದಲ್ಲಿ ಧಾರ್ಮಿಕ ಸಂಕೇತಗಳನ್ನು ರೂಢಿಸುವ ಪ್ರಾಥಮಿಕ ಕಾರ್ಯದಲ್ಲಿ ತೊಡಗಿದ್ದವರು ಬಾಲಗಂಗಾಧರ ತಿಲಕರು. ತಿಲಕರು ವೈದಿಕ ಧರ್ಮ ಮತ್ತು ಸಂಪ್ರದಾಯಗಳ ಪ್ರಬಲ ಪ್ರತಿಪಾದಕರಾಗಿದ್ದರು. ತಮ್ಮ ಸೆರೆಮನೆವಾಸದ ಸಮಯದಲ್ಲಿ ತಿಲಕರು, ಆರ್ಯರು ಈ ದೇಶದ ಮೂಲ ನಿವಾಸಿಗಳು ಮತ್ತು ವೈದಿಕಧರ್ಮ ರಾಷ್ಟ್ರೀಯ ಧರ್ಮವಾಗುವ ಅರ್ಹತೆಯುಳ್ಳದ್ದು ಎಂದು ವಿಜ್ಞಾನ ಮತ್ತು ತತ್ವಶಾಸ್ತ್ರಗಳ ಆಧಾರದಲ್ಲಿ ನಿರೂಪಿಸುವ ಪ್ರಯತ್ನದಲ್ಲಿ ತೊಡಗಿದ್ದರು. ಅವರು ಭಗವದ್ಗೀತೆ ಹಿಂದುಗಳ 'ಏಕೈಕ ಪವಿತ್ರ ಗ್ರಂಥ' ವಾಗುವ ಅರ್ಹತೆಯುಳ್ಳದ್ದು ಎಂದು ಕೂಡ ವಾದಿಸುತ್ತಿದ್ದರು. ಗಣೇಶೋತ್ಸವ, ಶಿವಾಜಿಯ ಪೀಠಾರೋಹಣ ಉತ್ಸವಗಳನ್ನು ರಾಜಕೀಯ ಸಂಘಟನೆಗೆ ತಿಲಕರು ಬಳಸಿದರು; ಈ ಕಾರ್ಯಕ್ರಮಗಳಿಗೆ ಅಪಾರ ಜನಬೆಂಬಲ ದೊರಕಿತ್ತು. ಈ ಕಾರ್ಯಕ್ರಮಗಳು ರಾಷ್ಟ್ರೀಯ ಚಳುವಳಿಯನ್ನು ಸುಶಿಕ್ಷಿತ ಜನರ ಸೀಮಿತ ರಾಜಕೀಯದಿಂದ ಬಿಡಿಸಿ, ಜನಸಾಮಾನ್ಯರ ಆಂದೋಲನ ವಾಗಿಸುವ ಪ್ರಯತ್ನ ಎಂದು ತಿಲಕ್ ಸಮರ್ಥಿಸಿಕೊಂಡರು. ಆದರೆ ತಿಲಕರು ಕೊನೆಯತನಕ ಕಾಂಗ್ರೆಸ್‌ನಲ್ಲಿಯೇ ಇದ್ದರು; ಪ್ರತ್ಯೇಕ ಹಿಂದುರಾಷ್ಟ್ರವಾದಿ ಸಂಘಟನೆಯನ್ನು ಕಟ್ಟುವ ಕೆಲಸವನ್ನು ಅವರು ಮಾಡಲಿಲ್ಲ. ಬಂಗಾಲದ ಅರಬಿಂದೋ ಘೋಷ್ ಸಹ ರಾಷ್ಟ್ರವನ್ನು ಧರ್ಮದ ಆಧಾರದಲ್ಲಿ ನಿರೂಪಿಸುವ ಕೆಲಸ ಮಾಡಿದ್ದರೂ, ಕಾಂಗ್ರೆಸ್‌ಗೆ ಹೊರತಾದ ಪ್ರತ್ಯೇಕ ಸಂಘಟನೆ ಕಟ್ಟಲಿಲ್ಲ (ಅರಬಿಂದೋರ ವಿಚಾರಗಳು ಬಂಗಾಲದಲ್ಲಿ ಉಗ್ರ ರಾಷ್ಟ್ರೀಯವಾದಿ ಧಾರ್ಮಿಕ ಪಂಥಗಳಿಗೆ ಪ್ರೇರಣೆ ನೀಡಿದವು).

೨೦ನೇ ಶತಮಾನದ ಮೊದಲ ದಶಕದಲ್ಲಿ ಹಿಂದುಗಳನ್ನು ರಾಜಕೀಯವಾಗಿ ಸಂಘಟಿಸುವ ಕೆಲಸ ಮಾಡಿದವರು ಪಂಜಾಬಿನ ಆರ್ಯಸಮಾಜದವರು. ಈ ದಶಕದಲ್ಲಿಯೇ ಅವರು ಪಂಜಾಬಿನಲ್ಲಿ 'ಹಿಂದುಸಭಾ' ವನ್ನು ಸಂಘಟಿಸಿದರು. ೧೯೦೯ರಲ್ಲಿ ಬ್ರಿಟಿಷ್ ಆಡಳಿತ ಮುಸ್ಲಿಮರು ಜಾಸ್ತಿ ಸಂಖ್ಯೆಯಲ್ಲಿ ಇದ್ದ ಪಂಜಾಬ್ ಮತ್ತು ಸಿಂಧ್ ಪ್ರಾಂತ್ಯಗಳಲ್ಲಿ ಮುಸ್ಲಿಮರಿಗೆ ಪ್ರತ್ಯೇಕ ಮತದಾನದ ಹಕ್ಕನ್ನು ನೀಡಿತು.



ಇದು ಹಿಂದುಗಳನ್ನು ಮೂಲೆಗುಂಪಾಗಿಸುವ ಧೋರಣೆ ಎಂದು ಭಾವಿಸಿದ ಪಂಜಾಬಿನ ಆರ್ಯಸಮಾಜದವರು 'ಹಿಂದುಗಳ ಹಿತಾಸಕ್ತಿಯನ್ನು (ಮುಸ್ಲಿಮರಿಗೆ ಎದುರಾಗಿ) ಎತ್ತಿ ಹಿಡಿಯುವ ಸಲುವಾಗಿ' 'ಹಿಂದು ಸಭಾ' ಎಂಬ ರಾಜಕೀಯ ಸಂಘಟನೆಯನ್ನು ಕಟ್ಟಿದರು. ಮುಂದೆ ಉತ್ತರದ ಹಲವು ಪ್ರದೇಶಗಳಲ್ಲಿ ಮತ್ತು ಮಹಾರಾಷ್ಟ್ರದಲ್ಲಿ 'ಹಿಂದುಸಭಾ'ಗಳು ಪ್ರಾರಂಭವಾದವು. ೧೯೧೦ರಲ್ಲಿ ಪ್ರತ್ಯೇಕವಾಗಿ ಕಾರ್ಯ ನಿರ್ವಹಿಸುತ್ತಿದ್ದ ಪ್ರಾದೇಶಿಕ 'ಹಿಂದುಸಭಾ'ಗಳನ್ನು ಒಗ್ಗೂಡಿಸಿ 'ಹಿಂದು ಮಹಾಸಭಾ' ವನ್ನು ರಚಿಸಲಾಯಿತು. ಪಂಜಾಬಿನಲ್ಲಿ ಲಾಲ್‌ಚಂದ್ ಮತ್ತು ಲಾಲ ಲಜಪತ್ ರಾಯ್ ಹಾಗೂ ಮಹಾರಾಷ್ಟ್ರದಲ್ಲಿ ಬಿ.ಎಸ್. ಮೂಂಜೆ – ಇವರು ಬಾಲಗಂಗಾಧರ ತಿಲಕರ ಸಹಾಯಕರಾಗಿದ್ದರು – ಹಿಂದು ಮಹಾಸಭಾದ ಮುಂದಾಳುಗಳಾಗಿದ್ದರು. ಇವರು ತಮ್ಮ ಭಾಷಣ ಮತ್ತು ಬರಹಗಳ ಮೂಲಕ ನಿರೂಪಿಸಿದ 'ಹಿಂದು ರಾಷ್ಟ್ರೀಯತೆ'ಯ ಪರಿಕಲ್ಪನೆ, ಮುಸ್ಲಿಮರು ಮತ್ತು ಕ್ರಿಶ್ಚಿಯನರನ್ನು 'ಎದುರಾಳಿ ಆಕ್ರಮಣಕಾರಿ ರಾಷ್ಟ್ರ' ಗಳೆಂದು ಪರಿಗಣಿಸಿ ಕಟ್ಟಿದ ಕೋಮುವಾದಿ ಪರಿಕಲ್ಪನೆ ಯಾಗಿತ್ತು. ೧೯೦೯ರ ಅಕ್ಟೋಬರ್‌ನಲ್ಲಿ ಲಹೋರಿನಲ್ಲಿ ನಡೆದ ಹಿಂದೂ ಮಹಾ ಸಮ್ಮೇಳನದಲ್ಲಿ ಲಾಲ ಲಜಪತ್‌ರಾಯ್ ಮಾಡಿದ ಭಾಷಣದಲ್ಲಿ ಹಿಂದು ರಾಷ್ಟ್ರವನ್ನು ಈ ರೀತಿಯಾಗಿ ವಿವರಿಸಿದ್ದಾರೆ:

> *ಹಿಂದುಗಳು ಆಧುನಿಕ ಅರ್ಥದಲ್ಲಿ ಒಂದು ರಾಷ್ಟ್ರವಾಗಲಾರರು ಎನ್ನುವುದು ಭಾಷೆಯ ಕಣ್ಕಟ್ಟು ಮಾತ್ರ. ಆಧುನಿಕ ಅರ್ಥದಲ್ಲಿ ಒಂದು ರಾಜಕೀಯ ಪದ್ಧತಿಯಡಿ ಜೀವಿಸುವವರೆಲ್ಲ ಒಂದು ರಾಷ್ಟ್ರವಾಗುತ್ತಾರೆ; ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ರಾಷ್ಟ್ರವನ್ನು ಹೀಗೇ ಅರ್ಥೈಸುತ್ತದೆ. ಆದರೆ ರಾಷ್ಟ್ರಕ್ಕೆ ಇರುವುದು ಇದೊಂದೇ ಅರ್ಥವಲ್ಲ. ಜರ್ಮನ್ ಪದ 'ನೇಶನ್' ಪ್ರಭುತ್ವ ಅಥವಾ ರಾಜಕೀಯವಾಗಿ ಸಂಘಟಿತವಾದ ರಾಷ್ಟ್ರ ಎನ್ನುವ ಅರ್ಥಕ್ಕೆ ಕಟ್ಟುಬೀಳುವುದಿಲ್ಲ. ಆ ಭಾಷೆಯಲ್ಲಿ 'ರಾಷ್ಟ್ರ' ಎಂಬ ಪದದ ಅರ್ಥ 'ಜನ'; ಇದು ಸ್ಪಷ್ಟವಾಗಿ ಒಂದು ನಿರ್ದಿಷ್ಟ ನಾಗರಿಕತೆ ಮತ್ತು ಸಂಸ್ಕೃತಿಯನ್ನು ಹೊಂದಿದ ಜನಸಮುದಾಯವನ್ನು ಸೂಚಿಸುತ್ತದೆ. ಈ ಅರ್ಥದಲ್ಲಿ, ತಮ್ಮದೇ ವಿಶಿಷ್ಟ ನಾಗರಿಕತೆಯನ್ನು ಹೊಂದಿರುವ ಒಂದು ರಾಷ್ಟ್ರವಾಗಿದ್ದಾರೆ ಎನ್ನುವುದರಲ್ಲಿ ಸಂದೇಹವೇ ಇಲ್ಲ.*[೧೦]

ಈ ವ್ಯಾಖ್ಯಾನ ಕಾಂಗ್ರೆಸ್‌ನ ಸ್ವಯಂತಂತ್ರವಾದಿ ರಾಷ್ಟ್ರೀಯತೆಯ ನಿರಾಕರಣೆ ಮಾತ್ರವಲ್ಲದೆ, ಹಿಂದುಗಳನ್ನು ಏಕೀಕೃತ ಜನಾಂಗವಾಗಿ ಪರಿಭಾವಿಸುವ ಮತ್ತು ರಾಷ್ಟ್ರವನ್ನು ಜನಾಂಗದ ಜೊತೆ ಸಮೀಕರಿಸುವ ಪ್ರಯತ್ನವಾಗಿತ್ತು. ಈ ವಿಚಾರವೇ ಮುಂದೆ ವಿ.ಡಿ. ಸಾವರ್ಕರ್ ಮತ್ತು ಎಂ.ಎಸ್. ಗೋಲ್ವಾಲ್ಕರರ ರಾಷ್ಟ್ರ ನಿರ್ವಚನಕ್ಕೆ ಬೀಜವಾಯಿತು.

ಹಿಂದು ಮಹಾಸಭಾದ ಮುಂದಾಳುಗಳಿಗೆ ಮಸೀದಿ ಮತ್ತು ಚರ್ಚುಗಳು ಬರೀ ಪ್ರಾರ್ಥನಾ ಕೇಂದ್ರಗಳಾಗಿ ಕಾಣದೆ, ಧಾರ್ಮಿಕ ರಾಷ್ಟ್ರೀಯತೆ ಮತ್ತು ಸಮುದಾಯದ ಐಕ್ಯತೆಯನ್ನು ಉದ್ದೀಪಿಸುವ ಜಾಗಗಳಾಗಿ ಕಂಡವು. ಹಿಂದು ದೇವಾಲಯಗಳು ಜಾತಿ ಶ್ರೇಣೀಕರಣದ ಫಲವಾಗಿ ಎಲ್ಲಾ ಹಿಂದುಗಳನ್ನು ಒಗ್ಗೂಡಿಸುವ ಕೇಂದ್ರಗಳಾಗಲು ಸಾಧ್ಯವಿಲ್ಲ; ಈ ದೌರ್ಬಲ್ಯವನ್ನು ನಿವಾರಿಸಲು ಚರ್ಚ್ ಅಥವಾ ಮಸೀದಿಗಳ ಮಾದರಿಯಲ್ಲಿ ಎಲ್ಲಾ ಜಾತಿಗಳ ಜನರನ್ನು ಒಟ್ಟಿಗೆ ಸೇರಿಸುವ ಕೇಂದ್ರ ಸ್ಥಳಗಳನ್ನು ಹಿಂದುಗಳು ರೂಢಿಸಬೇಕು ಎಂದು ಹಿಂದು ಮಹಾಸಭಾದವರು ಭಾವಿಸಿದರು. ಅಂತಹ ಕೇಂದ್ರಗಳು ಕ್ಷಾತ್ರ ಶಕ್ತಿಯ ಪ್ರದರ್ಶನವೂ ಆಗಬೇಕಿತ್ತು. ಆಗ ಅವರಿಗೆ ಹೊಳೆದದ್ದು ಕುಸ್ತಿ ತಾಲೀಮು ನಡೆಸುವ 'ಅಖಾಡ'ಗಳು. ಪಂಜಾಬಿನ ಶ್ರದ್ಧಾನಂದ ಅಖಾಡಗಳನ್ನು ವಿಸ್ತರಿಸಿ, ಸಾವಿರಾರು ಜನ ಒಟ್ಟಿಗೆ ಸೇರಿ ಪುರಾಣಪಠನ ಮಾಡುವ ಕೇಂದ್ರಗಳನ್ನು ಸ್ಥಾಪಿಸುವ ಯೋಜನೆ ರೂಪಿಸಿದರು; ಈ ಕೇಂದ್ರದ ಆಯಕಟ್ಟಿನ ಸ್ಥಳದಲ್ಲಿ 'ರಾಷ್ಟ್ರಮಾತೆ' ಯ ಮೂರ್ತಿ ಅಥವಾ ಭಾವಚಿತ್ರವಿದ್ದು, ಅದು ಅಲ್ಲಿ ಸೇರುವ ಎಲ್ಲರಲ್ಲಿಯೂ ಭಾವರೋಮಾಂಚನ ಉಂಟುಮಾಡುವಂತಿರಬೇಕು; ಇಂತಹ ಕೇಂದ್ರಗಳನ್ನು 'ರಾಷ್ಟ್ರಮಂದಿರ' ಎಂದು ನಾಮಕರಣ ಮಾಡಬೇಕು ಎಂದು ಅವರು ಸೂಚಿಸಿದರು. ದೆಹಲಿಯಲ್ಲಿ ಒಂದು ರಾಷ್ಟ್ರಮಂದಿರವನ್ನು ಉದ್ಯಮಿ ಜಮುನದಾಸ್ ಬಿರ್ಲಾ ಕಟ್ಟಿಸಿದರು; ಮಹಾರಾಷ್ಟ್ರದ ರತ್ನಗಿರಿಯಲ್ಲಿ ವಿ.ಡಿ. ಸಾವರ್ಕರ್ ಒಂದು ಮಂದಿರ ಕಟ್ಟಿಸಿದರು. ಆದರೆ ಈ ಯೋಜನೆ ದೊಡ್ಡ ಮಟ್ಟದಲ್ಲಿ ಫಲಕಾರಿಯಾಗಲಿಲ್ಲ.

೧೯೨೦ರ ದಶಕದಲ್ಲಿಯೇ ಮಹಾಸಭಾದವರು ಹಿಂದು ದೇವರುಗಳ ಮೆರವಣಿಗೆಯನ್ನು ಅಬ್ಬರದ ವಾದ್ಯಗಳ ಸಹಿತ ನಮಾಜಿನ ವೇಳೆಯಲ್ಲಿ ಮಸೀದಿಗಳಿರುವ ಬೀದಿಗಳಲ್ಲಿ ಕೊಂಡೊಯ್ಯುವ ಪರಿಪಾಠ ಬೆಳೆಸಿದ್ದರು. ಈ ಮೆರವಣಿಗೆಗಳ ಕಾರಣವಾಗಿ ಹಿಂದು-ಮುಸ್ಲಿಮರ ನಡುವೆ ಘರ್ಷಣೆಯಾಗುತ್ತಿತ್ತು. ಹಿಂದುಗಳ ಧಾರ್ಮಿಕ ಉತ್ಸವಗಳನ್ನು ಮುಸಲ್ಮಾನರು ಗೌರವಿಸದೆ ಇರುವುದರಿಂದ ಅಶಾಂತಿಯ ವಾತಾವರಣ ನಿರ್ಮಾಣವಾಗುತ್ತಿದೆ; ತಮ್ಮ ನೆಲದಲ್ಲಿಯೇ ಹಿಂದುಗಳಿಗೆ ಯಾವ ಹಂಗೂ ಇಲ್ಲದೆ ಧಾರ್ಮಿಕ ಆಚರಣೆಗಳನ್ನು ಪಾಲಿಸುವ ಸ್ವಾತಂತ್ರ್ಯ ಇಲ್ಲವಾಗಿದೆ ಎಂಬ ಪ್ರಚಾರವೂ ನಡೆಯುತ್ತಿತ್ತು. ೧೯೨೩ರ ಅಕ್ಟೋಬರ್‌ನಲ್ಲಿ ನಾಗಪುರದ ಗಣೇಶ್‌ಪೇಟೆಯ ಮಸೀದಿಯ ಮುಂದೆ ಗಣಪತಿ ವಿಸರ್ಜನೆ ಮೆರವಣಿಗೆಯನ್ನು ತೆಗೆದುಕೊಂಡು ಹೋಗುವಂತೆ ಸಾರ್ವಜನಿಕರನ್ನು ಸಭಾದವರು ಹುರಿದುಂಬಿಸಿದರು. ಮುಸ್ಲಿಮರು ಜಿಲ್ಲಾ ಮ್ಯಾಜಿಸ್ಟ್ರೇಟರಿಗೆ ದೂರು ಕೊಟ್ಟರು. ಮ್ಯಾಜಿಸ್ಟ್ರೇಟರು ಈ ಮೆರವಣಿಗೆಗಳ ಮೇಲೆ ನಿರ್ಬಂಧ ಹೇರಿದರು. ಇದು ಹಿಂದೂ



ಮಹಾಸಭಾದವರಿಗೆ ವರದಾನವೇ ಆಯ್ತು. ಅವರು ಗಾಂಧಿಜೀ ಅಸಹಕಾರ ಚಳುವಳಿಯ ಆ ಕಾಲದಲ್ಲಿ ಜನಪ್ರಿಯಗೊಳಿಸಿದ್ದ ಸತ್ಯಾಗ್ರಹದ ಮಾದರಿಯನ್ನು ಅನಾಮತ್ತಾಗಿ ಎತ್ತಿಕೊಂಡು, ನಿರ್ಬಂಧವನ್ನು ಉಲ್ಲಂಘಿಸಿ ಮೆರವಣಿಗೆ ಕೊಂಡೊಯ್ಯುವುದು 'ಹಿಂದುಗಳ ಧಾರ್ಮಿಕ ಹಕ್ಕಿನ ಸತ್ಯಾಗ್ರಹ' ಎಂಬ ಪ್ರಚಾರದೊಡನೆ ಮತ್ತಷ್ಟು ಮೆರವಣಿಗೆಗಳನ್ನು ಸಂಘಟಿಸತೊಡಗಿದರು. ಈ ಮೆರವಣಿಗೆಗಳ ನೇತೃತ್ವವನ್ನು ಬಿ.ಎಸ್. ಮೂಂಜೆ, ಕೆ.ಬಿ. ಹೆಡಗೆವಾರ್, ವಿ. ಎಲ್. ಪರಾಂಜಪೆ ಮುಂತಾದ ಮಹಾಸಭಾದ ನಾಯಕರುಗಳು ವಹಿಸುತ್ತಿದ್ದರು. ಹೆಡಗೆವಾರರಂತೂ ನಾಗಪುರದ 'ಮೆರವಣಿಗೆ ನಾಯಕರು' ಎಂಬ ಖ್ಯಾತಿಗಳಿಸಿದ್ದರು. ಮೆರವಣಿಗೆಯಲ್ಲಿ ಭಾಗವಹಿಸಿದವರ ಬಂಧನದಿಂದ ಮಹಾಸಭಾದವರಿಗೆ ಫಾಯ್ದೆಯೇ ಆಯ್ತು; ಹಿಂದುಗಳಲ್ಲಿ ಅಭದ್ರತೆಯ ವಾತಾವರಣ ಮೂಡಿಸಲು ಮತ್ತು ಮುಸ್ಲಿಮರ ವಿರೋಧವನ್ನು ಆಕ್ರಮಣಕಾರಿ ಪ್ರವೃತ್ತಿ ಎಂದು ಉತ್ಪ್ರೇಕ್ಷಿಸಿ ಭಯದ ಫಿಕ್ಸೆಡ್ ಡೆಪಾಸಿಟ್ ಕ್ರೋಢೀಕರಿಸಲು ಈ ಮೆರವಣಿಗೆಗಳು ತುಂಬಾ ಉಪಯುಕ್ತವಾದವು. ಈ ಕಾಲದಲ್ಲಿಯೇ ಕಾಂಗ್ರೆಸ್‌ನ ಪ್ರಭಾವಿ ನಾಯಕರಾಗಿದ್ದ ಮದನಮೋಹನ ಮಾಳವೀಯರಂತಹವರು ಹಿಂದು ಮಹಾಸಭಾದ ಶಾಖೆಗಳನ್ನು ದೇಶದಾದ್ಯಂತ ಸ್ಥಾಪಿಸಲು ಮಹಾಸಭಾದ ನಾಯಕರಿಗೆ ಬಹಿರಂಗ ಬೆಂಬಲ ಸೂಚಿಸಿದರು. ಹಿಂದು ಮಹಾಸಭಾ ಹಿಂದುತ್ವವಾದವನ್ನು ಕೇಂದ್ರವಾಗಿಟ್ಟು ಕೊಂಡು ಸಂಘಟನೆಯ ಜಾಲವನ್ನು ವಿಸ್ತರಿಸುವ ರಾಜಕೀಯ ಕಾರ್ಯಕ್ರಮಗಳನ್ನು ನಿರ್ಧಾರಕವಾಗಿ ರೂಢಿಸಿಕೊಂಡದ್ದು ೧೯೨೦ರ ದಶಕದಲ್ಲಿ. ೧೯೨೫ರಲ್ಲಿ ನಾಗಪುರದಲ್ಲಿ ಬಿ.ಎಸ್. ಮೂಂಜೆ, ಕೆ.ಬಿ. ಹೆಡಗೆವಾರ್, ಡಾ। ಎಲ್. ವಿ. ಪರಾಂಜಪೆ, ಡಾ। ಬಿ.ಟಿ. ತಾಲ್ಕರ್ ಮತ್ತು ಬಾಬುರಾವ್ ಸಾವರ್ಕರ್ ಸಭೆ ಸೇರಿ, ಹಿಂದುತ್ವವಾದದ ಪ್ರಚಾರ ಹಾಗೂ, 'ಹಿಂದುರಾಷ್ಟ್ರ'ದ ಸಂಘಟನೆಗೋಸ್ಕರ ಬ್ರಿಟಿಷರ 'ನ್ಯಾಷನಲ್ ವಾಲಂಟಿರ್ ಕಾಪ್ಸ್' ಮಾದರಿಯಲ್ಲಿ ಯುವ ಕಾರ್ಯಕರ್ತರನ್ನು ತರಬೇತುಗೊಳಿಸಲು, 'ರಾಷ್ಟ್ರೀಯ ಸ್ವಯಂಸೇವಕ ಸಂಘ' (ಆರ್.ಎಸ್.ಎಸ್.) ಸ್ಥಾಪಿಸಿದರು.

೧೯೨೫ರಿಂದ ಆರ್.ಎಸ್.ಎಸ್.ನ ಸಂಘಟನಾ ಜಾಲ ಬೆಳೆದದ್ದು ಮಹಾರಾಷ್ಟ್ರ, ಪಂಜಾಬ್ ಮತ್ತು ನಾರ್ಥ್‌ವೆಸ್ಟರ್ನ್ ಪ್ರಾವಿನ್ಸ್‌ಗಳಲ್ಲಿ; ಇವು ೧೯೧೦-೨೫ರ ವರೆಗೆ ಹಿಂದು ಮಹಾಸಭೆ ಬೆಳೆದ ಜಾಗಗಳು. ಮಹಾರಾಷ್ಟ್ರದಲ್ಲಿಯಂತೂ ಆರ್.ಎಸ್.ಎಸ್.ನ ನಾಯಕರು ಮತ್ತು ಕಾರ್ಯಕರ್ತರು ಚಿತ್ಪಾವನ ಬ್ರಾಹ್ಮಣರಾಗಿದ್ದರು. ಬಿ.ಎಸ್. ಮೂಂಜೆ ಆರ್.ಎಸ್.ಎಸ್. ಕಾರ್ಯಕರ್ತರನ್ನು 'ನಮ್ಮ ಬ್ರಾಹ್ಮಣ ಹುಡುಗರು' ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದರು. ಆರ್.ಎಸ್.

ಎಸ್.ನವರು ತಮ್ಮ ಶಾಖೆಗಳನ್ನು ಸ್ಥಾಪಿಸಲು ಬ್ರಿಟಿಷರ ಆಡಳಿತದಿಂದ ಹೊರಗೆ ಇದ್ದ ರಾಜಸಂಸ್ಥಾನಗಳು (Princely States) ಮತ್ತು ಮಹಾಸಭಾದ ಪ್ರಾಬಲ್ಯವಿದ್ದ ಆಂಗ್ಲೋವೇದಿಕ್ ಕಾಲೇಜು ಹಾಗೂ ಬನಾರಸ್ ಹಿಂದು ವಿಶ್ವವಿದ್ಯಾಲಯಗಳನ್ನು ಆಯ್ದುಕೊಂಡರು. ಇಲ್ಲಿ ಎಲ್ಲಾ ಸಂಘಟನೆಗೆ ಬೆಂಬಲ ದೊರಕಿದ್ದು ಭೂಮಾಲಿಕರು, ಮೇಲ್ಜಾತಿಯ ಜನರು ಹಾಗೂ ಆಧುನಿಕ ವಿದ್ಯಾಭ್ಯಾಸ ಪಡೆದು ಯಶಸ್ವಿ ವೈದ್ಯರು, ವಕೀಲರು, ಕಾಲೇಜು ಮೇಸ್ಟ್ರುಗಳು ಆಗಿದ್ದವರಿಂದ. ಬಿ.ಎಸ್. ಮೂಂಜೆ, ಕೆ.ಬಿ. ಹೆಡಗೆವಾರ್, ಎಲ್.ವಿ. ಪರಾಂಜಪೆ, ಬಿ.ಬಿ. ತಾಲ್ಕರ್ ಇವರೆಲ್ಲ ಆಧುನಿಕ ವೈದ್ಯಕೀಯ ವಿದ್ಯಾಭ್ಯಾಸ ಪಡೆದ ಅಲೋಪತಿ ಡಾಕ್ಟರುಗಳು; ಆರ್.ಎಸ್.ಎಸ್.ನ ಎರಡನೇ ಸರಸಂಘಚಾಲಕರು ಮತ್ತು ಹಿಂದುತ್ವದ ಪ್ರಮುಖ ಸಿದ್ಧಾಂತಿಗಳೂ ಆದ ಎಂ.ಎಸ್. ಗೋಲ್ವಾಲ್ಕರ್ ಬನಾರಸ್ ಹಿಂದು ವಿಶ್ವವಿದ್ಯಾಲಯದಲ್ಲಿ ಸಸ್ಯಶಾಸ್ತ್ರದ ಪ್ರಾಧ್ಯಾಪಕ ರಾಗಿದ್ದರು. ಈ ಸಣ್ಣ ಪುಟ್ಟ ವಿವರಗಳನ್ನು ಯಾಕೆ ಹೇಳುತ್ತಿದ್ದೇನೆ ಎಂದರೆ ಹಿಂದುತ್ವವಾದಿಗಳು ಆಧುನಿಕ ಜೀವನಕ್ರಮವನ್ನು ಏನಕೇನ ವಿರೋಧಿಸುವವರು, ಧಾರ್ಮಿಕ ತತ್ವಶಾಸ್ತ್ರೀಯ ಪರಂಪರೆಯೊಂದನ್ನು ಅಕ್ಷರಶಃ ಸರಿ ಎಂದು ವಾದಿಸುವ ಮೂಲಭೂತವಾದಿಗಳೂ ಆಗಿರಲಿಲ್ಲ. ಅವರ ಧರ್ಮದ ಪರಿಕಲ್ಪನೆ ಕೋಮುವಾದಿ ರಾಜಕೀಯಕ್ಕೆ ನೆಪವಾಗಿ ಒದಗಿಬರುವಂತಹುದು ಮಾತ್ರವಾಗಿತ್ತು. ಈ ಬಗೆಯ ಧರ್ಮದ ಪರಿಕಲ್ಪನೆ ಮೇಲ್ಜಾತಿಯವರ ಮತ್ತು ಆಸ್ತಿವಂತರ ಸಾಮಾಜಿಕ ಯಜಮಾನಿಕೆಯನ್ನು ತೋರಿಕೆಗೂ ವಿರೋಧಿಸುವಂತಹದಾಗಿರಲಿಲ್ಲ. ಉದಾಹರಣೆಗೆ, ಬಿ.ಎಸ್. ಮೂಂಜೆ ತಮ್ಮ ಬರಹಗಳಲ್ಲಿ ಹಿಂದುಗಳ ಧಾರ್ಮಿಕ ಐಕ್ಯತೆಗೆ ಜಾತಿ ಮತ್ತು ವರ್ಣವ್ಯವಸ್ಥೆ ಅಡ್ಡಿಯಾಗಿದೆ; ವೇದಕಾಲದಲ್ಲಿ ಜಾತಿವ್ಯವಸ್ಥೆ ಇರಲಿಲ್ಲ; ಆದರೆ ವರ್ಣವ್ಯವಸ್ಥೆ ಇತ್ತು; ವರ್ಣವ್ಯವಸ್ಥೆಯ ಒಳಗೇ ಆರ್ಯ ಕುಲಸಂಬಂಧಗಳನ್ನು ಉಳಿಸುವ ಸಲುವಾಗಿ 'ವಿಲೋಮ' ಮತ್ತು 'ಅನುಲೋಮ' ವಿವಾಹ ಪದ್ಧತಿಗಳು ರೂಢಿಯಲ್ಲಿ ಇದ್ದವು; ಹಿಂದುಗಳು ಈ ವಿವಾಹ ಪದ್ಧತಿಗಳ ಮೂಲಕ ರಕ್ತಸಂಬಂಧ ಏರ್ಪಡಿಸಿಕೊಂಡರೆ, ವರ್ಣ ವಿಭಜನೆಯನ್ನು ಉಳಿಸಿಕೊಂಡೇ, ಹಿಂದುಗಳ ಐಕ್ಯತೆ ಸಾಧಿಸಬಹುದು ಎಂದು ವಾದಿಸುತ್ತಿದ್ದರು. ಆದರೆ ಇವು ಬಾಯುಪಚಾರದ ಮಾತುಗಳಾಗಿದ್ದವೇ ಹೊರತು ಈ ವಿಚಾರಗಳಿಗೆ ಹೊಂದುವಂತಹ ಯಾವುದೇ ಸಮಾಜ ಸುಧಾರಣಾ ಕಾರ್ಯಕ್ರಮಗಳನ್ನು ಮಹಾಸಭಾದವರಾಗಲಿ, ಆರ್.ಎಸ್. ಎಸ್.ನವರಾಗಲಿ ತಮ್ಮ ಕಾರ್ಯಾಚರಣೆಯ ಭಾಗವಾಗಿಸಿಕೊಂಡಿರಲಿಲ್ಲ.

೧೮೮೦-೧೯೨೦ರ ಕಾಲಘಟ್ಟದಲ್ಲಿ ಭಾರತದಲ್ಲಿ ಇದ್ದ ಯಜಮಾನ ವ್ಯವಸ್ಥೆಗೆ ಸವಾಲಾಗುವಂತಹ ಹಲವಾರು ಚಳುವಳಿಗಳು ದೇಶದ ತುಂಬ ನಡೆದವು.



ಮಹಾರಾಷ್ಟ್ರದಲ್ಲಿ ಬ್ರಾಹ್ಮಣರ ಯಜಮಾನಿಕೆ, ಊಳಿಗಮಾನ್ಯ ವ್ಯವಸ್ಥೆ ಮತ್ತು ಪಿತೃಪ್ರಧಾನ ವ್ಯವಸ್ಥೆಯಲ್ಲಿ ಹೆಂಗಸರ ಸ್ಥಿತಿ ಇವುಗಳನ್ನು ಎದುರಾಎದುರೇ ಪ್ರಶ್ನಿಸುವ ಚಳುವಳಿಗಳನ್ನು ಜ್ಯೋತಿಭಾ ಫುಲೆ, 'ಬಾಬ ಸಾಹೇಬ್' ಅಂಬೇಡ್ಕರ್, ರಮಾಬಾಯಿ, ತಾರಾಬಾಯಿ ಇವರುಗಳು ಸಂಘಟಿಸಿದರು. ದಕ್ಷಿಣ ಭಾಗದಲ್ಲಿ ಶೂದ್ರರ ಚಳುವಳಿ, ಕೆಳಜಾತಿ ಜನರ ದೇವಸ್ಥಾನ ಪ್ರವೇಶ ಚಳುವಳಿಗಳು ನಡೆದದ್ದು ಕೂಡ ಈ ಕಾಲದಲ್ಲಿಯೇ. ೧೯೨೦-೩೦ ರ ದಶಕದಲ್ಲಿ ಉತ್ತರಪ್ರದೇಶ, ಅವಧ್, ಗುಜರಾತ್, ಕೇರಳಗಳಲ್ಲಿ ಜಮೀಂದಾರರು ಹಾಗೂ ಬ್ರಿಟಿಷ್ ಸರ್ಕಾರಗಳ ವಿರುದ್ಧ ಸಣ್ಣರೈತರು ಮತ್ತು ಗೇಣಿದಾರರು ದೊಡ್ಡ ಪ್ರಮಾಣದ ಆಂದೋಲನಗಳನ್ನು ನಡೆಸಿದರು. ಉತ್ತರ ಪ್ರದೇಶ ಮತ್ತು ಅವಧ್‌ಗಳಲ್ಲಿ ನಡೆದ 'ಕಿಸಾನ್ ಸಭಾ' ಹೋರಾಟ, ಗುಜರಾತ್‌ನಲ್ಲಿ ನಡೆದ 'ಎಕ್ಕ ಚಳುವಳಿ' ಹಾಗೂ ಬರ್ಡೋಲಿ ಸತ್ಯಾಗ್ರಹಗಳು ಕೆಳಜಾತಿ ಜನರ ಸಾಮಾಜಿಕ ಹಕ್ಕು, ಗೇಣಿದಾರರು ಮತ್ತು ರೈತರ ಆರ್ಥಿಕ ಬೇಡಿಕೆಗಳನ್ನು ವಸಾಹತುಶಾಹಿ ವಿರೋಧಿ ಚಳುವಳಿಯೊಟ್ಟಿಗೆ ಹೆಣೆದ ವಿಶಿಷ್ಟ ಜನಾಂದೋಲನಗಳಾಗಿದ್ದವು. ೧೯೪೭ರಲ್ಲಿ ಅಸ್ತಿತ್ವಕ್ಕೆ ಬಂದ ರಾಷ್ಟ್ರಕ್ಕೆ ''INDIA, THAT IS BHARAT'' ಎಂಬ ಆಕೃತಿಯನ್ನು ರೂಪಿಸಿದ್ದು ಮತ್ತು ಸಂವಿಧಾನದ ವ್ಯಾಕರಣವನ್ನು ನಿರೂಪಿಸಿದ್ದು ಈ ಚಳುವಳಿಗಳೇ. ಹಿಂದುತ್ವವಾದಿಗಳು ಈ ಚಳುವಳಿಗಳಿಂದ ದೂರ ಇದ್ದದ್ದು ಮಾತ್ರವಲ್ಲ, ಈ ಚಳುವಳಿಗಳ ಆಶಯ ಮತ್ತು ಆಕೃತಿಗಳನ್ನು ಪ್ರಜ್ಞಾಪೂರ್ವಕವಾಗಿ ವಿರೋಧಿಸುವ ರಾಜಕೀಯವನ್ನು ರೂಢಿಸಲು ಪ್ರಯತ್ನಿಸಿದರು. ಇದಕ್ಕೆ ಉದಾಹರಣೆಯಾಗಿ, ಅಸಹಕಾರ - ಖಿಲಾಫತ್ ಚಳುವಳಿ ಮತ್ತು ಈ ಚಳುವಳಿಗೆ ಹಿಂದುತ್ವವಾದಿಗಳು ತೋರಿಸಿದ ಪ್ರತಿಕ್ರಿಯೆಯನ್ನು ನೋಡಬಹುದು.

ವಸಾಹತುಶಾಹಿ ಇತಿಹಾಸಕಾರರು ಭೂಖಂಡದ ಚರಿತ್ರೆಯನ್ನು ಧರ್ಮದ ಆಧಾರದಲ್ಲಿ ವ್ಯಾಖ್ಯಾನಿಸಿದರು ಎಂದು ಹಿಂದೆ ಹೇಳಿದೆ; ಬ್ರಿಟಿಷ್ ಆಡಳಿತಗಾರರು ಈ ವ್ಯಾಖ್ಯಾನವನ್ನು ರಾಜಕೀಯ ಹಾಗೂ ಆಡಳಿತ ವ್ಯವಹಾರಗಳಲ್ಲಿ ಅಕ್ಷರಶಃ ರೂಢಿಗೆ ತಂದರು; ಹಿಂದುಗಳು ಮತ್ತು ಮುಸಲ್ಮಾನರು ಪರಸ್ಪರ ವಿರೋಧಿ ರಾಜಕೀಯ ಆಕಾಂಕ್ಷೆಯುಳ್ಳ ಏಕರೂಪಿ ಸಮುದಾಯಗಳು ಎಂದು ಪರಿಗಣಿಸಿ ಆಡಳಿತ ನಡೆಸುವುದರಿಂದ ತಮಗೇ ಫಾಯ್ದೆ ಎನ್ನುವುದು ವಸಾಹತುಶಾಹಿ ಪ್ರಭುಗಳಿಗೆ ಚೆನ್ನಾಗಿಯೇ ಗೊತ್ತಿತ್ತು; ವಿಪರ್ಯಾಸವೆಂದರೆ ವಸಾಹತುಶಾಹಿ ವಿರೋಧಿ ರಾಜಕೀಯದಲ್ಲೂ ಈ ಗ್ರಹಿಕೆ ಮನ್ನಣೆಗಳಿಸಿಬಿಟ್ಟಿತ್ತು. ಮುಸಲ್ಮಾನರು ತಮ್ಮ ಜನಸಂಖ್ಯೆಗೆ ತಕ್ಕುದಾದಷ್ಟು ರಾಜಕೀಯ ಮಹತ್ವಾಕಾಂಕ್ಷೆಯನ್ನು ಪ್ರಕಟಪಡಿಸಿದರೆ ಒಪ್ಪಿಕೊಳ್ಳಬಹುದು; ಆದರೆ 'ಅವರ' ಆಕಾಂಕ್ಷೆ ಸಂಖ್ಯಾ ಪ್ರಾತಿನಿಧ್ಯಕ್ಕಿಂತ ತೀರ

ಅತಿಯಾಗಿದೆ ಎಂಬ ದೂರು ಕಾಂಗ್ರೆಸ್‌ನಲ್ಲಿಯೂ ಜೋರಾಗಿಯೇ ಇತ್ತು. ತಮ್ಮ ಸಂಖ್ಯಾಬಲವನ್ನೇ ಆಯುಧಮಾಡಿಕೊಂಡು, ತಮ್ಮ 'ಸಾಮುದಾಯಿಕ ಗುರುತ'ನ್ನು (ಇಜ್ಜತ್-ಎ-ಕ್ವಾಮ್) ಗುಡಿಸಿಹಾಕುವ 'ಹಿಂದು ಆಡಳಿತ'ವನ್ನು ಕಾಂಗ್ರೆಸ್‌ನವರು ಹೇರುತ್ತಾರೆ ಎಂಬ ಅವಿಶ್ವಾಸ ಮುಸ್ಲಿಮ್ ರಾಜಕೀಯ ಮುಖಂಡರಲ್ಲಿ ಕೂತು ಬಿಟ್ಟಿತ್ತು; ಈ ಅವಿಶ್ವಾಸವನ್ನು ಜಾಗ್ರತವಾಗಿಡುವ ಮುಸ್ಲಿಮ್ ಮೂಲಭೂತವಾದವು ಸಾಕಷ್ಟು ಪ್ರಭಾವಶಾಲಿಯಾಗಿಯೇ ಇತ್ತು. ಮೌಲಾನ ಆಜಾದ್‌ರಂತಹವರು ಕಾಂಗ್ರೆಸ್‌ನ ಸಂಪ್ರದಾಯವಾದಿಗಳ ಪೂರ್ವಾಗ್ರಹ ಮತ್ತು ಮುಸ್ಲಿಮ್ ಮೂಲಭೂತ ವಾದಿಗಳನ್ನು ಒಟ್ಟಿಗೆ ನಿಭಾಯಿಸಬೇಕಾಗಿತ್ತು. ಆ ಹೊತ್ತಿನ ಸಾಮಾನ್ಯ ಮುಸಲ್ಮಾನರ ಡೋಲಾಯಮಾನ ಸ್ಥಿತಿಗೆ ರೂಪಕದ ಹಾಗೆ ಇದ್ದವರು ಮಹಮ್ಮದಾಲಿ. ಮಹಮ್ಮದಾಲಿಯದು, ಉಗ್ರ ಮೂಲಭೂತವಾದ, ಆಧುನಿಕ ಪರಿಸ್ಥಿತಿಯಲ್ಲಿ ಮರ್ಯಾದೆಯಿಂದ ಬದುಕುವ ಹಾಗೆ ಮುಸಲ್ಮಾನರನ್ನು ತರಬೇತುಗೊಳಿಸಬೇಕು ಎಂಬ ಸುಧಾರಣವಾದ, ಧಾರ್ಮಿಕ ನಂಬಿಕೆಗಳನ್ನು ಒತ್ತಟ್ಟಿಗೆ ಇಟ್ಟುಕೊಂಡು, ಹಿಂದುಗಳ ಜೊತೆ ಸೇರಿ ಬ್ರಿಟಿಷರ ವಿರುದ್ಧ ಹೋರಾಟ ಮಾಡಬೇಕು ಎಂಬ ನಿಲುವುಗಳ ಮಧ್ಯೆ ತುಯ್ದಾಡುತ್ತಿದ್ದ ಮನಸ್ಸು. ಒಳ್ಳೆ ವಾಗ್ಮಿ, ಸಂಘಟನಾಚತುರ, ಧಾರ್ಮಿಕ ನಂಬಿಕೆಯುಳ್ಳವ, ತನ್ನ ಸಮುದಾಯದ ಒಳಿತಿಗಾಗಿ ಆಧುನಿಕ ಸಂಸ್ಥೆಗಳನ್ನು ಸ್ಥಾಪಿಸಲು ದುಡಿಯುವ ಹರಿಕಾರ–ಹೀಗೆ ಹಲವು ಕುತೂಹಲಕಾರಿ ವ್ಯಕ್ತಿತ್ವ ಹೊಂದಿದ್ದ ಮಹಮ್ಮದಾಲಿ, ಸಾಮಾನ್ಯ ಮುಸ್ಲಿಮರು ಗೌರವ - ವಿಶ್ವಾಸ ಇಟ್ಟುಕೊಂಡಿದ್ದ ವರ್ಚಸ್ಸುಳ್ಳ ನಾಯಕರಾಗಿದ್ದರು. ಸಹಜವಾಗಿಯೇ, ಬ್ರಿಟಿಷರು ತುರ್ಕಿಯ ಖಲೀಫನ ಅಧಿಕಾರವನ್ನು ಮೊಟಕುಮಾಡಲು ಹೊರಟಾಗ, ಉತ್ತರ ಭಾರತದಲ್ಲಿ ಖಿಲಾಫತ್ ಚಳುವಳಿಯನ್ನು ಸಂಘಟಿಸಿದವರು ಮಹಮ್ಮದಾಲಿ.

ಖಿಲಾಫತ್ ಚಳುವಳಿ ಧರ್ಮದ ಮೇಲಿನ ನಂಬಿಕೆಯಿಂದ ಉದ್ದೀಪನ ಗೊಂಡದ್ದು ಎನ್ನುವುದು ನಿಜ. ಗಾಂಧಿ ಯಾಕೆ ಅಸಹಕಾರ ಚಳುವಳಿಯನ್ನು ಖಿಲಾಫತ್ ಚಳುವಳಿಯ ಜೊತೆ ಬೆಸೆದರು? ಗಾಂಧಿ ಯಾವತ್ತೂ ಧರ್ಮ ಎನ್ನುವುದು ವೈಯಕ್ತಿಕ ನೈತಿಕತೆಯನ್ನು ಗಟ್ಟಿ ಮಾಡುವ ಶ್ರದ್ಧೆ ಎಂದು ನಂಬಿದವರು; ಅವರಿಗೆ ರಾಜಕೀಯ ಎನ್ನುವುದು ಪ್ರತಿ ವ್ಯಕ್ತಿಯೂ ತನ್ನ ವೈಯಕ್ತಿಕ ಶ್ರದ್ಧೆಯನ್ನು ರಕ್ಷಿಸಿಕೊಳ್ಳಲು ಕಟ್ಟಿಕೊಳ್ಳಬೇಕಾದ ಸಾರ್ವಜನಿಕ ಭೂಮಿಕೆ; ಒಂದು ಗುಂಪಿನ ಹಿತಾಸಕ್ತಿಯ ನೆಪದಲ್ಲಿ – ಆ ಗುಂಪು ಎಷ್ಟೇ ದೊಡ್ಡದಾಗಿರಲಿ – ತನಗೆ ಒಪ್ಪಿಗೆಯಾಗದ ವಿಚಾರಗಳ ವಕಾಲತ್ತನ್ನು ಅವರು ಎಂದೂ ಮಾಡಲಿಲ್ಲ. ತಾನೊಬ್ಬ 'ಸನಾತನ ಹಿಂದು'ವಾಗಿ ತನ್ನ ನಂಬಿಕೆಗಳನ್ನು ಯಾವ ರಾಜಿ ಇಲ್ಲದೆ ಪ್ರತಿಪಾದಿಸುವ ಹಕ್ಕು ತನಗೆ ಇರುವುದಾದರೆ,



ಅದೇ ರೀತಿ ಮುಸಲ್ಮಾನನೊಬ್ಬನಿಗೆ ತನ್ನ ಧರ್ಮದ ನಂಬಿಕೆಯನ್ನು ಕಾಯ್ದುಕೊಳ್ಳುವ ಹಕ್ಕು ಇದೆ; ಖಿಲಾಫತ್ ಪ್ರತಿಯೊಬ್ಬ ಮುಸಲ್ಮಾನನ ನೈತಿಕ ತುರ್ತಾಗಿದ್ದರೆ ಅದನ್ನು ರಕ್ಷಿಸಿಕೊಳ್ಳುವ ಹಕ್ಕು ಅವರಿಗೆ ಇದೆ – ಅದು ಹೌದೋ, ಅಲ್ಲವೋ ಎಂದು ತನಗೆ ತಾನೇ ಸಾಬೀತು ಮಾಡಿಕೊಳ್ಳುವುದು ಪ್ರತಿಯೊಬ್ಬ ಮುಸಲ್ಮಾನನ ಜವಾಬ್ದಾರಿ; ಅದನ್ನು ಮತ್ತೊಬ್ಬರು ಅನುಮಾನದಿಂದ ನೋಡುವ ಅಗತ್ಯವಿಲ್ಲ ಎನ್ನುವುದು ಗಾಂಧಿಜೀಯ ಬಲವಾದ ನಂಬಿಕೆಯಾಗಿತ್ತು. ಪ್ರತಿಯೊಬ್ಬ ಮುಸಲ್ಮಾನನೂ ಇದೇ ರೀತಿ ಯೋಚಿಸುತ್ತಾನೆ ಎಂದು ಗಾಂಧಿಜೀ ಖಾತ್ರಿ ಮಾಡಿಕೊಂಡಿದ್ದರೊ? ಒಬ್ಬನ ನೈತಿಕತೆಯನ್ನು ಮತ್ತೊಬ್ಬ ಪ್ರಮಾಣೀಕರಿಸುವುದನ್ನು ಗಾಂಧಿಜೀ ಎಂದೂ ಒಪ್ಪುತ್ತಿರಲಿಲ್ಲ; ಪ್ರತಿಯೊಬ್ಬನೂ ತನ್ನನ್ನು ತಾನೇ ಪ್ರಮಾಣೀಕರಿಸಿಕೊಂಡು ಚಳುವಳಿಗೆ ಬರಬೇಕು; ಚಳುವಳಿ ಹಿಡಿಯುವ ಹಾದಿಯೇ ಭಾಗಿದಾರರ ಸ್ವಪ್ರಮಾಣೀಕರಣದ ಒರೆಗಲ್ಲು; ಈ ಹಾದಿ ತಪ್ಪಿದರೆ, ಎಂತಹ ಅದ್ಭುತ ಪರಿಣಾಮಗಳ ನಿರೀಕ್ಷೆ ಇದ್ದರೂ, ಚಳುವಳಿಯನ್ನು ಖೈದು ಮಾಡಿಬಿಡಬೇಕು – ಇದು ಪ್ರಬಲ ವಿರೋಧದ ನಡುವೆಯೂ ಗಾಂಧಿ ಪಾಲಿಸಿದ ರಾಜಕೀಯ. ಮುಸಲ್ಮಾನರನ್ನು ಅನುಮಾನಿಸುವ ಪ್ರಮೇಯವೇ ಗಾಂಧಿಜೀಗೆ ಬರಲಿಲ್ಲ. ಗಾಂಧಿಜೀಯ ಈ ತತ್ವವೇ ಸರಿಯಾದುದು ಎಂದು ವಾದಿಸುವ ಇರಾದೆ ನನಗಿಲ್ಲ. ಆದರೆ ಗಾಂಧಿಜೀಯ ಈ ರಾಜಕೀಯ ವ್ಯಾಕರಣ ಒಂದು ಮಹತ್ವದ ಕೆಲಸ ಮಾಡಿತು: ಹಿಂದುಗಳು ಮತ್ತು ಮುಸಲ್ಮಾನರು ಪರಸ್ಪರ ವಿರೋಧಿಗಳಾದ ಏಕರೂಪಿ ರಾಜಕೀಯ ಬಣಗಳು ಎಂದು ವಸಾಹತುಶಾಹಿ ಪ್ರಭುಗಳು ನಿರೂಪಿಸಿದ – ಕಾಂಗ್ರೆಸ್‌ನ ಹೊರಗೆ ಮತ್ತು ಒಳಗೆ ಇದ್ದ ಹಿಂದು ಮತ್ತು ಮುಸ್ಲಿಮ್ ಮುಖಂಡರುಗಳು ಅನಾಮತ್ತಾಗಿ ಒಪ್ಪಿಕೊಂಡಿದ್ದ – ರಾಜಕೀಯ ವ್ಯಾಕರಣಕ್ಕೆ ಚಾರಿತ್ರಿಕ ಸವಾಲು ಹಾಕಿತು. ಅಸಹಕಾರ - ಖಿಲಾಫತ್ ಚಳುವಳಿಯು ಹಿಂದು ಮತ್ತು ಮುಸಲ್ಮಾನ ರೈತರು ಹಾಗೂ ಕಾರ್ಮಿಕರನ್ನು ಒಟ್ಟಿಗೆ ತಂದು ರೈತರು ಹಾಗು ಕಾರ್ಮಿಕರ ಆಂದೋಲನಗಳ ಪರ್ವಕ್ಕೆ ನಾಂದಿ ಹಾಡಿತು ಎನ್ನುವುದನ್ನು ಗಮನಿಸಿದರೆ, ಅಸಹಕಾರ ಚಳುವಳಿಯನ್ನು ಖಿಲಾಫತ್ ಚಳುವಳಿಯೊಟ್ಟಿಗೆ ಬೆಸೆಯುವ ಮೂಲಕ ಗಾಂಧಿಜೀ ಪ್ರಾರಂಭಿಸಿದ 'ಹೊಸ ರಾಜಕೀಯ ಅಧ್ಯಾಯ' ದ ಮಹತ್ವವೂ ಅರ್ಥವಾದೀತು ಎಂದು ನನಗೆ ಅನ್ನಿಸುತ್ತದೆ. ಈ ಚಳುವಳಿ ನಡೆದದ್ದು ಎರಡು ವರ್ಷ; ಚೌರಿಚೌರಾ ಘಟನೆಗೆ ಪ್ರತಿಕ್ರಿಯೆಯಾಗಿ ಗಾಂಧಿಜೀ ಚಳುವಳಿಯನ್ನು ನಿಲ್ಲಿಸಿದ್ದರು. ಕ್ರಾಂತಿಕಾರಕ ಸ್ವರೂಪ ಪಡೆಯುತ್ತಿದ್ದ ಚಳುವಳಿಗೆ ಗಾಂಧಿಜೀ ಬ್ರೇಕ್ ಹಾಕಿದ್ದನ್ನು ಕಾಂಗ್ರೆಸ್‌ನ ದೊಡ್ಡ ನಾಯಕರುಗಳೇ ತೀವ್ರ ಅಸಮಾಧಾನದಿಂದ ಸ್ವೀಕರಿಸಿದರು; ಚಳುವಳಿ ಕ್ರಾಂತಿಕಾರಕ ತಿರುವು ಪಡೆಯುತ್ತಿದ್ದದ್ದು ಗಾಂಧಿಜೀಗೆ ಪಥ್ಯವಾಗಲಿಲ್ಲ ಎಂದು

ದೂಷಿಸುವ ತೀವ್ರ ಎಡಪಂಥೀಯರು ಇವತ್ತಿಗೂ ಇದ್ದಾರೆ; ಚಳುವಳಿಯ ಚೇತನಕ್ಕೆ ಆರು ವರ್ಷ ಕಾವು ಕೊಟ್ಟು ಬಾರ್ಡೋಲಿಯ ಜನ ಸಮಾಜಸುಧಾರಣೆ ಹಾಗೂ ರೈತ ಚಳುವಳಿ ರೂಪಿಸಿದರು. ಇವೆಲ್ಲಾ ಚಳುವಳಿ ತೆರೆದಿಟ್ಟ ಹೊಸ ಆಶಯ ಮತ್ತು ರಾಜಕೀಯ ಸಾಧ್ಯತೆಗಳನ್ನು ಸೂಚಿಸುತ್ತವೆ. ಇದೆಲ್ಲ ಸರಿ. ಆದರೆ ಹಿಂದುತ್ವವಾದಿಗಳಿಗೆ ಈ ಚಳುವಳಿ ಹೇಗೆ ಕಂಡಿತು?

ಅಸಹಕಾರ-ಖಿಲಾಫತ್ ಚಳುವಳಿ ಪ್ರಾರಂಭವಾಗುವುದಕ್ಕಿಂತ ಮುಂಚೆಯೆ, ಕೇರಳದ ಮಲಬಾರ್ ಪ್ರದೇಶದಲ್ಲಿ ಗೇಣಿದಾರರು ಸಂಘಟಿತರಾಗಿ ಕ್ರೂರವಾಗಿದ್ದ ಗೇಣಿ ಮತ್ತು ತೆರಿಗೆ ವ್ಯವಸ್ಥೆಗಳ ವಿರುದ್ಧ ಚಳುವಳಿ ಶುರುಮಾಡಿದ್ದರು. ಸಹಜವಾಗಿಯೇ ಗೇಣಿದಾರರು ಜಮೀಂದಾರರು ಮತ್ತು ಬ್ರಿಟಿಷ್ ಆಡಳಿತವನ್ನು ಎದುರು ಹಾಕಿಕೊಂಡಿದ್ದರು. ಈ ಭಾಗದ ಮುಕ್ಕಾಲುವಾಸಿ ಗೇಣಿದಾರರು ಮಾಪ್ಪಗಳು (೧೦ನೇ ಶತಮಾನಕ್ಕಿಂತ ಮುಂಚೆ ಸಮುದ್ರ ಮಾರ್ಗವಾಗಿ ವ್ಯಾಪಾರಕ್ಕೆ ಬಂದ ಅರಬರು, ಕೇರಳದ ಹೆಂಗಸರನ್ನು ಮದುವೆಯಾಗಿ ಅಲ್ಲಿಯೇ ನೆಲೆಸಿದರು. ಇವರೇ ಮಾಪ್ಪಗಳು. ಇವರು ಧರ್ಮದಿಂದ ಮುಸಲ್ಮಾನರಾದರೂ ಕೇರಳದ ಬೇರೆ ಮುಸ್ಲಿಮರಿಗಿಂತ ಭಿನ್ನವಾದ ಆಚಾರ-ವಿಚಾರ ಉಳ್ಳವರು). ಜಮೀಂದಾರರಲ್ಲಿ ಹೆಚ್ಚಿನವರು ಹಿಂದು ಜನ್ಮಿಗಳು. ಆದರೆ ಗೇಣಿದಾರರು ತಮ್ಮ ಹೋರಾಟ ಜಮೀಂದಾರರ ವಿರುದ್ಧ ಎಂದು ನಂಬಿದ್ದರೆ ಹೊರತು, ಹಿಂದುಗಳ ವಿರುದ್ಧ ಎಂದಲ್ಲ. ಗೋಪಾಲ ಮೆನನ್, ಮಹಮ್ಮದ್ ಕೋಯ, ಕೆ. ಮಾಧವನ್ ನಾಯರ್ ಇವರು ಚಳುವಳಿಯ ನಾಯಕತ್ವ ವಹಿಸಿಕೊಂಡಿದ್ದರು. ಕಾಂಗ್ರೆಸ್ಸಿನವರು ಮೊದಲು ಈ ಚಳುವಳಿಯನ್ನು ಬೆಂಬಲಿಸಿರ ಲಿಲ್ಲ. ಅಸಹಕಾರ - ಖಿಲಾಫತ್ ಆಂದೋಲನ ಪ್ರಾರಂಭವಾದ ತಕ್ಷಣ, ಕಾಂಗ್ರೆಸ್‌ನವರು ಈ ಚಳುವಳಿಯ ಬೆಂಬಲಕ್ಕೆ ನಿಂತರು; ಹಾಗಾಗಿ ಗೇಣಿದಾರರ ಚಳುವಳಿ ಅಸಹಕಾರ-ಖಿಲಾಫತ್ ಚಳುವಳಿಯ ಭಾಗ ವಾಗಿಬಿಟ್ಟಿತು. ದೇಶದ ಇತರ ಕಡೆಗಳಂತೆ ಇಲ್ಲೂ ಕೂಡ ಸರ್ಕಾರ ಚಳುವಳಿಗಾರರ ಮೇಲೆ ಬಲಪ್ರಯೋಗ ಶುರುಮಾಡಿತು. ೧೯೨೧ರ ಫೆಬ್ರವರಿ ಹೊತ್ತಿಗೆ ಚಳುವಳಿಯ ಉನ್ನತ ನಾಯಕರು ಜೈಲು ಸೇರಿದ್ದರಿಂದ, ಚಳುವಳಿಯ ಹೊಣೆ ಸ್ಥಳೀಯ ಮಾಪ್ಪಗಳ ಮೇಲೆ ಬಿತ್ತು. ಈ ಹೊತ್ತಿನಲ್ಲೂ ಚಳುವಳಿಗಾರರು ಜಮೀಂದಾರರ ಆಸ್ತಿ ಮತ್ತು ಸರ್ಕಾರಿ ದಾಖಲೆಗಳ ಮೇಲೆ ದಾಳಿ ನಡೆಸುತ್ತಿದ್ದರೆ ಹೊರತು (ಕೆಲವು ಮಾಪ್ಪ ಜಮೀಂದಾರರ ಆಸ್ತಿಗಳನ್ನು ಸಹ ಚಳುವಳಿಗಾರರು ದಾಳಿ ಮಾಡಿದ್ದರು) ಸಾಮಾನ್ಯ ಹಿಂದುಗಳ ತಂಟೆಗೆ ಹೋಗಿರಲಿಲ್ಲ. ಪೋಲಿಸರು ಬಲಪ್ರಯೋಗ ಹೆಚ್ಚಿಸಿ, ಅಳಿದುಳಿದ ಚಳುವಳಿಯ ನೇತಾರರ ಮೇಲೂ ಹಲ್ಲೆ ನಡೆಸಿ ಜೈಲಿಗೆ ತಳ್ಳಿದರು. ೧೯೨೧ರ ಆಗಸ್ಟ್



ಹೊತ್ತಿಗೆ ಮೂಲ ಚಳುವಳಿಯ ನಾಯಕರ ಗೈರುಹಾಜರಿಯಲ್ಲಿ ಮಾಪ್ಪ ಕೋಮುವಾದಿಗಳು ಚಳುವಳಿಯ ಮೇಲೆ ಹಿಡಿತ ಸಾಧಿಸಿದರು. ನಂತರ ಒಂದು ತಿಂಗಳು, ಚಳುವಳಿ ಕೋಮುವಾದಿ ಸ್ವರೂಪ ಪಡೆಯಿತು. ಈ ಒಂದು ತಿಂಗಳಲ್ಲಿ ಮಾಪ್ಪಗಳು ಹಿಂದುಗಳ ಮೇಲೆ ವ್ಯಾಪಕವಾದ ಹಲ್ಲೆ, ಕೊಲೆ, ಬಲಾತ್ಕಾರದ ಮತಾಂತರಗಳಂತಹ ಹಿಂಸಾತ್ಮಕ ಕೃತ್ಯದಲ್ಲಿ ತೊಡಗಿದರು. ಈ ದಂಗೆಯನ್ನು ಪೋಲಿಸರಿಗೆ ನಿಯಂತ್ರಿಸಲು ಸಾಧ್ಯವಾಗದಿದ್ದಾಗ, ಸರ್ಕಾರ ಸೈನ್ಯವನ್ನು ಕಳಿಸಿತು. ಸೈನ್ಯ ಯಾವ ಎಗ್ಗೂ ಇಲ್ಲದೆ ಹಿಂಸಾತ್ಮಕ ಕಾರ್ಯಾಚರಣೆ ನಡೆಸಿ ದಂಗೆಯನ್ನು ಮಟ್ಟಹಾಕಿತು. ಈ ದಂಗೆಯಲ್ಲಿ ೨,೩೩೭ ಮಾಪ್ಪಗಳು ಸತ್ತರು, ೪೫,೪೪೭ ಜನರನ್ನು ಬಂಧಿಸಲಾಯಿತು. ಸೈನ್ಯದ ಬಲಪ್ರಯೋಗ ಎಷ್ಟು ಹಿಂಸಾತ್ಮಕವಾಗಿತ್ತು ಎಂದರೆ, ೧೯೪೭ರಲ್ಲಿ ಸ್ವಾತಂತ್ರ್ಯ ಬಂದ ನಂತರವೂ ಮಾಪ್ಪಗಳು ಮತ್ತ್ಯಾವ ಚಳುವಳಿಗಳ ಕಡೆ ತಲೆಹಾಕಿ ಮಲಗಲಿಲ್ಲ.[೧೦] 'ಮಾಪ್ಪದಂಗೆ' ಎಂದೇ ಖ್ಯಾತಿ ಪಡೆದಿರುವ ಈ ದಂಗೆ, ಕೊನೆಯ ಹಂತದಲ್ಲಿ ಮಾತ್ರ ಕೋಮುವಾದಿ ಸ್ವರೂಪ ಪಡೆದಿತ್ತು; ಆಗಲೂ ಅದು ಮಲಬಾರ್ ಪ್ರದೇಶಕ್ಕೆ ಸೀಮಿತವಾಗಿತ್ತೇ ಹೊರತು, ಅಕ್ಕಪಕ್ಕದ ಪ್ರದೇಶಗಳ ಹಿಂದು ಮತ್ತು ಮುಸಲ್ಮಾನರ ಮೇಲೆ ಯಾವ ಪ್ರಭಾವವನ್ನೂ ಬೀರಲಿಲ್ಲ. ಚಳುವಳಿ ಕೋಮುವಾದಿ ಸ್ವರೂಪ ಪಡೆದಾಗ, ಭಾರತದ ಇತರ ಭಾಗಗಳ ಮುಸಲ್ಮಾನರನ್ನು ಬಿಡಿ, ಕೇರಳದ ಬೇರೆ ಭಾಗದ ಮುಸಲ್ಮಾನರೂ ಮಾಪ್ಪಗಳ ಬೆಂಬಲಕ್ಕೆ ಬರಲಿಲ್ಲ. 'ಮಾಪ್ಪದಂಗೆ' ಸಂಪೂರ್ಣ ಸ್ಥಳೀಯವಾದ, ಕೊನೆಯ ಹಂತದಲ್ಲಿಮಾತ್ರ ಅಸಹಕಾರ-ಖಿಲಾಫತ್ ಚಳುವಳಿ ದೇಶದಾದ್ಯಂತ ಮೂಡಿಸಿದ್ದ ಚೈತನ್ಯಕ್ಕೆ ಅಪವಾದವಾಗಿದ್ದ ಘಟನೆಯಾಗಿತ್ತು.

ಮಾಪ್ಪದಂಗೆಯ ಪರಿಣಾಮವನ್ನು ಉತ್ಪ್ರೇಕ್ಷೆ ಮಾಡಿ, ಗಾಂಧಿಜೀ ದೇಶವನ್ನು ಮುಸ್ಲಿಮ್ ಆಕ್ರಮಣಕಾರರ ಕೈಗೆ ಕೊಡಲು ಸಿದ್ಧರಾಗಿದ್ದಾರೆ ಎಂದು ಹಿಂದುತ್ವವಾದಿ ಗಳು ಪ್ರಚಾರ ಮಾಡಿದ್ದು ಆಶ್ಚರ್ಯವನ್ನು ಉಂಟುಮಾಡಬೇಕಿಲ್ಲ. ಆದರೆ ಮುಸ್ಲಿಮ್ ಆಕ್ರಮಣದ ಭಯ ತೋರಿಸುವ ಮೂಲಕ, ಆ ಹೊತ್ತಿಗೆ ಅನಾವರಣಗೊಳ್ಳುತ್ತಿದ್ದ ಹೊಸ ರಾಜಕೀಯವನ್ನು — ಜನ ತಮ್ಮ ವ್ಯಕ್ತಿಗತ ನೈತಿಕತೆಯ ಮೇಲೆ ವಿಶ್ವಾಸವಿಟ್ಟು ಕೊಳ್ಳುವ ಮೂಲಕ ಸಾರ್ವಜನಿಕ ಜವಾಬ್ದಾರಿಯನ್ನು ನಿರ್ವಹಿಸುವ ಶಕ್ತಿಯುಳ್ಳವರು ಎಂದು ನಂಬಿದ್ದ ಗಾಂಧಿಜೀಯ ಜನಸಾಮೂಹಿಕ ರಾಜಕೀಯ, ದಲಿತರು, ಗೇಣಿದಾರರು, ಹೆಂಗಸರು ತಮ್ಮ ಹಕ್ಕನ್ನು ಬೇಡುವ ಮೂಲಕ ಅಸಮಾನ ಯಜಮಾನ ವ್ಯವಸ್ಥೆಗೆ ಸವಾಲು ಹಾಕಿದ ರಾಜಕೀಯ — ಮುಚ್ಚಿಹಾಕುವ ಪ್ರಯತ್ನವನ್ನು ಹಿಂದುತ್ವವಾದಿಗಳು ಶುರು ಮಾಡಿದರು ಎನ್ನುವುದನ್ನು ಗಮನಿಸಬೇಕು. ೧೯೨೧ರ

ದಶಕದ ಹೊಸ ಜನಸಾಮೂಹಿಕ ರಾಜಕೀಯಕ್ಕೆ ಹಿಂದುತ್ವವಾದಿಗಳು ತೋರಿಸಿದ ಪ್ರತಿಕ್ರಿಯೆಗೆ ಎರಡು ಉದಾಹರಣೆಗಳನ್ನು ಕೊಡುತ್ತೇನೆ.

ಮಾಪ್ಲ ದಂಗೆಯ ಕೊನೆಯ ಹಂತದಲ್ಲಿ ವ್ಯಕ್ತವಾದದ್ದು ಧರ್ಮಾಂಧ ಹಿಂಸೆ ಎನ್ನುವುದು ನಿಜ; ಆದರೆ ಗಾಂಧಿಜೀ ಚೌರಿಚೌರದ ಹಿಂಸೆಗೂ, ಮಾಪ್ಲಗಳ ಹಿಂಸೆಗೂ ಭೇದವೆಣಿಸದೇ, ಒಟ್ಟು ಹಿಂಸೆಗೆ ಚಳುವಳಿಯ ನಾಯಕತ್ವ ವಹಿಸಿದ ತಾನು ಜವಾಬ್ದಾರ ಎಂದು ಒಪ್ಪಿಕೊಳ್ಳುತ್ತಲೇ ಬ್ರಿಟಿಷರ ವಸಾಹತುಶಾಹಿ ಆಳ್ವಿಕೆ ಎಷ್ಟು ಹೀನವಾದುದು ಎಂದು ತೋರಿಸಿದರು.[೧೧] ಈಗ, ಮಾಪ್ಲದಂಗೆಯ ಬಗ್ಗೆ ಹಿಂದುರಾಷ್ಟ್ರವಾದಿ ಬಿ.ಎಸ್. ಮೂಂಜೆ ತೋರಿಸಿದ ಪ್ರತಿಕ್ರಿಯೆಯನ್ನು ನೋಡಿ:

> *ಹಿಂದುಗಳು ಕೊಡುಕೊಳ್ಳುವಿಕೆ ಸಾಧ್ಯವಿಲ್ಲದಂತಹ ಬಿಗಿಯಾದ ಚೌಕಟ್ಟುಗಳಲ್ಲಿ ವಿಭಜಿತರಾಗಿದ್ದಾರೆ. ಪ್ರತಿಯೊಬ್ಬರಿಗೂ ತಮ್ಮದೇ ಆಚಾರ-ವಿಚಾರ. ಎಲ್ಲ ಹಿಂದುಗಳಿಗೂ ಸಾಮಾನ್ಯವಾದಂತಹ ಸಾಮಾಜಿಕ,ಸಾಮುದಾಯಿಕ ಚಟುವಟಿಕೆಗಳಂತೂ ಇಲ್ಲವೇ ಇಲ್ಲ. ಈ ಕಾರಣವಾಗಿ, ಯಾವುದೇ ಒಂದು ವಿಭಾಗದ ಜನ ಮಹಮ್ಮದೀಯರ ಜೊತೆ ಸಂಘರ್ಷಕ್ಕೆ ಇಳಿದರೆ, ಮತ್ತೊಂದು ವಿಭಾಗದ ಜನ ಅವರ ಸಹಾಯಕ್ಕೆ ಧಾವಿಸುವುದು ಉಚಿತ ಎಂದು ಭಾವಿಸುವುದೇ ಇಲ್ಲ. ತದ್ವಿರುದ್ಧವಾಗಿ, ಮಹಮ್ಮದೀಯರು ಸಜೀವ ಸಂಬಂಧವುಳ್ಳ ಸಮುದಾಯವಾಗಿದ್ದಾರೆ; ಅವರು ಧಾರ್ಮಿಕ ನೆಲೆಯಲ್ಲಿ ಶಿಸ್ತುಬದ್ಧವಾಗಿ ಸಂಘಟಿತರಾಗಿರುವುದರಿಂದ, ಎಲ್ಲಿ ಯಾರಿಗೇ ಪೆಟ್ಟಾಗಲಿ, ಇಡಿ ಸಮುದಾಯಕ್ಕೆ ನೋವಿನ ಅರಿವಾಗುತ್ತದೆ.*[೧೨]

ಅಸಹಕಾರ - ಖಿಲಾಫತ್ ಚಳುವಳಿಯ ಕಾಲದ ಸ್ಫೂರ್ತಿಯ ಬಗ್ಗೆ ಹೇಳಿದ್ದೇನೆ; ಈ ಕಾಲದ ಬಗ್ಗೆ ಮೂಂಜೆಯುವರ ವ್ಯಾಖ್ಯಾನದ ಅರ್ಥವೇನು ಎಂದು ಬಿಡಿಸಿ ಹೇಳಬೇಕಾಗಿಲ್ಲ. ಅಥವಾ, ಈ ಅರ್ಥವನ್ನು ಕೆ.ಬಿ. ಹೆಡಗೆವಾರರೇ ಸ್ಪಷ್ಟವಾಗಿ ಹೀಗೆ ಹೇಳಿದ್ದಾರೆ:

> *ಮಹಾತ್ಮ ಗಾಂಧಿಯ ಅಸಹಕಾರ ಚಳುವಳಿಯ ಫಲವಾಗಿ (ರಾಷ್ಟ್ರೀಯ) ಉತ್ಸಾಹ ಕುಂದಿತ್ತು; ಆ ಚಳುವಳಿಯಿಂದಾಗಿ ಸಮಾಜ ಜೀವನದಲ್ಲಿ ಕೇಡುಗಳು ಅಪಾಯಕಾರಿ ರೀತಿಯಲ್ಲಿ ತಲೆ ಎತ್ತಿದ್ದವು. ರಾಷ್ಟ್ರೀಯ ಚಳುವಳಿಯ ಉಬ್ಬರ ಇಳಿದಾಕ್ಷಣ ದ್ವೇಷ ಮತ್ತು ಅಸೂಯೆಗಳು ತಲೆ ಎತ್ತಿದವು. ವ್ಯಕ್ತಿಗತ ಜಗಳಗಳು ಎಲ್ಲ ಕಡೆಗೂ ಎದ್ದು ನಿಂತವು. ವಿವಿಧ ಸಮುದಾಯಗಳ ನಡುವೆ ಸಂಘರ್ಷ ಶುರುವಾಗಿತ್ತು. ಬ್ರಾಹ್ಮಣ-ಅಬ್ರಾಹ್ಮಣ ಸಂಘರ್ಷ ನಗ್ನರೂಪದಲ್ಲಿ ಪ್ರಕಟಗೊಂಡಿತ್ತು. ಯಾವ ಸಂಘಟನೆಯಲ್ಲೂ ಐಕ್ಯತೆ ಇರಲಿಲ್ಲ. 'ಯವನ' (ಮುಸಲ್ಮಾನ) ಸರ್ಪಗಳು ಅಸಹಕಾರ ಚಳುವಳಿಯ ಹಾಲುಂಡು ವಿಷಪೂರಿತ ಫೂತ್ಕಾರದೊಡನೆ ದೇಶದ ಎಲ್ಲ ಕಡೆ ಗಲಭೆಗಳನ್ನು ಪ್ರಚೋದಿಸುತ್ತಿದ್ದವು.*[೧೩]



ಇಂತಹ ನಿರಾಶಾದಾಯಕ ಪರಿಸ್ಥಿತಿಯಲ್ಲಿ 'ಹಿಂದುರಾಷ್ಟ್ರದ ಸಂಕಲ್ಪ'ವನ್ನು ಜಾಗೃತಗೊಳಿಸಲಿಕ್ಕೆ ರಾಷ್ಟ್ರೀಯ ಸ್ವಯಂಸೇವಕ ಸಂಘವನ್ನು ಸ್ಥಾಪಿಸಬೇಕಾಯಿತು ಎಂದು ಹೆಡಗೆವಾರ್ ಸಮರ್ಥಿಸಿಕೊಂಡಿದ್ದಾರೆ. ಈ ಮಹತ್ಕಾರ್ಯಕ್ಕಾಗಿ ಸೇರಿದ ಸಭೆಯಲ್ಲಿ, 'ಹಿಂದು ರಾಷ್ಟ್ರ ನಿರ್ಮಾಣ'ಕ್ಕೆ ಕೆಳಜಾತಿಯವರ ಬೆಂಬಲವನ್ನು ನಂಬುವ ಹಾಗಿಲ್ಲ ಎಂದೂ ಕೂಡ ಹೆಡಗೆವಾರ್ ಹೇಳಿದ್ದರು.[೧೪]

ಈ ಬಗೆಯ ದೃಷ್ಟಿಕೋನ ಇಟ್ಟುಕೊಂಡಿದ್ದ ಹಿಂದುರಾಷ್ಟ್ರವಾದಿ ರಾಜಕೀಯಕ್ಕೆ, ಹಲ್ಲು, ಉಗುರುಗಳನ್ನುಳ್ಳ ಸುಸಂಬದ್ಧ ಮತಸ್ವರೂಪ (ideological form) ಕೊಟ್ಟವರು ವಿ.ಡಿ. ಸಾವರ್ಕರ್ ಮತ್ತು ಎಂ.ಎಸ್. ಗೋಲ್ವಾಲ್ಕರ್. ಸೆಕ್ಯುಲರ್, ಸಮಾಜವಾದಿ ಪ್ರಜಾಪ್ರಭುತ್ವದ ಪರಿಕಲ್ಪನೆಗಳು ಬೆಳೆಯುತ್ತಿದ್ದ ಕಾಲದಲ್ಲಿಯೇ ಇವರುಗಳು ತಮ್ಮ ವಿಚಾರಗಳನ್ನು ಮಂಡಿಸಿದರು ಎನ್ನುವುದನ್ನು ಗಮನಿಸಿ. ಇಲ್ಲಿ ಒಂದು ಮಾತು ಹೇಳಬೇಕು. ಇವತ್ತು ಹಿಂದುತ್ವವಾದಿಗಳು, ಸೆಕ್ಯುಲರ್ ಪ್ರಜಾಪ್ರಭುತ್ವ ಹಾಗೂ ಸಮಾಜವಾದ ಪಶ್ಚಿಮದ ಪರಿಕಲ್ಪನೆಗಳು; ಅವು ನಮ್ಮ ನೆಲಕ್ಕೆ ತಕ್ಕುದಾದವಲ್ಲ; ಹಿಂದುತ್ವವಾದ ಈ ಮಣ್ಣಿನಲ್ಲಿಯೇ ಹುಟ್ಟಿದ್ದು; ಎಲ್ಲರೂ ಈ ವಿಚಾರಕ್ಕೇ ಮಣೆ ಹಾಕಬೇಕು ಎಂದು ಒತ್ತಾಯಿಸುತ್ತಿದ್ದಾರೆ. ಆದರೆ ಇವರ ಗುರುಗಳಿಗೆ ಅಂತಹ ಭ್ರಮೆ ಏನೂ ಇರಲಿಲ್ಲ. ವಿ.ಡಿ. ಸಾವರ್ಕರ್,ಇಟಲಿಯ ರಾಷ್ಟ್ರೀಯ ಏಕೀಕರಣದ ಪ್ರಭಾವಶಾಲಿ ಚಿಂತಕ ಮಾಝಿನಿಯ ವಿಚಾರಗಳನ್ನು ಇಟಲಿಯ ಫ್ಯಾಸಿಸ್ಟರು ಅರ್ಥಮಾಡಿಕೊಂಡ ರೀತಿಯಲ್ಲಿಯೇ ತಮ್ಮ ವಿಚಾರಗಳ ನಿರೂಪಣೆಗೆ ಅನಾಮತ್ತಾಗಿ ಬಳಸಿಕೊಂಡರು; ಅವರು ಮಾಝಿನಿಯನ್ನು ಶಿವಾಜಿಯ ಗುರು ರಾಮದಾಸರಿಗೂ, ಶಿವಾಜಿಯನ್ನು ಗ್ಯಾರಿಬಾಲ್ಡಿಗೂ ಹೋಲಿಸಿ, ಮಾಝಿನಿಯ ಬರಹಗಳನ್ನು ಮರಾಠಿಗೆ ಅನುವಾದಿಸಿ ಪ್ರಚಾರಮಾಡಿದರು. ಎಂ.ಎಸ್. ಗೋಲ್ವಾಲ್ಕರ್, ಜರ್ಮನಿಯಲ್ಲಿ ನಾಝಿವಾದಕ್ಕೆ ಸಮರ್ಥನೆ ಒದಗಿಸಿದ ಬ್ಲಂಟ್‌ಷ್ಲಿ ಮತ್ತು ಬರ್ಗೆಸರ ವಿಚಾರಗಳನ್ನು ಮಕ್ಕಿಕಾಮಕ್ಕಿ ಉಪಯೋಗಿಸಿಕೊಂಡರು ಮಾತ್ರವಲ್ಲ, ಯೂರೋಪಿನ ಬೇರೆ ವಿಚಾರಧಾರೆಗಳಿಗಿಂತ, ಹಿಂದುತ್ವವಾದದ ನಿರೂಪಣೆಗೆ ಈ ವಿಚಾರಗಳೇ ಸೂಕ್ತ ಎಂದು ಸಮರ್ಥಿಸಿಕೊಂಡರು. ಸರಿ. ಈಗ ಇವರಿಬ್ಬರ 'ಹಿಂದುತ್ವ' ಮತ್ತು 'ಹಿಂದುರಾಷ್ಟ್ರ'ದ ನಿರೂಪಣೆಯನ್ನು ಸ್ವಲ್ಪ ನೋಡೋಣ.

ಸಾವರ್ಕರ್ ಪಶ್ಚಿಮದ 'ಬಲಶಾಲಿರಾಷ್ಟ್ರ'ಗಳ ಗುಣಲಕ್ಷಣಗಳನ್ನು ಈ ರೀತಿ ಅರ್ಥೈಸಿದರು:

೧. ಜನ, ಏಕೋಪ್ರಕಾರವಾದ ಭೂಗೋಳದಲ್ಲಿ, ಅನಾದಿ ಕಾಲದಿಂದ ವಾಸ

ಮಾಡುತ್ತಿರಬೇಕು.

೨. ಜನ, ಒಂದೇ ಜನಾಂಗಕ್ಕೆ (ರಕ್ತ ಸಂಬಂಧ ಉಳ್ಳ ಒಂದೇ ಕುಲಕ್ಕೆ) ಸೇರಿದವರಾಗಿರಬೇಕು.

೩. ಜನರು ಒಂದು ಭಾಷೆ ಮತ್ತು ಒಂದು ಸಂಸ್ಕೃತಿಯ ಮೂಲಕ ತಮ್ಮ ಜೀವನದ ಆಚಾರ-ವಿಚಾರಗಳನ್ನು ಅಭಿವ್ಯಕ್ತಿಸುತ್ತಿರಬೇಕು.

ಈ ಮೂರು ಯೋಗ್ಯತೆಗಳನ್ನು ಒಟ್ಟಿಗೆ ಉಳ್ಳವರು ಮಾತ್ರ ರಾಷ್ಟ್ರೀಯ ಹಕ್ಕುಗಳಿಗೆ ಅರ್ಹರಾಗುತ್ತಾರೆ ಎಂದು ತೀರ್ಮಾನಿಸಿದ ಸಾವರ್ಕರ್,'ಹಿಂದು'ಗಳಿಗೆ ಮಾತ್ರ 'ರಾಷ್ಟ್ರೀಯ ಹಕ್ಕು' ದಕ್ಕಬಹುದಾದ ರೀತಿಯಲ್ಲಿ 'ಹಿಂದು ರಾಷ್ಟ್ರ' ವನ್ನು ನಿರೂಪಿಸಿದರು. ಅವರ ಪ್ರಕಾರ 'ಹಿಂದು' ಎಂದರೆ:

೧. ಸಿಂಧುನದಿಯ ತೀರದಿಂದ ದಕ್ಷಿಣದ ಸಮುದ್ರದವರೆಗಿನ (ಸಂಸ್ಕೃದದಲ್ಲಿ 'ಸಿಂಧು' ಎಂದರೆ ಸಮುದ್ರವೂ ಹೌದು; ಸಂಸ್ಕೃದದಲ್ಲಿ 'ಸ' ಮತ್ತು 'ಹ' ಪರಸ್ಪರ ಸಂವಾದಿಯಾಗಿರುವುದರಿಂದ 'ಸಿಂಧು' ವೆಂದರೆ 'ಹಿಂದು' ಕೂಡ ಹೌದು) ಭೂಪ್ರದೇಶದ ಮೂಲನಿವಾಸಿಗಳಾದ ಆರ್ಯರ ವಂಶಸ್ಥ.

೨. ಆರ್ಯರು ಆಚರಿಸುತ್ತಿದ್ದ ವೈದಿಕ ಧರ್ಮವನ್ನು ತನ್ನ ಧರ್ಮ ಎಂದು ಒಪ್ಪಿಕೊಂಡಿರುವವನು.

೩. ಸಂಸ್ಕೃತ ಭಾಷೆಯ ಮೂಲಕ ಅಭಿವ್ಯಕ್ತಿಗೊಂಡಿರುವ ಜೀವನ ಪದ್ಧತಿ – ಸಂಸ್ಕೃತಿ – ಯನ್ನು ಒಪ್ಪಿಕೊಂಡವನು.

ಭಾರತವನ್ನು ತಮ್ಮ ವಾಸಸ್ಥಾನ ಮಾಡಿಕೊಂಡಿರುವ ಮುಸಲ್ಮಾನರು ಮತ್ತು ಕ್ರಿಶ್ಚಿಯನ್ನರ ಸ್ಥಾನದ ಬಗ್ಗೆ ಸಾವರ್ಕರ್ ಹೀಗೆ ಹೇಳಿದ್ದಾರೆ:

> *(.....) ಮುಸ್ಲಿಮರು ಮತ್ತು ಕ್ರಿಶ್ಚಿಯನ್ನರು ಬೇರೆ ಎಲ್ಲಾ ಅರ್ಥಗಳಲ್ಲೂ ಹಿಂದುಗಳಾಗುವ ಅರ್ಹತೆ ಹೊಂದಿದ್ದಾರೆ, ಎನ್ನುವುದೇನೋ ಸರಿ. ಆದರೆ ಭಾರತವನ್ನು ತಮ್ಮ ಪುಣ್ಯಭೂಮಿ ಎಂದು ಅವರು ಒಪ್ಪಿಕೊಳ್ಳದಿರುವುದೆ ಹಿಂದುಗಳಾಗಲು ಅವರನ್ನು ಅನರ್ಹಗೊಳಿಸುತ್ತದೆ.(....) ಅವರ ಪುಣ್ಯಭೂಮಿ ದೂರದ ಅರಬ್ ಮತ್ತು ಇಸ್ರೇಲ್‌ಗಳಲ್ಲಿ ಇದೆ. ಅವರ ಪುರಾಣಗಳು, ದೇವತಾ ಪುರುಷರು, ವೀರಾಗ್ರಣಿಗಳು ಹಾಗೂ ವಿಚಾರಗಳು ಈ ಮಣ್ಣಿಗೆ ಸೇರಿದವಲ್ಲ. ಈ ಕಾರಣವಾಗಿಯೆ ಅವರ ಹೆಸರು ಮತ್ತು ದೃಷ್ಟಿಕೋನಗಳು ವಿದೇಶಿಮಯವಾಗಿವೆ. ಅವರ ಪ್ರೀತಿ (ಎರಡು ನೆಲಗಳ ನಡುವೆ) ಹಂಚಿಹೋಗಿದೆ.*
>
> *(....) ಹಿಂದುಗಳ ರಕ್ತ ಹಂಚಿಕೊಂಡು ಹುಟ್ಟಿದವರು (ಅನ್ಯಧರ್ಮದ ಗಂಡಸರು/ಹೆಂಗಸರು ಹಿಂದು ಗಂಡಸರು/ಹೆಂಗಸರನ್ನು ಮದುವೆಯಾದರೆ) ಹಿಂದುಗಳೇ ಆಗುತ್ತಾರೆ. ಆದರೆ ಅಂತಹವರು ಹಿಂದು ಧರ್ಮ ಹಾಗು ಸಂಸ್ಕೃತಿಗಳಿಗೆ ತಮ್ಮನ್ನು ಸಂಪೂರ್ಣ ಒಪ್ಪಿಸಿಕೊಂಡು, ತಮ್ಮ ವಿಧೇಯತೆಯನ್ನು ಪಿತೃಭೂಮಿಗೆ ಮಾತ್ರ ಮೀಸಲಾಗಿ ಇಡಬೇಕು*[೧೫]



ಎಂ.ಎಸ್. ಗೋಲ್ವಾಲ್ಕರ್, ಸಾವರ್ಕರರ 'ಹಿಂದುರಾಷ್ಟ್ರ' ವ್ಯಾಖ್ಯಾನವನ್ನು ಚಾಚೂ ತಪ್ಪದೆ ಪುನರುಚ್ಚರಿಸುತ್ತಾರೆ. ಆದರೆ ಗೋಲ್ವಾಲ್ಕರ್‌ರ ವಿಚಾರಗಳಲ್ಲಿ, 'ಹಿಂದು ರಾಷ್ಟ್ರ' ದಲ್ಲಿ ಹಿಂದುಗಳಲ್ಲದವರ ಸ್ಥಾನಮಾನ ಸ್ಪಷ್ಟವಾಗಿ – ಅಂದರೆ ಅವರ ಶಿಷ್ಯಂದಿರು ಮುಖಮುಲಾಜಿಲ್ಲದೆ ಜಾರಿಗೊಳಿಸಬಹುದಾದಷ್ಟು ಸರಳವಾಗಿ – ನಿರೂಪಿತವಾಗಿದೆ. ನಾಝಿ ಜರ್ಮನಿಯನ್ನು ಅನುಕರಣೀಯ ಮಾದರಿಯನ್ನಾಗಿ ಇಟ್ಟು ಕೊಂಡು, ಹಿಂದುಗಳಲ್ಲದವರ ಸ್ಥಾನಮಾನದ ಬಗ್ಗೆ ಗೋಲ್ವಾಲ್ಕರ್ ಹೀಗೆ ಹೇಳುತ್ತಾರೆ:

> *ಹಿಂದುಸ್ತಾನದಲ್ಲಿ ವಾಸಿಸುವ ವಿದೇಶಿಯರು ಒಂದೋ ಹಿಂದು ಸಂಸ್ಕೃತಿ ಮತ್ತು ಭಾಷೆಗಳನ್ನು ರೂಢಿಸಿಕೊಂಡು, ಹಿಂದುಧರ್ಮ ಪವಿತ್ರವಾದುದು ಎಂದು ಒಪ್ಪಿಕೊಂಡು, ಹಿಂದು ಧರ್ಮ ಮತ್ತು ಜನಾಂಗಗಳನ್ನು ವೈಭವೀಕರಿಸುವ ವಿಚಾರಗಳ ಹೊರತಾಗಿ ಬೇರೆ ಯಾವ ವಿಚಾರಗಳನ್ನೂ ಒಪ್ಪಿಕೊಳ್ಳದೆ ಜೀವಿಸಬೇಕು; ಇಲ್ಲವಾದರೆ, ವಿಶೇಷ ಹಕ್ಕುಗಳ ಮಾತು ದೂರ ಉಳಿಯಿತು, ಕನಿಷ್ಠ ನಾಗರಿಕ ಹಕ್ಕುಗಳನ್ನೂ ಬೇಡದೆ, ಹಿಂದು ರಾಷ್ಟ್ರಕ್ಕೆ ಅಡಿಯಾಳಾಗಿ ಬದುಕಬೇಕು*[೧೬].

ಅನ್ಯಧರ್ಮದವರು, ಇಲ್ಲಿಯೇ ಹುಟ್ಟಿ, ಬೆಳೆದು, ಮಣ್ಣಾದರೂ, 'ಹಿಂದು ರಾಷ್ಟ್ರ'ದ ಪ್ರಜೆಗಳಾಗುವ ಅರ್ಹತೆ ಪಡೆದುಕೊಳ್ಳುತ್ತಾರೆ ಎನ್ನುವುದು ಅನುಮಾನಾಸ್ಪದ! ಯಾಕೆ ಎಂದು ಗೋಲ್ವಾಲ್ಕರ್ ಹೇಳುತ್ತಾರೆ:

> *ಇದು ನಮ್ಮ ಮಾತೃಭೂಮಿ ಎನ್ನುವ ನೆನಪು ಅವರಿಗೆ ಇದೆಯೋ? ಈ ಭಾವನೆ ಮತ್ತು ನೆನಪನ್ನು ಅವರು ಯಾವತ್ತೂ ಹಸಿರಾಗಿ ಇಟ್ಟುಕೊಂಡಿರಬೇಕು. ಒಬ್ಬನ ಪೂಜಾ ವಿಧಿ ವಿಧಾನಗಳು ಬದಲಾದ ತಕ್ಷಣ ಆತ ಮಣ್ಣಿನ ಮಗನಾಗಿ ಉಳಿಯುವುದಿಲ್ಲ ಎಂದು ವಾದಿಸುವಷ್ಟು ನಾವು ಅಲ್ಪರಲ್ಲ. ದೇವರನ್ನು ಯಾವ ಹೆಸರಿನಿಂದ ಧ್ಯಾನಿಸಿದರೂ ನಮಗೆ ಅಭ್ಯಂತರವಿಲ್ಲ. ನಾವು ಸಂಘದವರು ಕಣ ಕಣದಲ್ಲೂ ಹಿಂದುಗಳು. ಆ ಕಾರಣವಾಗಿಯೆ ಎಲ್ಲ ಮತ ಮತ್ತು ನಂಬಿಕೆಗಳ ಬಗ್ಗೆ ನಮಗೆ ಗೌರವವಿದೆ. ಇನ್ನೊಬ್ಬರ ಮತದ ಬಗ್ಗೆ ಅಸಹಿಷ್ಣುವಾಗಿರುವವನು ಹಿಂದುವೇ ಅಲ್ಲ. ಆದರೆ ಇಸ್ಲಾಮ್ ಮತ್ತು ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರ ಮಾಡಿದವರ ಧೋರಣೆ ಏನು? ಎನ್ನುವುದೇ ಮುಖ್ಯ ಪ್ರಶ್ನೆ. ಅವರೆಲ್ಲಾ ಇಲ್ಲೆ ಹುಟ್ಟಿರಬಹುದು; ಆದರೆ ಈ ದೇಶಕ್ಕೆ ನಿಷ್ಠರಾಗಿದ್ದಾರೋ? ತಮ್ಮನ್ನು ಸಲಹಿದ ಈ ಭೂಮಿಯ ಬಗ್ಗೆ ಅವರಿಗೆ ಗೌರವ ಭಾವನೆ ಉಂಟೋ? ನಾವು ಈ ನೆಲ ಮತ್ತು ಸಂಪ್ರದಾಯಗಳ ಕೂಸುಗಳು; ಈ ನೆಲದ ಸೇವೆ ಮಾಡುವುದು ತಮ್ಮ ಸೌಭಾಗ್ಯ ಎಂದು ಅವರು ಭಾವಿಸುತ್ತಾರೋ? ಈ ದೇಶಕ್ಕೆ ಸೇವೆ ಸಲ್ಲಿಸುವುದು ತಮ್ಮ ಕರ್ತವ್ಯ ಎಂದು ಅವರಿಗೆ*

> *ಅನ್ನಿಸುತ್ತದೆಯೋ? ಇಲ್ಲ, ಮತಾಂತರವಾದೊಡನೆ ಈ ದೇಶದ ಬಗ್ಗೆ ಭಕ್ತಿ ಹಾಗೂ ಪ್ರೀತಿ ಮಾಯವಾಗಿ ಬಿಡುತ್ತದೆ.*
>
> *ಇದು ಇಲ್ಲಿಗೆ ಮುಗಿಯುವುದಿಲ್ಲ. ಅವರು ಈ ದೇಶದ ಶತ್ರುಗಳ ಜೊತೆ ತಮ್ಮನ್ನು ಗುರುತಿಸಿಕೊಳ್ಳುತ್ತಾರೆ. ಅವರು ವಿದೇಶಿ ಭೂಮಿಯನ್ನು ತಮ್ಮ ಪವಿತ್ರ ಸ್ಥಳ ಎಂದು ಪರಿಗಣಿಸುತ್ತಾರೆ. ಅವರು ತಮ್ಮನ್ನು 'ಶೇಕ್', 'ಸಯ್ಯಿದ್' ಗಳೆಂದು ಗುರುತಿಸಿಕೊಳ್ಳುತ್ತಾರೆ; ಈ ಶೇಕ್-ಸಯ್ಯಿದ್‌ಗಳು ಅರಬ್‌ನಲ್ಲಿ ಇರುವ ಪಂಗಡಗಳು; ಇವರು ಯಾಕೆ ತಮ್ಮನ್ನು ಅವರ ವಂಶಸ್ಥರೆಂದು ಗುರುತಿಸಿಕೊಳ್ಳುತ್ತಾರೆ? ಯಾಕೆಂದರೆ ಅವರು ಈ ಪುರಾತನ ರಾಷ್ಟ್ರದ ಬೇರುಗಳನ್ನು ಕಳೆದುಕೊಂಡಿದ್ದಾರೆ; ಆಕ್ರಮಣಕಾರರ ಜೊತೆ ಮಾನಸಿಕವಾಗಿ ಬೆರೆತುಹೋಗಿದ್ದಾರೆ. ಅವರು (ಈ ದೇಶವನ್ನು) ಆಕ್ರಮಣಮಾಡಿ ಸಾಮ್ರಾಜ್ಯ ಸ್ಥಾಪಿಸಲು ಬಂದವರು ಎಂದೇ ಭಾವಿಸುತ್ತಾರೆ. ಈ ಕಾರಣಕ್ಕಾಗಿಯೇ ಇದು ಧರ್ಮದ ಬದಲಾವಣೆಯಲ್ಲ, ರಾಷ್ಟ್ರೀಯ ಅಸ್ಮಿತೆಯ ಬದಲಾವಣೆ. ಮಾತೃದೇಶವನ್ನು ಅನಾಥವಾಗಿಸಿ ಶತ್ರುಗಳ ಗುಂಪು ಸೇರುವುದು ದೇಶದ್ರೋಹವಲ್ಲದೆ ಮತ್ತೇನು?*[೧೭].

ಸರಿ. ಕ್ರಿಶ್ಚಿಯನ್ನರು ಮತ್ತು ಮುಸಲ್ಮಾನರು 'ಈ ನೆಲದ ಸೇವೆ ಮಾಡುವುದು ತಮ್ಮ ಸೌಭಾಗ್ಯ' ಎಂದು ಭಾವಿಸಿದರೂ ಸಮಸ್ಯೆ ಬಗೆಹರಿಯುವುದಿಲ್ಲ. ಯಾಕೆ? ಸಮಸ್ಯೆಗೆ ಪರಿಹಾರವಿಲ್ಲವೋ? ಗೋಲ್ವಾಲ್ಕರ್ 'ಬೋಧಕವಾದ' ಒಂದು ಉದಾಹರಣೆ ಕೊಟ್ಟು ಪರಿಹಾರ ಸೂಚಿಸುತ್ತಾರೆ. ಅದು ಹೀಗಿದೆ:

> *ನೂರಾರು ವರ್ಷಗಳ ಹಿಂದೆ ಜರ್ಮನ್ನರು ಇಂಗ್ಲೆಂಡ್‌ಗೆ ಬಂದು ನೆಲೆಸಿದರು. ಅವರನ್ನು (ಬ್ರಿಟಿಷ್) ನಾಗರಿಕರೆಂದು ಸ್ವೀಕರಿಸಲಾಯಿತು. ಅಂತಹ ಒಬ್ಬ ಜರ್ಮನಿಯವ, ನಮ್ಮ ದೇಶದ ಮಧ್ಯಪ್ರದೇಶಕ್ಕೆ ಐ.ಸಿ.ಎಸ್. ಅಧಿಕಾರಿಯಾಗಿ ಬಂದು, ತನ್ನ ದೇಶದ ಸೇವೆ ಮಾಡುತ್ತಿದ್ದ. ಆದರೆ ೧೯೧೪ರಲ್ಲಿ (ಮೊದಲ ಮಹಾ) ಯುದ್ಧ ಶುರುವಾದ ತಕ್ಷಣ, ಅವನಲ್ಲಿ ಜರ್ಮನ್ ಪ್ರಜ್ಞೆ ಜಾಗೃತ ಆದಿತೆಂಬ ಮುನ್ನೆಚ್ಚರಿಕೆ ವಹಿಸಿ ಬ್ರಿಟಿಷರು ಅವನನ್ನು ಜೈಲಿಗೆ ಹಾಕಿದರು. ಈ ಅನುಮಾನ ಬಂದೇ ಅವನ ಸೆರೆವಾಸಕ್ಕೆ ಕಾರಣವಾಯಿತು. ಇದು ರಾಷ್ಟ್ರೀಯತೆಯ ಪ್ರಬುದ್ಧವಾದ ಹಾಗೂ ಸರಿಯಾದ ಅರಿವು.*[೧೮]

ಇದು ಹಿಂದುತ್ವವಾದಿಗಳು ನಮ್ಮ ಮೇಲೆ ಹೇರಬೇಕು ಎಂದಿರುವ 'ಹಿಂದು ರಾಷ್ಟ್ರ'. ಶಾಲೆ ಮಕ್ಕಳಿಗೂ ಅರ್ಥವಾಗುವ ರೀತಿಯಲ್ಲಿ ಗೋಲ್ವಾಲ್ಕರ್ 'ಹಿಂದು ರಾಷ್ಟ್ರ'ದ ಸ್ವರೂಪ ಮತ್ತು ಉದ್ದೇಶಗಳನ್ನು ವಿವರಿಸಿದ್ದಾರೆ! ಜಿ. ರಾಜಶೇಖರ್, ಸೆಕ್ಯುಲರ್‌ವಾದ ಮತ್ತು ಪ್ರಜಾಪ್ರಭುತ್ವದ ಪರಿಕಲ್ಪನೆಗಳನ್ನು ಚೆನ್ನಾಗಿ ವಿವರಿಸಿದ್ದಾರೆ. ಅವರ ಮಾತುಗಳನ್ನು ಹಿನ್ನೆಲೆಯಾಗಿ ಇಟ್ಟುಕೊಂಡು ನೋಡಿದರೆ ಸಾಕು; ಹಿಂದುತ್ವದ



ಬಗ್ಗೆ ಬೇರೆ ವಿವರದ ಅವಶ್ಯಕತೆ ಕಾಣುವುದಿಲ್ಲ. ಕಳೆದ ೫೦ ವರ್ಷಗಳಲ್ಲಿ, ಕಾಂಗ್ರೆಸ್ಸಿಗರು, ಸೋಶಿಯಲಿಸ್ಟರು, ಕಮ್ಯುನಿಸ್ಟರು ಮತ್ತು ದಲಿತ ಚಳುವಳಿಗಳವರ ವಿಚಾರಗಳಲ್ಲಿ ಸಾಕಷ್ಟು ಬದಲಾವಣೆ ಆಗಿರುವುದನ್ನು ನಿನ್ನೆ ಸದಾನಂದರು ವಿವರಿಸಿದರು. ೧೯೮೦ರ ದಶಕದ ರಾಮಜನ್ಮಭೂಮಿ ಚಳುವಳಿ, ೧೯೯೨ರ ಡಿಸೆಂಬರ್ ೬ ರಂದು ನಡೆದ ಬಾಬ್ರಿ ಮಸೀದಿಯ ವಿನಾಶ, ಬೆನ್ನ ಹಿಂದೆ ನಡೆದ ಕೋಮುಗಲಭೆಗಳು ಹಿಂದುತ್ವವಾದದಲ್ಲಿ ಏನೂ ಬದಲಾವಣೆಯಾಗಿಲ್ಲ ಎನ್ನುವುದನ್ನು ಒತ್ತಿ ಹೇಳುತ್ತವೆ. ಸಂಘಪರಿವಾರದ ಹಿರಿಯ ತಲೆಗಳು ೧೯೯೧ರಲ್ಲಿ ಬರೆದಿರುವ ಒಂದು ಪುಸ್ತಕವನ್ನು[೧೯] ನಾನು, ಒಂದಿಷ್ಟಾದರೂ ಬದಲಾವಣೆಯ ಆಸೆ ಇಟ್ಟುಕೊಂಡು, ಓದಿದೆ. ನನಗೆ ನಿರಾಶೆಯಾಯಿತು.

## ಪುಸ್ತಕ ಸೂಚಿ


೧. ಜಿ. ರಾಜಶೇಖರ, ಕೆ. ಫಣಿರಾಜ, ಫಕೀರ ಮುಹಮ್ಮದ್ ಕಟ್ಪಾಡಿ 'ಕೊಮುವಾದದ ರಾಜಕೀಯ', ನವಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೦೦.

೨. ಗ್ಯಾನೇಂದ್ರ ಪಾಂಡೆ, 'ಕನ್‌ಸ್ಟ್ರಕ್ಷನ್ ಆಫ್ ಕಮ್ಯೂನಲಿಸಂ ಇನ್ ಕಲೋನಿಯಲ್ ನಾರ್ಥ್ ಇಂಡಿಯಾ', ಒ.ಯು.ಪಿ. ,ದೆಹಲಿ, ೧೯೯೦

೩. ಜಾನ್ ಝುವೊಸ್, 'ದಿ ಎಮರ್ಜನ್ಸ್ ಆಫ್ ಹಿಂದು ನ್ಯಾಷನಾಲಿಸಂ ಇನ್ ಇಂಡಿಯಾ', ಒ.ಯು.ಪಿ. ದೆಹಲಿ, ೨೦೦೦

೪. ಪೀಟರ್ ವ್ಯಾನ್ ಡೆರ್ ವೀರ್, 'ರೆಲಿಜಿಯಸ್ ನ್ಯಾಷನಾಲಿಸಂ: ಹಿಂದುಸ್ ಅಂಡ್ ಮುಸ್ಲಿಮ್ಸ್ ಇನ್ ಇಂಡಿಯ', ಒ.ಯು.ಪಿ. ದೆಹಲಿ, ೧೯೯೮.

೫. ಐಜಾಜ್ ಅಹ್ಮದ್, 'ರೈಟ್ ವಿಂಗ್ ಪಾಲಿಟಿಕ್ಸ್ ಅಂಡ್ ಕಲ್ಚರ್ ಆಫ್ ಕ್ರೂರಯಲಿಟಿ', ಸೋಶಿಯಲ್ ಸೈಂಟಿಷ್ಟ್, ಸಂಚಿಕೆ ೩೦೪-೩೦೫, ಸಂ.೨೬, ಸೆಪ್ಟೆಂಬರ್-ಅಕ್ಟೋಬರ್ ೧೯೯೮.

೬. ಆಶಿಶ್ ನಂದಿ, 'ದಿ ಇಲೆಜಿಟಿಮೆಸಿ ಆಫ್ ನ್ಯಾಷನಾಲಿಸಂ', ಒ.ಯು.ಪಿ. ದೆಹಲಿ, ೧೯೯೮

೭. ಆಶಿಶ್‌ನಂದಿ, ಅಚ್ಯುತ್‌ಯಾಗ್ನಿಕ್, ಶೈಲ್‌ಮಾಯರಾಮ್, ಶಿಕಾ ತ್ರಿವೇದಿ, 'ಕ್ರಿಯೇಟಿಂಗ್ ನ್ಯಾಷನಾಲಿಟಿ: ರಾಮಜನ್ಮಭೂಮಿ ಮೂವ್‌ಮೆಂಟ್ ಅಂಡ್ ಫಿಯರ್ ಆಫ್ ದಿ ಸೆಲ್ಫ್'', ಒ.ಯು.ಪಿ. ,ದೆಹಲಿ, ೧೯೯೫

೮. ಕ್ರಿಷ್ಟೋಫ್ ಜೆಫ್ರೆಲೊಟ್ 'ದಿ ಹಿಂದು ನ್ಯಾಷನಾಲಿಸ್ಟ್ ಮೂವ್‌ಮೆಂಟ್ ಅಂಡ್ ಇಂಡಿಯನ್ ಪಾಲಿಟಿಕ್ಸ್: ೧೯೨೫ ಟು ೧೯೯೦' ಪೆಂಗ್ವಿನ್, ದೆಹಲಿ ೧೯೯೯.

೯. ಹೊ.ವೆ. ಶೇಷಾದ್ರಿ (ಸಂ), 'ಕೃತಿರೂಪ ಸಂಘದರ್ಶನ', ಜಾಗರಣ ಪ್ರಕಾಶನ, ಬೆಂಗಳೂರು ೧೯೯೦

೧೦. ಬಿಪನ್ ಚಂದ್ರ (ಸಂ), 'ಇಂಡಿಯನ್ ಸ್ಟ್ರಗಲ್ ಫಾರ್ ಫ್ರೀಡಮ್', ಪೆಂಗ್ವಿನ್, ದೆಹಲಿ, ೧೯೮೯

೧೧. ಕೆ.ವಿ. ಸುಬ್ಬಣ್ಣ (ಸಂ. ಮತ್ತು ಅನುವಾದ), 'ಸ್ವರಾಜ್ಯದ ಹಾದಿ ಹೆಜ್ಜೆಗಳು', ಕರ್ನಾಟಕ ಸಂಘ, ಪುತ್ತೂರು, ೧೯೯೮.

೧೨. ಉಲ್ಲೇಖ, ಜೆಫ್ರಲೊಟ್, ಅದೇ.

೧೩. ಉಲ್ಲೇಖ, ತಪನ್ ಬಸು ಮತ್ತು ಇತರರು 'ಖಾಕಿ ಷರ್ಟ್ಸ್, ಸ್ಯಾಫ್ರನ್‌ಫ್ಲಾಗ್ಸ್', ಓರಿಯಂಟ್ ಲಾಂಗ್‌ಮನ್, ದೆಹಲಿ. ೧೯೯೩

೧೪. ತಪನ್ ಬಸು ಮತ್ತು ಇತರರು, ಅದೇ.

೧೫. ಉಲ್ಲೇಖ, ಜೆಫ್ರಲೋಟ್, ಅದೇ.

೧೬. ಎಂ.ಎಸ್. ಗೋಲ್ವಾಲ್ಕರ್, 'ವಿ ಆರ್ ಅವರ್ ನೇಷನ್‌ಹುಡ್ ಡಿಫೈನ್ಡ್', ಭಾರತ್ ಪ್ರಕಾಶನ, ನಾಗಪುರ, ೧೯೩೯

೧೭. ಎಂ.ಎಸ್. ಗೋಲ್ವಾಲ್ಕರ್, 'ಬಂಚ್ ಆಫ್ ಥಾಟ್ಸ್,' ವಿಕ್ರಮ ಪ್ರಕಾಶನ, ಬೆಂಗಳೂರು, ೧೯೬೬

೧೮. ಎಂ.ಎಸ್. ಗೋಲ್ವಾಲ್ಕರ್, ಅದೇ.

೧೯. ಹೊ.ವೆ. ಶೇಷಾದ್ರಿ ಮತ್ತು ಇತರರು, 'ಹಿಂದು ರಾಷ್ಟ್ರ ಏಕೆ?', ಜ್ಞಾನ ಭಾರತಿ ಪ್ರಕಾಶನ, ಮಂಗಳೂರು, ೧೯೯೧

೨೦. ಉಲ್ಲೇಖ, ಜೆಫ್ರಲೋಟ್, ಅದೇ.

**ಈ ವಿಷಯದ ಕುರಿತಾಗಿ ಇರುವ ಗಮನಾರ್ಹ ಪುಸ್ತಕಗಳು**

೧. ವಸುಧ ದಾಲ್ಮಿಯ, 'ನ್ಯಾಶನಲೈಜೇಷನ್ ಅಫ್ ಹಿಂದು ಟ್ರಡಿಷನ್ಸ್', ಒ.ಯು.ಪಿ. ದೆಹಲಿ.

೨. ಥಾಮಸ್ ಬ್ಲಮ್ ಹನ್ಸೆನ್, 'ದಿ ಸ್ಯಾಫ್ರನ್ ವೇವ್' ಒ.ಯು.ಪಿ. ದೆಹಲಿ

೩. ಥಾಮಸ್ ಬ್ಲಮ್‌ಹನ್ಸೆನ್ ಮತ್ತು ಕ್ರಿಷ್ಟೋಫ್ ಜೆಫ್ರಲೋಟ್ (ಸಂ), ಬಿ.ಜೆ.ಪಿ.ಯ ಅಂಡ್ ಕಂಪಲ್‌ಶನ್ಸ್ ಆಫ್ ಪಾಲಿಟಿಕ್ಸ್ ಇನ್ ಇಂಡಿಯಾ', ಒ.ಯು.ಪಿ, ದೆಹಲಿ.

೪. ಡೆವಿಡ್ ಲುಡ್ಡೆನ್, 'ಮೇಕಿಂಗ್ ಇಂಡಿಯ ಹಿಂದು', ಒ.ಯು.ಪಿ. ದೆಹಲಿ

೫. ಐಜಾಜ್ ಅಹ್ಮದ್, 'ಲೀನಿಏಜಸ್ ಆಫ್ ಪ್ರಸೆಂಟ್', ತುಲಿಕ, ದೆಹಲಿ

೬. ಕೆ.ಎನ್. ಫಣಿಕ್ಕರ್ (ಸಂ), 'ಕರ್ನ್ಸ್‌ನ್ಡ್ ಇಂಡಿಯನ್ಸ್ ಗೈಡ್ ಟು ಕಮ್ಯುನಲಿಸಮ್', ವಿಕಿಂಗ್, ದೆಹಲಿ

೭. ರಾಜೀವ ಭಾರ್ಗವ್ (ಸಂ) 'ಸೆಕ್ಯುಲರಿಸಮ್ ಅಂಡ್ ಆರ್ಟ್ಸ್ ಕ್ರಿಟಿಕ್ಸ್' ,ಒ.ಯು.ಪಿ. ದೆಹಲಿ

೮. ಎ.ಜಿ. ನೂರಾನಿ, 'ಆರ್.ಎಸ್.ಎಸ್. ಅಂಡ್ ಬಿ.ಜೆ.ಪಿ.: ದಿ ಡಿವಿಜನ್ ಆಫ್ ಲೇಬರ್', ಲೆಫ್ಟ್‌ವರ್ಡ್ ಬುಕ್ಸ್, ದೆಹಲಿ.

**ನೀನಾಸಮ್ ಪ್ರತಿಷ್ಠಾನ - ಗಿಡಮೂಲಿಕಾ ಶಿಬಿರ ೬**

ನೀನಾಸಮ್ ಪ್ರತಿಷ್ಠಾನವು ಮೂರು-ನಾಲ್ಕು ವರ್ಷಗಳಿಂದ ಶೆಡ್ತಿಕೆರೆ ಗ್ರಾಮಾಂತರ ಸಮುದಾಯ ವಿಜ್ಞಾನ ಕೇಂದ್ರದ ಸಹಯೋಗದೊಂದಿಗೆ ಕಾಲಕಾಲಕ್ಕೆ ಗಿಡಮೂಲಿಕಾ ವೈದ್ಯಕೀಯ ತರಬೇತಿ ಶಿಬಿರಗಳನ್ನು ನಡೆಸುತ್ತಾ ಬಂದಿದೆ. ಇದರ ೬ನೇ ಶಿಬಿರವು ಇದೇ ಜನವರಿ ೧೬ರಿಂದ ೧೮ರವರೆಗೆ ಹೆಗ್ಗೋಡಿನಲ್ಲಿ ನಡೆಯಿತು. ಶ್ರೀ ವೆಂಕಟರಾಮ ದೈದೋಟ ಮತ್ತು ಡಾ.ಪತಂಜಲಿ ಕೆ.ವಿ. ಅವರು ಶಿಬಿರಗಳನ್ನು ನಡೆಸಿಕೊಟ್ಟರು.

# ಸೆಕ್ಯುಲರಿಸಂ ಎಂಬ ಪರಿಕಲ್ಪನೆ.

ಜಿ. ರಾಜಶೇಖರ

*೨೦೦೦ ಡಿಸೆಂ. ೨೪-೨೫ರಂದು ನೀನಾಸಮ್ ಪ್ರತಿಷ್ಠಾನ ಮತ್ತು ಮಲೆನಾಡು ಅಭಿವೃದ್ಧಿ ಪ್ರತಿಷ್ಠಾನಗಳ ಆಶ್ರಯದಲ್ಲಿ ಸಾಗರದ ಎಲ್.ಬಿ. ಕಾಲೇಜಿನಲ್ಲಿ ನಡೆದ 'ಶತಮಾನದ ತಿರುವಿನ ಬಿಕ್ಕಟ್ಟುಗಳು' ಅಧ್ಯಯನ ಶಿಬಿರದಲ್ಲಿ ಮಂಡಿಸಿದ ಪ್ರಬಂಧ*

ಈ ವಿಷಯದ ಬಗ್ಗೆ ನನ್ನ ಮಾತನ್ನು ಎಲ್ಲಿಂದ ಪ್ರಾರಂಭಿಸಲಿ ಎಂಬುದೇ ಸಮಸ್ಯೆ. ಸೆಕ್ಯುಲರಿಸಮ್ ಎಂಬ ವಿಚಾರ, ಇತರ ಅನೇಕ ರಾಜಕೀಯ ತತ್ವಗಳ ಜೊತೆ ಹೆಣೆದುಕೊಂಡಿದೆ. ಕಳೆದ ೨೦ವರ್ಷಗಳಲ್ಲಿ, ಸರಿಯಾಗಿ ಹೇಳಬೇಕು ಅಂದರೆ, ರಾಮಜನ್ಮ ಭೂಮಿ ಚಳುವಳಿ ಪ್ರಾರಂಭವಾದ ಮೇಲೆ, ಸಾರ್ವಜನಿಕ ವೇದಿಕೆಗಳಲ್ಲಿ ಮತ್ತು ಪತ್ರಿಕೆಗಳಲ್ಲಿ ನಡೆದ ಚರ್ಚೆಯಿಂದ, ಸೆಕ್ಯುಲರಿಸಂ ಎಂದರೆ ಏನು ಎಂಬ ಪ್ರಶ್ನೆ ಪರಿಹಾರವಾಗುವಬದಲು, ಇನ್ನಷ್ಟು ಗೊಂದಲಮಯವಾಗಿದೆ. ಈ ಚಳುವಳಿಯನ್ನು ಹುಟ್ಟುಹಾಕಿದ, ಬಿ.ಜೆ.ಪಿ.ಯನ್ನು, ದೇಶದ ಇತರ ಪಕ್ಷಗಳು ಸೆಕ್ಯುಲರ್ ವಿರೋಧಿ ಎಂದು ಬಣ್ಣಿಸುತ್ತವೆ. ಬಿ.ಜೆ.ಪಿ.ಯಾದರೋ, ತಾನೇ ನೈಜ ಸೆಕ್ಯುಲರಿಸ್ಟ್ ಪಕ್ಷ, ಉಳಿದವೆಲ್ಲ ಡೋಂಗಿ ಸೆಕ್ಯುಲರಿಸ್ಟ್ ಪಕ್ಷಗಳು ಎಂದು ಹೇಳುತ್ತಿದೆ. ಈ ವಿವಾದದಲ್ಲಿ, ನಾನು ಯಾವ ಪಕ್ಷದ ಕಡೆಗೂ ನಿಲ್ಲದೆ, ಆಟದಲ್ಲಿ ರೆಫೆರಿಯ ಹಾಗೆ ತಟಸ್ಥನಾಗಿರುವವನು ಎಂದು ತೋರಿಸಿಕೊಳ್ಳಲು ನನಗೆ ಇಷ್ಟವಿಲ್ಲ. ನಾನು ಬಿ.ಜೆ.ಪಿ. ವಿರೋಧಿ. ಆದರೆ ದೇಶದ ಉಳಿದ ಯಾವುದೇ ರಾಜಕೀಯ ಪಕ್ಷದ ಜೊತೆ ನನ್ನನ್ನು ಗುರುತಿಸಿಕೊಳ್ಳಲು ಕೂಡಾ ನಾನು ಇಷ್ಟ ಪಡುವುದಿಲ್ಲ. ನನ್ನ ವಾದಕ್ಕೆ ಸರಿಹೊಂದುವ ವಿವರಗಳನ್ನು ಜೋಡಿಸಿಕೊಂಡು, ಪರಿಣಾಮಕಾರಿಯಾದ ಒಂದು ಭಾಷಣಮಾಡಿ, ನಿಮ್ಮನ್ನು ನನ್ನ ಕ್ಯಾಂಪಿಗೆ ಬರಮಾಡಿಕೊಳ್ಳುವುದರಲ್ಲೂ ನನಗೆ ಆಸಕ್ತಿ ಇಲ್ಲ. ರಾಜಕೀಯದಲ್ಲಿ ನನ್ನ ಕ್ಯಾಂಪ್ ಯಾವುದು ಎಂದು ನನಗೇ ಗೊತ್ತಿಲ್ಲ. ಪರಿಣಾಮಕಾರಿಯಾದ ಭಾಷಣ ಮಾಡಿ ಅಥವಾ ಲೇಖನ ಬರೆದು ಮನಪರಿವರ್ತನೆ ಮಾಡುವವರ ಬಗ್ಗೆ ಸ್ವತಃ ನಾನೇ ಸ್ವಲ್ಪ ಎಚ್ಚರದಿಂದ ಇರುತ್ತೇನೆ. ಹಾಗಾಗಿ, ಸಾಧ್ಯವಿದ್ದಷ್ಟು ಮಟ್ಟಿಗೆ ನಾವೆಲ್ಲರೂ ಒಪ್ಪಿಕೊಳ್ಳುವ ಸಂಗತಿಗಳನ್ನು ಮುಂದಿಟ್ಟುಕೊಂಡು, ನಮ್ಮ ರಾಜಕೀಯದ

ವಿಧಾನ ಮತ್ತು ಉದ್ದೇಶಗಳ ಬಗ್ಗೆ ಯೋಚಿಸಲು ಸಾಧ್ಯವಾಗುವ ಹಾಗೆ ಮಾತಾಡಬೇಕು ಎಂದು ನನ್ನ ಆಸೆ.

ಇಂತಹ ಚರ್ಚೆಗಳಲ್ಲಿ ಮೊದಲು ಮಾತಾಡುವವರಿಗೆ ತಾನು ಉನ್ನತವಾದ ನೈತಿಕ ನೆಲೆಗಟ್ಟಿನ ಮೇಲೆ ನಿಂತು ಮಾತಾಡುತ್ತಿದ್ದೇನೆ ಎಂಬ ನಂಬಿಕೆ ಇರುತ್ತದೆ. ''ನಾನು ಹಿಂಸೆ, ಅನ್ಯಾಯ, ಶೋಷಣೆಗಳನ್ನು ವಿರೋಧಿಸುತ್ತೇನೆ, ಆದ್ದರಿಂದ ನನ್ನನ್ನು ನಂಬಿ'' ಎಂಬ ಮನಒಲಿಕೆಯ ತಂತ್ರವೂ ಅದರಲ್ಲಿ ಸೇರಿಕೊಂಡಿರುತ್ತದೆ. ಸೆಕ್ಯುಲರಿಸಂ ಕುರಿತ ಚರ್ಚೆಯಲ್ಲೂ ಅದು ಕಾಣುತ್ತದೆ. ಬಿ.ಜೆ.ಪಿ. ಯನ್ನು ವಿರೋಧಿಸುವ ಎಲ್ಲರೂ, ತಾವು ಹಿಂಸೆಯನ್ನು ಸಹಿಸದವರು ಎಂದೇ ತಮ್ಮ ವಾದ ಪ್ರಾರಂಭಿಸುತ್ತಾರೆ. ಬಿ.ಜೆ.ಪಿ. ಪರ ಇರುವವರು ತಾವು ಹಿಂಸಾವಾದಿಗಳಲ್ಲ; ಆದರೆ ತಾವು ಮಾತ್ರ ನೈಜ ದೇಶ ಪ್ರೇಮಿಗಳು ಎಂಬಂತೆ ಮಾತಾಡತೊಡಗುತ್ತಾರೆ. ನನ್ನ ಪ್ರಕಾರ, ಎರಡೂಕಡೆಗಳವರ ನೈತಿಕ ಅಹಮಿಕೆ ಪೊಳ್ಳು. ಮನೋರೋಗಿಗಳನ್ನು ಬಿಟ್ಟರೆ, ಉಳಿದ ಯಾರೂ ಹಿಂಸೆ, ಕೊಲೆ, ಸುಲಿಗೆ ರಕ್ತಪಾತಗಳನ್ನು ಇಷ್ಟಪಡುವುದಿಲ್ಲ. ಮನುಷ್ಯರ ಕೊಲೆ ಬಿಡಿ, ಹೆದ್ದಾರಿಯಲ್ಲಿ, ನಾಯಿ ಅಥವಾ ಬೆಕ್ಕು, ಲಾರಿಯ ಅಡಿ ಸಿಕ್ಕಿ ಸಾಯುವುದನ್ನು ನೋಡಲು ಸಹ ಹೆಚ್ಚುವರಿಗೆ ಸಾಧ್ಯವಾಗುವುದಿಲ್ಲ. ಆದ್ದರಿಂದ, 'ನಾನು ಅಹಿಂಸೆಯನ್ನು ಎತ್ತಿ ಹಿಡಿಯುವ; ವಾದದಲ್ಲಿ ನನ್ನ ಎದುರಾಳಿ ಹಿಂಸಾವಾದಿ' ಎಂಬ ವರಸೆಯಲ್ಲಿ, ಈ ವಿಷಯದ ಬಗ್ಗೆ ಮಾತಾಡುವುದು ತೀರತಪ್ಪು. ಹಿಂಸೆ ಈ ಸಮಾಜಕ್ಕೆ ಹತ್ತಿದ ರೋಗದ ಒಂದು ಲಕ್ಷಣ. ಇನ್ನು ದೇಶಪ್ರೇಮದ ಮಾತಿಗೆ ಬಂದರೆ, ಅದರ ಗುತ್ತಿಗೆಯನ್ನು ಬಿ.ಜೆ.ಪಿ.ಗೆ ವಹಿಸಿಕೊಡುವುದಕ್ಕೂ ನಾನು ತಯಾರಿಲ್ಲ. ನಾವೆಲ್ಲರೂ ದೇಶ ಪ್ರೇಮಿಗಳೇ. ಅದನ್ನು ಯಾರ ಎದುರೂ ನಾವು ಸಾಬೀತು ಮಾಡಬೇಕಾಗಿಲ್ಲ.

ಆದರೆ ಸೆಕ್ಯುಲರಿಸಂ ಬಗ್ಗೆ ನಾನು ಮುಂದೆ ಹೇಳುವ ಮಾತುಗಳಿಗೆಲ್ಲ ಒಂದು ವಿಚಾರವನ್ನು ತಳಹದಿಯಾಗಿ ಇಟ್ಟುಕೊಂಡಿದ್ದೇನೆ. ಸರಕಾರದ ಹಲವು ನಮೂನೆಗಳಲ್ಲಿ – ವಂಶಪಾರಂಪರ್ಯದ ಆಳ್ವಿಕೆ, ಮಿಲಿಟರಿ ಸರಕಾರ, ಒಂದು ಪಕ್ಷದ ಅಥವಾ ತತ್ವದ ಸರ್ವಾಧಿಕಾರ, ತಂತ್ರಜ್ಞರು ನಡೆಸುವ ಸರಕಾರ, ಧರ್ಮಗುರುಗಳು ಹೇಳಿದಂತೆ ನಡೆಯುವ ಸರಕಾರ – ಹೀಗೆ ಹಲವು ನಮೂನೆಗಳ ಸರಕಾರಗಳಲ್ಲಿ ಪ್ರಜಾಪ್ರಭುತ್ವ ಸರಕಾರವೇ ಅತ್ಯುತ್ತಮವಾದದ್ದು. ಪ್ರಜಾಪ್ರಭುತ್ವವೆಂದರೆ, ಶಬ್ದವೇ ಹೇಳುವಹಾಗೆ ಪ್ರಜೆಗಳಿಂದ ಆಯ್ಕೆಯಾದ ಸರಕಾರ ಆಡಳಿತ ನಡೆಸುವ ಪದ್ಧತಿ. ಪ್ರಜಾಪ್ರಭುತ್ವ, ಚುನಾವಣೆಗಳ ಮುಖಾಂತರ ಆಯ್ಕೆಯಾಗುವ ಸರಕಾರವಲ್ಲದೆ ಇನ್ನೂ ಹಲವು ವಿಚಾರಗಳನ್ನು ಒಳಗೊಂಡಿದೆ: ೧. ಪ್ರಜೆಗಳೆಲ್ಲರೂ ಸರಕಾರದ ದೃಷ್ಟಿಯಲ್ಲಿ ಸಮಾನರು ಎಂಬ ಗ್ರಹಿಕೆ, ೨. ಪ್ರಜೆಗಳೆಲ್ಲರಿಗೂ ಸಮಾನವಾಗಿ



ಅನ್ವಯವಾಗುವ ಕಾನೂನು, ೩. ಕಾನೂನಿನ ಆಳ್ವಿಕೆ ಮತ್ತು ಕಾನೂನಿನಕ್ರಮ, ಅಂದರೆ ಯಾವುದೇ ವ್ಯಕ್ತಿಯ ಅಥವಾ ಗುಂಪಿನ ನಿರ್ದೇಶನಕ್ಕೆ ಒಳಪಡದೆ, ಕಾನೂನಿನ ಚೌಕಟ್ಟಿನಲ್ಲಿ ಸರಕಾರದ ಆಳ್ವಿಕೆ, ೪. ಸ್ವತಂತ್ರ ನ್ಯಾಯಾಂಗ, ೫. ಮಾಧ್ಯಮಗಳ ಸ್ವಾತಂತ್ರ, ೬. ನಾಗರಿಕ ಸಮಾಜದ ಸಂಸ್ಥೆಗಳು – ಉದಾಃ ವಿಶ್ವವಿದ್ಯಾಲಯಗಳು ಸ್ವಾಯತ್ತವಾಗಿ ಕಾರ್ಯನಿರ್ವಹಿಸುವ ಸ್ವಾತಂತ್ರ್ಯ, ೭. ಮುಕ್ತ ಸಂಚಾರ,ಉದ್ಯೋಗ ಮತ್ತು ಸಂಘಟನೆಗಳ ಸ್ವಾತಂತ್ರ್ಯ.

ಭಾರತ ಸ್ವತಂತ್ರ ರಾಷ್ಟ್ರವಾದ ಮೇಲೆ, ಅಧಿಕಾರಕ್ಕೆ ಬಂದ ತಾತ್ಕಾಲಿಕ ಸರಕಾರ ಸಂವಿಧಾನ ರಚನೆಗೆ ಒಂದು ಸಮಿತಿ ನೇಮಿಸಿತು. ಈ ಸಮಿತಿ ಭಾರತ, ಪ್ರಾಂತ್ಯ ಮತ್ತು ಕೇಂದ್ರ – ಹೀಗೆ ಎರಡು ಹಂತಗಳ ಸರಕಾರಗಳುಳ್ಳ ಒಂದು ಗಣರಾಜ್ಯವಾಗಿರಬೇಕು ಮತ್ತು ಈ ಸರಕಾರಗಳನ್ನು ಪ್ರಜೆಗಳು ಮತದಾನದ ಮುಖಾಂತರ ಆಯ್ಕೆ ಮಾಡಬೇಕು ಎಂದು ತೀರ್ಮಾನಿಸಿತು. ಆ ಪ್ರಕಾರ ೧೯೫೨ರಲ್ಲಿ ಭಾರತದಲ್ಲಿ ಪ್ರಥಮ ಚುನಾವಣೆಗಳು ನಡೆದವು. ಈ ಚುನಾವಣೆಯಲ್ಲಿ ದೇಶದ ಎಲ್ಲ ಪ್ರಜೆಗಳಿಗೂ, ಲಿಂಗ, ಜಾತಿ ಭೇದಗಳನ್ನು ಪರಿಗಣಿಸದೆ, ವಿದ್ಯೆ ಆಸ್ತಿಗಳ ಅಂತರವನ್ನೂ ಲೆಕ್ಕಿಸದೆ, ಮತದಾನದ ಹಕ್ಕು ದೊರೆಯಿತು. ಈ ದೇಶದ ಚರಿತ್ರೆಯಲ್ಲಿ ಹಿಂದೆ ಎಂದೂ, ಪ್ರಜೆಗಳಿಗೆ ಈ ಬಗೆಯ ಹಕ್ಕು ದೊರೆತದ್ದಿಲ್ಲ. ಅಂದರೆ ಪ್ರಜಾಪ್ರಭುತ್ವವೆನ್ನುವುದು, ಈ ದೇಶದ ಮಟ್ಟಿಗೆ ಒಂದು ಆಧುನಿಕ ಮೌಲ್ಯ. ಪ್ರಜಾಪ್ರಭುತ್ವಕ್ಕೆ ನಮ್ಮ ದೇಶದಲ್ಲಿ ಇರುವುದು ಬರೇ ೫೦ ವರ್ಷಗಳ ಚರಿತ್ರೆ. ಬ್ರಿಟಿಷರ ಆಡಳಿತವಿದ್ದ ಕಾಲದಲ್ಲಿ, ಅವರ ನೇರ ಆಳ್ವಿಕೆಗೆ ಒಳಪಟ್ಟ ರಾಜ್ಯಗಳಲ್ಲಿ ಸೀಮಿತ ಅಧಿಕಾರವುಳ್ಳ ಪ್ರಜಾ ಸರಕಾರಗಳಿದ್ದವು. ಕೆಲವು ದೇಶೀಯ ಸಂಸ್ಥಾನಗಳಲ್ಲೂ, ಉದಾಃ ಮೈಸೂರು, ಪ್ರಜಾಪ್ರತಿನಿಧಿ ಸಭೆಗಳಿದ್ದವು. ಆದರೆ ಈ ಯಾವ ಪ್ರಯೋಗದಲ್ಲೂ, ಸ್ವಾತಂತ್ರ್ಯಾನಂತರ ಚಾಲ್ತಿಗೆ ಬಂದ ಹಾಗೆ, ಎಲ್ಲ ಪ್ರಜೆಗಳಿಗೂ, ಯಾವುದೇ ಶರತ್ತಿಲ್ಲದೆ ಮತದಾನದ ಹಕ್ಕು ದೊರೆತಿರಲಿಲ್ಲ. ಹಾಗಾಗಿ ಸರಕಾರದ ದೃಷ್ಟಿಯಲ್ಲೂ ಎಲ್ಲ ಪ್ರಜೆಗಳೂ ಸಮಾನರು ಎಂಬ ದೃಷ್ಟಿಯೇ ಕ್ರಾಂತಿಕಾರಿಯಾದದ್ದು. ದೇಶದ ಹಲವಾರು ಮತಧರ್ಮಗಳ ನಡುವೆ ಸರಕಾರ, ವ್ಯತ್ಯಾಸ ಕಲ್ಪಿಸಲಿಲ್ಲ; ಧರ್ಮಗಳ ಒಳಗೆ ಇರುವ ಮೇಲುಕೀಳಿನ ಶ್ರೇಣಿಗಳನ್ನೂ ಅದು ಮನ್ನಿಸಲಿಲ್ಲ. ಇದು ಕೂಡ, ಈ ದೇಶದ ಮಟ್ಟಿಗೆ ಒಂದು ಹೊಸ ಬೆಳವಣಿಗೆ. ಭಾರತದಲ್ಲಿ ಮಾತ್ರವಲ್ಲ, ಇಂಗ್ಲೆಂಡ್ ಅಮೇರಿಕಗಳಲ್ಲಿ ಕೂಡ, ಪ್ರಜೆಗಳೆಲ್ಲರಿಗೂ ಮತದಾನದ ಸಮಾನ ಹಕ್ಕು, ತೀರ ಹಳೆಯದ್ದೇನೂ ಅಲ್ಲ. ಅಮೇರಿಕದಲ್ಲಿ ನೀಗ್ರೋ ಪ್ರಜೆಗಳಿಗೆ ಮತದಾನದ ಹಕ್ಕು ದೊರತದ್ದು ಈ ಶತಮಾನದಲ್ಲೇ. ನ್ಯೂಝಿಲೆಂಡ್ ಮತ್ತು ಅಮೇರಿಕಾದ ವ್ಯೋಮಿಂಗ್ ಪ್ರಾಂತ್ಯ

ಬಿಟ್ಟರೆ, ೨೦ನೆಯ ಶತಮಾನದ ಮೊದಲ ದಶಕದವರೆಗೆ, ಜಗತ್ತಿನ ಬೇರೆ ಎಲ್ಲಿಯೂ ಮಹಿಳೆಯರಿಗೆ ಮತದಾನದ ಹಕ್ಕಿರಲಿಲ್ಲ. ಇಂಗ್ಲೆಂಡ್ ಅಮೇರಿಕಗಳ ಮಹಿಳೆಯರಿಗೆ ಕೂಡ, ರಾಜಕೀಯ ಹೋರಾಟದ ನಂತರವೇ ಈ ಹಕ್ಕು ದೊರೆಯಿತು. ಕಾರ್ಮಿಕ ಕಾನೂನು, ಸಮಾನ ಕೆಲಸಕ್ಕೆ ಸಮಾನ ವೇತನ, ದುಡಿಯುವ ಸ್ಥಳಗಳಲ್ಲಿ ಮಹಿಳೆಯರಿಗೆ ಸಮಾನತೆ ಮುಂತಾದ ಇನ್ನಿತರ ಪ್ರಜಾಪ್ರಭುತ್ವದ ಹಕ್ಕುಗಳು ಕೂಡ ಈ ಶತಮಾನದಲ್ಲೇ, ಹೋರಾಡಿ ಗಳಿಸಿಕೊಂಡಿರು ವಂತಹವು.

ಸ್ವತಂತ್ರಭಾರತ ಒಂದು ಪ್ರಜಾಪ್ರಭುತ್ವ ಗಣರಾಜ್ಯವಾಗಿರಬೇಕು ಎಂದು ಸಂವಿಧಾನ ಸಮಿತಿ ತೀರ್ಮಾನಿಸಿದ್ದು ಸರಿಯಷ್ಟೆ. ಆ ಸಮಿತಿಯಲ್ಲಿ ಹಿರಿಯ ರಾಜಕಾರಣಿಗಳಿದ್ದರು; ಕಾನೂನು ಪಂಡಿತರಿದ್ದರು. ಸಮಿತಿಯ ಅಧ್ಯಕ್ಷ ಡಾ। ಅಂಬೇಡ್ಕರ್, ದೇಶದ ದಲಿತನಾಯಕನಾಗಿರುವುದರ ಜೊತೆಗೆ ಒಬ್ಬ ಹಿರಿಯ ಚಿಂತಕರೂ ಆಗಿದ್ದರು. ಆದರೆ ಈ ದೇಶ ಪ್ರಜಾಪ್ರಭುತ್ವವಾಗಿರಬೇಕು ಎಂಬುದು, ಉನ್ನತ ಮಟ್ಟದ ತಜ್ಞರ ಸಮಿತಿಯೊಂದು ತೆಗೆದುಕೊಂಡ ಒಂದು ಒಳ್ಳೆಯ ತೀರ್ಮಾನ ಎಂದು ತಿಳಿಯುವುದು ತಪ್ಪಾಗುತ್ತದೆ. ನಮ್ಮ ಸ್ವಾತಂತ್ರ್ಯ ಚಳುವಳಿಯಲ್ಲಿಯೇ, ಈ ತೀರ್ಮಾನವನ್ನು ಅನಿವಾರ್ಯಗೊಳಿಸುವ ಒತ್ತಾಸೆಗಳಿದ್ದವು. ೧೯ನೆಯ ಶತಮಾನದ ಕೊನೆ ಮತ್ತು ೨೦ನೆಯ ಶತಮಾನದ ಮೊದಲ ವರ್ಷಗಳಲ್ಲಿ ವಸಾಹತುದೇಶಗಳಲ್ಲಿ ದೊಡ್ಡ ಮಟ್ಟದ ಸ್ವಾತಂತ್ರ್ಯ ಹೋರಾಟಗಳು ನಡೆದಿವೆ. ಆದರೆ ಗಾಂಧೀಜಿಯವರ ನಾಯಕತ್ವದಲ್ಲಿ ನಡೆದ ಭಾರತದ ಸ್ವಾತಂತ್ರ್ಯ ಹೋರಾಟ, ವಿಶಿಷ್ಟವಾದದ್ದು. ಸ್ವತಃ ಗಾಂಧೀಜಿಯವರೇ ಜಗತ್ತಿನ ಇತರ ಯಾವುದೇ ಸ್ವಾತಂತ್ರ್ಯ ಹೋರಾಟಗಾರರನ್ನೂ ಹೋಲುವುದಿಲ್ಲ. ದಕ್ಷಿಣ ಅಮೇರಿಕದಲ್ಲಿ ಸೈಮನ್ ಬೊಲಿವಾರ್, ಕ್ಯಾಸ್ಟ್ರೋ, ಅಲೆಂಡೆ, ಆಫ್ರಿಕಾ ಖಂಡದಲ್ಲಿ ಕೆನ್ಯಾಟ್ಟಾ, ಎನ್ ಕ್ರೂಮಾ, ಲುಮುಂಬಾ, ನೈರೇರೆ, ನಾಸೇರ್, ಮಂಡೇಲಾ, ಇಂಡೋನೇಷ್ಯದಲ್ಲಿ ಸುಕರ್ಣ, ಚೀನದಲ್ಲಿ ಮಾವೋ ತ್ಸೆತುಂಗ್, ವಿಯೆಟ್ನಾಂನಲ್ಲಿ ಹೋಚಿಮಿನ್ಹ್ – ಹೀಗೆ ಪಶ್ಚಿಮದ ವಸಾಹತುಶಾಹಿ ಮತ್ತು ಸಾಮ್ರಾಜ್ಯಶಾಹಿಗಳ ವಿರುದ್ಧ ಹೋರಾಡಿದ ನಾಯಕರ ಸಂಖ್ಯೆ ದೊಡ್ಡದಿದೆ. ಈ ದೇಶಗಳ ಸ್ವಾತಂತ್ರ್ಯ ಚಳುವಳಿ ಹಿಡಿದಹಾದಿ ಮತ್ತು ಪರ್ಯವಸಾನಗೊಂಡ ರೀತಿಗಳಲ್ಲಿ ವಿಭಿನ್ನವಾಗಿದೆ. ಭಾರತದ ಸ್ವಾತಂತ್ರ್ಯ ಚಳುವಳಿಯ ವೈಶಿಷ್ಟ್ಯವೆಂದರೆ, ಅದು ದೇಶದಿಂದ ಬ್ರಿಟಿಷರನ್ನು ತೊಲಗಿಸುವ ರಾಜಕೀಯ ಚಳುವಳಿಯಾಗಿರುವುದರ ಜೊತೆಜೊತೆಗೆ, ಪ್ರಜೆಗಳಲ್ಲಿ ಸಮಾನತೆಯನ್ನು ತರಲು ಯತ್ನಿಸುವ ಒಂದು ಸಾಮಾಜಿಕ ಚಳುವಳಿಯೂ ಆಗಿದ್ದುದು.

ಗಾಂಧೀಜಿಯವರೂ ಸೇರಿದಂತೆ, ಈ ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ



ಅನೇಕರು, ಇಂಗ್ಲಿಷ್ ಭಾಷೆ, ಇಂಗ್ಲೆಂಡ್‌ನ ಪ್ರಜಾಪ್ರಭುತ್ವ ಮತ್ತು ಆಂಗ್ಲ ಚಿಂತಕರ ಬರವಣಿಗೆಗಳಿಂದ ಆಳವಾಗಿ ಪ್ರಭಾವಿತರಾಗಿದ್ದರು. ಅವರಲ್ಲಿ anglophobes (ಆಂಗ್ಲದ್ವೇಷಿಗಳು) ಯಾರೂ ಇರಲಿಲ್ಲ. ಕೆಲವರು ಉದಾಃ ನೆಹರೂ, ತಮ್ಮನ್ನು anglophiles (ಆಂಗ್ಲ ಸಂಸ್ಕೃತಿಯ ಪ್ರೇಮಿಗಳು) ಎಂದು ಕರೆದುಕೊಂಡಿದ್ದರು. ಇದರಿಂದಾಗಿ, ಭಾರತದ ಸ್ವಾತಂತ್ರ್ಯ ಹೋರಾಟ ಒಂದು ನಿಶ್ಚಿತ ಗುರಿಯ ಕಡೆಗೆ ವೇಗವಾಗಿ ಧಾವಿಸುವ ಕ್ರಿಯೆಯಾಗುವ ಬದಲು, ಒಂದು ಸುದೀರ್ಘವಾದ ರಾಜಕೀಯ ಸಾಮಾಜಿಕ ವಾಗ್ವಾದವಾಗಿ ಮಾರ್ಪಟ್ಟಿತು. ಈ ವಾಗ್ವಾದದಲ್ಲಿ ಅನೇಕ ವಿಚಾರಧಾರೆಗಳಿದ್ದವು. ಗಾಂಧೀಜಿ ಒಬ್ಬ ಆಸ್ತಿಕ ಹಿಂದು ಆಗಿದ್ದುಕೊಂಡೇ ಅಸ್ಪೃಶ್ಯರ ಹಕ್ಕುಗಳ ಬಗ್ಗೆ ಯೋಚಿಸಿದರು; ಆದರೆ ಅದೇ ವೇಳೆಗೆ, ಅಂಬೇಡ್ಕರ್, ಈ ವಿಷಯದಲ್ಲಿ ಗಾಂಧೀಜಿಗಿಂತ ಬೇರೆಯಾದ ರೀತಿಯಲ್ಲಿ ಯೋಚಿಸಿದರು ಮತ್ತು ಅಸ್ಪೃಶ್ಯರ ಹೋರಾಟಗಳನ್ನು ಸಂಘಟಿಸಿದರು. ಅಂಬೇಡ್ಕರ್‌ರ ರಾಜಕೀಯ ಜೀವನ ಪ್ರಾರಂಭವಾದದ್ದೇ ೧೯೨೭ರಲ್ಲಿ ಮಹಾರಾಷ್ಟ್ರದ ಮಹಾಡ್ ಎಂಬ ಸಣ್ಣ ಊರಿನ ಕೆರೆಯ ನೀರನ್ನು, ಸವರ್ಣೀಯರ ವಿರೋಧದ ನಡುವೆಯೂ ಹಕ್ಕೊತ್ತಾಯದಲ್ಲಿ ಬಳಸುವುದರ ಮುಖಾಂತರ. ಅಸ್ಪೃಶ್ಯರು ಮೆರವಣಿಗೆಯಲ್ಲಿ ಹೋಗಿ ಈ ಕೆರೆಯ ನೀರನ್ನು ತೆಗೆದರು. ಅಂಬೇಡ್ಕರ್ ಮೆರವಣಿಗೆಯ ನಾಯಕತ್ವ ವಹಿಸಿದ್ದರು. ಸ್ವಾತಂತ್ರ್ಯ ಮತ್ತು ಸಮಾನತೆ ಎಂದರೆ ನಿತ್ಯ ಜೀವನದ ಸಂಗತಿಗಳಲ್ಲಿ ಸ್ವಾತಂತ್ರ್ಯ ಮತ್ತು ಸಮಾನತೆ ಎಂಬುದನ್ನು ಅಂಬೇಡ್ಕರ್ ಆ ದಿನ ಸ್ಥಾಪಿಸಿಬಿಟ್ಟರು. ಗಾಂಧೀಜಿ ಹಿಂದೂ ಧರ್ಮದ ಚೌಕಟ್ಟಿನ ಒಳಗೆ ಅಸ್ಪೃಶ್ಯತೆಗೆ ಪರಿಹಾರ ಹುಡುಕಿದರೆ, ಅಂಬೇಡ್ಕರ್, ಅದರ ಹೊರಗೆ ನಿಂತು ಅಸ್ಪೃಶ್ಯರನ್ನು ಸಂಘಟಿಸಿದರು. ಅವರಿಗೆ ಸವರ್ಣೀಯ ಹಿಂದುಗಳ ಔದಾರ್ಯದಲ್ಲಿ ನಂಬಿಕೆ ಇರಲಿಲ್ಲ. ಗಾಂಧೀಜಿಯವರ ಶ್ರದ್ಧೆ ಮತ್ತು ಹೃದಯ ಪರಿವರ್ತನೆಯ ಮಾರ್ಗದಲ್ಲೂ ಅವರಿಗೆ ವಿಶ್ವಾಸವಿರಲಿಲ್ಲ. ಹಾಗಾಗಿ ಅವರು ಅಸ್ಪೃಶ್ಯತೆಯ ಸಮಸ್ಯೆಗೆ ಪರಿಹಾರವನ್ನು ಜನಸಂಘಟನೆ, ಕಾನೂನು ಮತ್ತು ಸರಕಾರದ ಕ್ರಮಗಳಲ್ಲಿ ಅರಸಿದರು. ಬ್ರಿಟಿಷ್ ಆಳ್ವಿಕೆಯಿಂದ ದೇಶ ಸ್ವತಂತ್ರವಾಗಬೇಕು ಎಂಬ ಧ್ಯೇಯದಲ್ಲಿ ಅಂಬೇಡ್ಕರ್‌ರಿಗೂ ಗಾಢವಾದ ನಂಬಿಕೆಇತ್ತು. ಆದರೆ ದೇಶ ಸ್ವತಂತ್ರವಾದ ಮೇಲೆ ಅಧಿಕಾರ ಯಾರ ಕೈಗೆ ಬರುತ್ತದೆ? ಅದು ಮೇಲು ಜಾತಿಯ ಸವರ್ಣೀಯ ಹಿಂದುಗಳ ವಶವಾದರೆ ಅಸ್ಪೃಶ್ಯರ ದಾಸ್ಯ ಎಂದಿನಂತೆ ಮುಂದು ವರಿಯುವುದಿಲ್ಲವೆ? ಇದು ಅಂಬೇಡ್ಕರ್‌ರನ್ನು ಕಾಡಿದ ಪ್ರಶ್ನೆ.

ಸ್ವಾತಂತ್ರ್ಯಾನಂತರ ಅಧಿಕಾರ ಯಾರ ಕೈಗೆ? ಈ ಪ್ರಶ್ನೆ ಅಂಬೇಡ್ಕರ್ ಮಾತ್ರವಲ್ಲ, ಚಳುವಳಿಯ ಇತರ ನಾಯಕರನ್ನೂ ಬಾಧಿಸಿದೆ. ಸ್ವಾತಂತ್ರ್ಯ ಚಳುವಳಿಯ

ಮಹಾಪ್ರವಾಹದ ಒಂದು ಕಿರುತೊರೆ ಎನ್ನಬಹುದಾದ ಉಗ್ರಗಾಮಿಗಳು ಮತ್ತು ಸಾವರ್ಕರ್‌ರಂತಹವರನ್ನು ಬಿಟ್ಟರೆ, ಈ ಚಳುವಳಿಯ ಉದ್ದಕ್ಕೂ, ದೇಶದ ಜನ ಸಾಮಾಜಿಕವಾಗಿ ಸ್ವತಂತ್ರರಾಗುವ ಬಗೆ ಹೇಗೆ ಎಂಬ ಕಾಳಜಿ ರಾಜಕೀಯ ಸ್ವಾತಂತ್ರ್ಯದಷ್ಟೇ ಪ್ರಧಾನವಾಗಿತ್ತು. ೧೯ನೆಯ ಶತಮಾನದ ಉತ್ತರಾರ್ಧದಲ್ಲಿ ಮಹಾರಾಷ್ಟ್ರ ಮತ್ತು ಬಂಗಾಳಗಳಲ್ಲಿ ನಡೆದ ಜಾತಿ ಸಮಾನತೆ, ಸ್ತ್ರೀ ಸ್ವಾತಂತ್ರ್ಯ, ವಿಧವಾವಿವಾಹ, ಅಸ್ಪೃಶ್ಯರಿಗೆ ಸಮಾನತೆ ಮತ್ತು ಶಿಕ್ಷಣ ಮುಂತಾದ ಸಮಾಜ ಸುಧಾರಣೆಯ ಚಳುವಳಿಗಳು ಸ್ವಾತಂತ್ರ್ಯಹೋರಾಟಕ್ಕೆ ಹಾದಿ ಮತ್ತು ಗುರಿ ಎರಡನ್ನೂ ತೋರಿಸಿಕೊಟ್ಟವು. ದಕ್ಷಿಣ ಭಾರತದಲ್ಲಿ ಶಿಕ್ಷಣ ಸಂಸ್ಥೆ ಮತ್ತು ಸರಕಾರೀ ಉದ್ಯೋಗಗಳಲ್ಲಿ ಕೆಳಜಾತಿಯವರಿಗೆ ಮೀಸಲಾತಿಗಾಗಿ, ಈ ಶತಮಾನದ ಪ್ರಾರಂಭದಲ್ಲಿಯೇ ಚಳುವಳಿ ನಡೆದಿತ್ತು. ಬ್ರಿಟಿಷರು ಜಾರಿಗೆ ತಂದ ಶಿಕ್ಷಣ ಪದ್ಧತಿಯಲ್ಲಿ ಕೆಳಜಾತಿಯ ಕೆಲವರಾದರೂ ಶಿಕ್ಷಣ ಪಡೆಯುವುದು ಸಾಧ್ಯ ವಾಯಿತು. ಬ್ರಟಿಷರು ಇಲ್ಲಿ ತೆರೆದ ಮಳಿಗೆ, ಫ್ಯಾಕ್ಟರಿ, ರೈಲ್ವೇ ಮತ್ತು ಸರಕಾರೀ ಕಛೇರಿಗಳಲ್ಲಿ ಕೆಳಜಾತಿಯವರೂ ಉದ್ಯೋಗ ಪಡೆದರು. ರಷ್ಯದ ಕ್ರಾಂತಿಯ ಪ್ರಭಾವ ಭಾರತದಲ್ಲೂ ಕಾಣಿಸಿಕೊಂಡು, ಇಲ್ಲಿ ಕಾರ್ಮಿಕ ಸಂಘಟನೆಗಳೂ ಪ್ರಾರಂಭವಾದವು. ಸರಿ ಸುಮಾರಿಗೆ ಇದೇ ವೇಳೆಗೆ, ಭಾರತದ ಭಾಷೆಗಳ ಸಾಹಿತ್ಯದಲ್ಲೂ ಆಧುನಿಕ ಪ್ರಕಾರಗಳು ಕಾಣಿಸಿಕೊಂಡವು. ಕನ್ನಡದಲ್ಲಿ ನಾವು ಇದನ್ನು 'ನವೋದಯ ಚಳುವಳಿ ಎಂದು ಗುರುತಿಸುತ್ತೇವೆ. ಈ ಎಲ್ಲ ವಿದ್ಯಮಾನಗಳು ಏನನ್ನು ಸೂಚಿಸುತ್ತವೆ? ಈ ದೇಶದ ಜನಜೀವನದ ಮೇಲೆ ಜಾತಿ ಪದ್ಧತಿ ಮತ್ತು ಸಂಪ್ರದಾಯದ ಹಿಡಿತ ಸಡಿಲವಾಗ ತೊಡಗಿತ್ತು. ಸ್ವಾತಂತ್ರ್ಯ ಚಳುವಳಿ, ಈ ವಿದ್ಯಮಾನಕ್ಕೆ ಒಂದು ಕಾರಣವೂ ಹೌದು; ಅದರ ಪರಿಣಾಮವೂ ಹೌದು. ಸ್ವಾತಂತ್ರ್ಯ ಚಳುವಳಿ ಜನರ ಮುಂದಿಟ್ಟ ಸ್ವತಂತ್ರ ಭಾರತದ ಕಲ್ಪನೆಯಲ್ಲಿ ಎಲ್ಲ ಸಂಪ್ರದಾಯಗಳನ್ನೂ ಧಿಕ್ಕರಿಸಿದ ಜಾತಿ ಸಮಾನತೆ ಮತ್ತು ಸ್ತ್ರೀ ಪುರುಷರ ಸಮಾನತೆ ಮುಖ್ಯ ವಿಚಾರಗಳಾಗಿವೆ. ಪ್ರಜಾಪ್ರಭುತ್ವ, ನಮ್ಮ ಸ್ವಾತಂತ್ರ್ಯ ಚಳುವಳಿಯ ಒಂದು ಗುರಿಯಾಗಿದ್ದು ದೇಶದ ಜನ ಅದನ್ನು ಹೋರಾಡಿ ಪಡೆದರು. ಸಂವಿಧಾನ ಸಮಿತಿ ಅದನ್ನು ಬರಹ ಮೂಲಕ ಪ್ರಕಟಪಡಿಸಿತು ಅಷ್ಟೆ.

ನಮ್ಮ ಸಂವಿಧಾನದ ಪ್ರಕಾರ, ಭಾರತ ಒಂದು ಸೆಕ್ಯುಲರ್ ಪ್ರಜಾಪ್ರಭುತ್ವ. ಸೆಕ್ಯುಲರ್ ಎಂದರೆ ಲೌಕಿಕ ವ್ಯವಹಾರಕ್ಕೆ ಸಂಬಂಧಿಸಿದ್ದು; ಧರ್ಮ ಮತ್ತು ಧಾರ್ಮಿಕ ನಂಬಿಕೆಗಳಿಗೆ ಸಂಬಂಧ ಪಡದೆ ಇರುವುದು; ಒಂದು ರಾಜಕೀಯ ತತ್ವವಾಗಿ ಸೆಕ್ಯುಲರಿಸಂ ಎಂದರೆ ಪ್ರಭುತ್ವವನ್ನು ಧರ್ಮದಿಂದ ದೂರವಿಡುವುದು ಮತ್ತು ಆಡಳಿತದಲ್ಲಿ ಧರ್ಮ ತಲೆಹಾಕದ ಹಾಗೆ ನೋಡಿಕೊಳ್ಳುವುದು. ಧರ್ಮದಲ್ಲಿ ನಂಬಿಕೆ



ಅಥವಾ ಅಪನಂಬಿಕೆ – ಎರಡೂ ಈ ವಾದಕ್ಕೆ ಮುಖ್ಯವಲ್ಲ. ಕಮ್ಯುನಿಸ್ಟ್ ಸರಕಾರಗಳಿಗೆ ಇರುವಂತೆ, ಧರ್ಮದ ಬಗ್ಗೆ ವಿರೋಧದ ಸೈದ್ಧಾಂತಿಕ ನಿಲುವನ್ನೂ ಸೆಕ್ಯುಲರಿಸಂ ಹೊಂದಿಲ್ಲ. ಅದು ಪ್ರಜೆಗಳ ವೈಯಕ್ತಿಕ ಬದುಕಿನಲ್ಲಿ ಧರ್ಮದ ಪ್ರಾಮುಖ್ಯತೆಯನ್ನು ಅಲ್ಲಗಳೆಯುವುದೂ ಇಲ್ಲ; ಹೀಗಳೆಯುವುದೂ ಇಲ್ಲ. ಪ್ರಜೆಗಳನ್ನು ಯಾವುದೇ ಧರ್ಮದ ಪರವಾಗಿ ಅಥವಾ ವಿರುದ್ಧವಾಗಿ ಎತ್ತಿಕಟ್ಟುವ ಇರಾದೆಯನ್ನೂ ಅದು ಹೊಂದಿಲ್ಲ. ಪ್ರಜೆಗಳ ಧಾರ್ಮಿಕ ಆಚರಣೆಗಳಲ್ಲೂ ಅದು ಮಧ್ಯೆ ಪ್ರವೇಶಿಸುವುದಿಲ್ಲ. ಸರಕಾರ ಒಂದು ಲೌಕಿಕ ಸಂಸ್ಥೆಯಾಗಿರುವುದರಿಂದ, ಅಲ್ಲಿ ಧರ್ಮಕ್ಕೆ ಏನೂ ಕೆಲಸವಿಲ್ಲ ಎಂಬುದು ಸೆಕ್ಯುಲರಿಸಂನ ನಿಲುವು. ಉದಾಹರಣೆಗೆ, ತನ್ನನ್ನು ಒಂದು ಸೆಕ್ಯುಲರ್ ರಾಷ್ಟ್ರ ಎಂದು ಕರೆದುಕೊಂಡ ದೇಶಗಳಲ್ಲಿ ಮೊದಲನೆಯದಾದ ಫ್ರಾನ್ಸ್‌ನಲ್ಲಿ, ಅಲ್ಲಿನ ಪ್ರಧಾನ ಧರ್ಮವಾದಿ ಕ್ರೈಸ್ತಧರ್ಮ ಸರಕಾರದ ವ್ಯವಹಾರಗಳಲ್ಲಿ ತಲೆಹಾಕುವಂತಿಲ್ಲ. ಅಲ್ಲಿನ ಸಾರ್ವಜನಿಕ ಬದುಕಿನಲ್ಲಿ ಆ ಧರ್ಮದ ಸಂಕೇತಗಳು ಕೂಡ ಕಾಣಿಸಿಕೊಳ್ಳುವಹಾಗಿಲ್ಲ. ಆದರೆ ಪ್ರಜೆಗಳಿಗೆ, ತಮ್ಮ ವೈಯಕ್ತಿಕ ಬದುಕಿನಲ್ಲಿ ಯಾವುದೇ ಧರ್ಮವನ್ನು ಅನುಸರಿಸುವ ಅಥವಾ ಯಾವ ಧರ್ಮದಲ್ಲೂ ನಂಬಿಕೆ ಇರಿಸಿಕೊಳ್ಳದೆ ಇರುವ ಸ್ವಾತಂತ್ರ್ಯವಿದೆ. ಸೆಕ್ಯುಲರ್ ಅಥವಾ ಧರ್ಮ ನಿರಪೇಕ್ಷ ಸರಕಾರಕ್ಕೆ ಫ್ರಾನ್ಸ್ ಒಂದು ಮಾದರಿ. ಫ್ರಾನ್ಸ್‌ನ ಬಹುಸಂಖ್ಯಾತ ಪ್ರಜೆಗಳು ಒಂದೇ ಧರ್ಮವನ್ನು ಕ್ರೈಸ್ತ – ಪಾಲಿಸುವವರು. ಭಾರತದಲ್ಲಿ ಹಲವು ಮತ ಧರ್ಮಗಳಿವೆ. ಇಲ್ಲಿ ಹಿಂದುಗಳೇ ಬಹುಸಂಖ್ಯಾತ ಪ್ರಜೆಗಳಾದರೂ, ಗಣನೀಯ ಸಂಖ್ಯೆಯ ಮುಸ್ಲಿಮರು, ಕ್ರೈಸ್ತರು, ಸಿಖ್ಖರು, ಬೌದ್ಧರು, ಜೈನರು ಮತ್ತು ಇತರ ಮತಧರ್ಮಗಳವರೂ ಇದ್ದಾರೆ. ಈ ಮತಧರ್ಮಗಳ ಅನುಯಾಯಿಗಳಿಗೆ ಪ್ರಜಾಪ್ರಭುತ್ವ ರೀತ್ಯಾ ಸಮಾನಹಕ್ಕುಗಳು ದೊರೆಯಬೇಕು ಎಂದಾದರೆ, ಪ್ರಭುತ್ವ ಅವರ ನಡುವೆ ತಾರತಮ್ಯವೆಣಿಸಕೂಡದು; ಅವರ ಸಂಖ್ಯಾಬಲವನ್ನೂ ಪರಿಗಣಿಸ ಕೂಡದು. ಧರ್ಮ ಒಪ್ಪಿಕೊಂಡಿರುವ ಮೇಲು ಕೀಳಿನ ಭಾವನೆಗಳಿಗೆಲ್ಲ ಅದು ಮಣೆ ಹಾಕಕೂಡದು. ಹಾಗಾಗಿ ಭಾರತದಲ್ಲಿ ಸೆಕ್ಯುಲರ್ ಎಂಬ ಶಬ್ದಕ್ಕೆ ಧರ್ಮ ನಿರಪೇಕ್ಷ ಎಂಬ ಅರ್ಥದ ಜೊತೆಗೆ ಸರ್ವಧರ್ಮ ಸಮಭಾವ ಎಂಬ ಅರ್ಥವೂ ಇದೆ. ಭಾರತದ ಮತಧರ್ಮಗಳ ವೈವಿಧ್ಯದಿಂದಲೇ ಈ ರೀತಿಯ ನಿರ್ವಚನೆ ಅನಿವಾರ್ಯವಾಗಿದೆ.

ಪ್ರಜಾಪ್ರಭುತ್ವ, ಸ್ವಾತಂತ್ರ್ಯ ಮತ್ತು ಸಮಾನತೆಗಳ ಹಾಗೆ ಪ್ರಭುತ್ವವನ್ನು ಧರ್ಮದಿಂದ ದೂರವಿಡುವುದೂ ಒಂದು ಆಧುನಿಕ ವಿಚಾರ. ಸೀಸರನಿಗೆ ಸಲ್ಲಬೇಕಾದದ್ದನ್ನು ಸೀಸರನಿಗೆ ಮತ್ತು ದೇವರಿಗೆ ಸಲ್ಲಬೇಕಾದ್ದನ್ನು ದೇವರಿಗೆ ಸಲ್ಲಿಸಿ ಎಂಬ ಬೈಬಲ್‌ನ ಆದೇಶದಲ್ಲೇ ದೊರೆ ಮತ್ತು ದೇವರುಗಳ ನಡುವೆ ವ್ಯತ್ಯಾಸ

ಕಲ್ಪಿಸಿದ್ದರೂ, ಯೂರೋಪ್‌ನಲ್ಲಿ ಮಧ್ಯ ಯುಗದವರೆಗೆ ಅಂತಹ ಗೆರೆಕೊರೆದ ವ್ಯತ್ಯಾಸವಿರಲಿಲ್ಲ. ಆದರೆ ೧೫ನೆ ಶತಮಾನದಿಂದ ಈಚೆಗೆ ಯುರೋಪ್‌ನಲ್ಲಿ ಆದ ಬೆಳವಣಿಗೆಗಳು ನೇಸಾನ್ಸ್, ರೆಫರ್ಮೇಶನ್, ಔದ್ಯಮಿಕ ಕ್ರಾಂತಿ, ವಿಜ್ಞಾನ ಮತ್ತು ತಂತ್ರಜ್ಞಾನಗಳ ಬೆಳವಣಿಗೆಗಳು, ಮತಧರ್ಮಗಳ ಮೇಲೆ ಎರಡು ಪರಿಣಾಮಗಳನ್ನು ಮಾಡಿದವು:

೧. ಜನಜೀವನದ ಮೇಲೆ ಮತಧರ್ಮಗಳ ಪ್ರಭಾವ ಕಡಿಮೆಯಾಯಿತು.

೨. ಪ್ರಭುತ್ವಗಳು ಧರ್ಮದ ಹಿಡಿತದಿಂದ ತಪ್ಪಿಸಿಕೊಂಡವು; ಅಧಿಕಾರದ ಹೊಸಕೇಂದ್ರಗಳು ಕಾಣಿಸಿಕೊಂಡವು.

ಸೆಕ್ಯುಲರಿಸಂನ ಹುಟ್ಟಿಗೆ ರೆಫರ್ಮೇಶನ್ ಚಳುವಳಿ ಕೂಡಾ ಒಂದು ಕಾರಣವಾಗಿರುವುದನ್ನು ಇಲ್ಲಿ ಸ್ವಲ್ಪದರಲ್ಲಿ ಪರಿಶೀಲಿಸಬಹುದು. ನಮ್ಮ ವಚನಕಾರರ ಚಳುವಳಿಯನ್ನು ತುಸು ಹೋಲುವ, ರೆಫರ್ಮೇಶನ್, ಯೂರೋಪ್‌ನಲ್ಲಿ ಕ್ರೈಸ್ತ ಧರ್ಮಗುರುಗಳ ದರ್ಪ ಅನಾಚಾರಗಳ ವಿರುದ್ಧ, ಆ ಧರ್ಮದ ಒಳಗೇ ನಡದ ಕ್ರಾಂತಿ. ಇದಕ್ಕೆ ಯುರೋಪ್‌ನ ಔದ್ಯಮಿಕ ಕ್ರಾಂತಿಯೂ ತನ್ನದೇ ಆದ ರೀತಿಯಲ್ಲಿ ನೆರವು ಕೊಟ್ಟಿದೆ. ೧೫ನೆಯ ಶತಮಾನದಲ್ಲಿ ಜರ್ಮನಿಯ ಯೊಹಾನ್ ಗಟೆನ್‌ಬರ್ಗ್, ಲೋಹದ ಮೊಳೆಗಳಲ್ಲಿ ಅಕ್ಷರಗಳ ಅಚ್ಚು ಕೆತ್ತಿ ಪುಸ್ತಕಗಳನ್ನು ಮುದ್ರಿಸುವ ತಂತ್ರಜ್ಞಾನವನ್ನು ಆವಿಷ್ಕರಿಸಿದ. ಈ ಹೊಸ ಮುದ್ರಣ ತಂತ್ರಜ್ಞಾನ ಕ್ರಾಂತಿಕಾರಿ ಯಾದದ್ದೇನೋ ಸರಿ! ಆದರೆ ಅದರಲ್ಲಿ ಮೊತ್ತ ಮೊದಲಿಗೆ ಅಚ್ಚಾದ ಪುಸ್ತಕ ಮಾತ್ರ ಒಂದು ಪ್ರಾಚೀನ ಧರ್ಮಗ್ರಂಥ – ಪವಿತ್ರ ಬೈಬಲ್! (ಭಾರತದ ದೇಶೀಯ ಭಾಷೆಗಳಲ್ಲಿ ಮುದ್ರಣ ಪ್ರಾರಂಭವಾದಾಗಲೂ ಮೊದಲು ಮುದ್ರಿತವಾದ ಪುಸ್ತಕಗಳಲ್ಲಿ ಧಾರ್ಮಿಕ ಕೃತಿಗಳದ್ದೇ ಮೇಲುಗೈ. ಕೈ ಬರಹದಿಂದ ಪ್ರತಿ ತೆಗೆಯುವುದರ ಬದಲು ಒಂದು ಪುಸ್ತಕ ಅಚ್ಚಾಗುವುದು ಎಂದರೆ ಜಾಸ್ತಿ ಪ್ರತಿಗಳನ್ನು ಅಚ್ಚು ಮಾಡುವುದು ಅಷ್ಟೇ ಅಲ್ಲ; ಅಚ್ಚು ಮಾಡಿದ ಪಠ್ಯ ಮೊದಲಿಗಿಂತ ಹೆಚ್ಚು ಜನರಿಗೆ ಓದಲು ಸಿಗುತ್ತದೆ. ಆ ಪಠ್ಯದ ಅರ್ಥೈಸುವಿಕೆಗಳು ಮೊದಲಿಗಿಂತ ಹೆಚ್ಚು ವೈವಿಧ್ಯಮಯವಾಗಿರುತ್ತವೆ; ಅದರಲ್ಲಿ ಭಿನ್ನಾಭಿಪ್ರಾಯಗಳೂ ತಲೆದೋರಬಹುದು! ಪಠ್ಯದ ಪಾವಿತ್ರ್ಯವೂ ಪ್ರಶ್ನಾರ್ಹ ಎನಿಸಿಕೊಳ್ಳಬಹುದು. ಗಟೆನ್‌ಬರ್ಗ್‌ಬೈಬಲ್‌ನಿಂದ ಈ ಎಲ್ಲ ಪರಿಣಾಮಗಳೂ ಆದವು. ಅದುವರೆಗೆ ಬೈಬಲ್ ಜನರಿಗೆ ಅಪರಿಚಿತವಾದ ಲ್ಯಾಟಿನ್ ಭಾಷೆಯಲ್ಲಿತು. ಜನಕ್ಕೆ ಅದು ಓದಿನಿಂದ ಪರಿಚಿತವಾಗಿರಲಿಲ್ಲ. ಗಟೆನ್‌ಬರ್ಗ್ – ಬೈಬಲ್‌ನಿಂದಾಗಿ, ಜನ ಈ ಪವಿತ್ರಗ್ರಂಥವನ್ನು ತಮಗೆ ಗೊತ್ತಿರುವ ಜರ್ಮನ್ ಭಾಷೆಯಲ್ಲಿ ಓದುವಂತಾಯಿತು. ಈ ಓದಿನಿಂದ ಅವರು ಮೊದಲು ಕಂಡುಕೊಂಡ ಸತ್ಯವೆಂದರೆ,



ತಮ್ಮ ಧರ್ಮಗುರುಗಳು, ಬೈಬಲ್‌ನ ಬೋಧನೆಗೆ ಅನುಗುಣವಾಗಿ ಬದುಕುತ್ತಿಲ್ಲ ಎಂಬುದು. ಚರ್ಚುಗಳು ತಮ್ಮ ಮೇಲೆ ಒತ್ತಾಯದಲ್ಲಿ ಹೇರಿದ ತೆರಿಗೆ ಮತ್ತು ಬಲಾತ್ಕಾರದ ಬಿಟ್ಟಿ ಚಾಕರಿಗಳಿಗೂ ಬೈಬಲ್‌ನಲ್ಲಿ ಸಮ್ಮತಿ ಇಲ್ಲ ಎಂಬುದೂ ಜನರಿಗೆ ಗೊತ್ತಾಯಿತು. ಅದುವರೆಗೆ ಬೈಬಲ್‌ನ ಸೂಕ್ತಿಗಳಿಗೆ ಅರ್ಥ ಹಚ್ಚುವ ಅಧಿಕಾರ ಧರ್ಮಗುರುಗಳಿಗೆ ಮಾತ್ರ ಇತ್ತು. ಬೈಬಲ್‌ನ ಮುದ್ರಿತ ಪ್ರತಿ ಅದನ್ನು ಕೊನೆಗೊಳಿಸಿತು. ೧೪ನೆಯ ಶತಮಾನದಲ್ಲಿ ಇಂಗ್ಲೆಂಡ್‌ನ ಜಾನ್ ವೈಕ್ಲಿಫ್ ಎಂಬಾತ ಬೈಬಲ್‌ಗೆ ಧರ್ಮಗುರುಗಳು ಕೊಡುವ ವ್ಯಾಖ್ಯಾನವೇ ಅಂತಿಮವಾದದ್ದು ಎಂಬುದನ್ನು ಪ್ರಶ್ನಿಸಿದ. ತನ್ನ ಪ್ರತಿಭಟನೆಗೆ ಅವನು ಅನುಸರಿಸಿದ ವಿಧಾನವೂ ಗಟೆನ್‌ಬರ್ಗ್ – ಬೈಬಲ್‌ನಷ್ಟೇ ಸರಳವಾದದ್ದು. ಅವನು ಬೈಬಲ್‌ನ್ನು ಇಂಗ್ಲಿಷಿಗೆ ಭಾಷಾಂತರಿಸಿ ಪ್ರತಿಗಳನ್ನು ತೆಗೆದು, ಜನರಿಗೆ ಹಂಚಿಬಿಟ್ಟ. ಮುದ್ರಣಗೊಂಡ ಬೈಬಲ್ ಧರ್ಮದ ಕುರಿತ ಜನರ ತಿಳುವಳಿಕೆಯನ್ನು ಹೆಚ್ಚಿಸಿತು; ಆದರೆ ಅದೇ ವೇಳೆ ಜನ ಧರ್ಮವನ್ನು ಪ್ರಶ್ನಿಸುವಂತೆಯೂ ಮಾಡಿತು. ಈ ಪ್ರಶ್ನಿಸುವ ಮನೋಧರ್ಮವೇ ಮುಂದೆ, ಚರ್ಚ್‌ನ ಗುರುಗಳ ವಿರುದ್ಧ ಮಾರ್ಟಿನ್ ಲೂಥರನ ಪ್ರತಿಭಟನೆಯಲ್ಲಿ ಪೂರ್ಣಪ್ರಮಾಣದಲ್ಲಿ ವ್ಯಕ್ತವಾಯಿತು. ಲೂಥರನ ಚಳುವಳಿಯಿಂದ, ಕ್ರೈಸ್ತಧರ್ಮ ಕ್ಯಾಥೋಲಿಕ್ ಮತ್ತು ಪ್ರಾಟೆಸ್ಟಾಂಟೆ ಎಂಬ ಎರಡು ಪ್ರಧಾನ ಪಂಗಡಗಳಾಗಿ ಒಡೆದುಕೊಂಡಿತು; ಪ್ರಾಟೆಸ್ಟಾಂಟರು ಪೋಪ್‌ನನ್ನು ಗುರು ಎಂದು ಒಪ್ಪಿಕೊಳ್ಳಲು ನಿರಾಕರಿಸಿದರು. ಮಾರ್ಟಿನ್ ಲೂಥರನ ಈ ಪ್ರತಿಭಟನೆಗೆ ಯೂರೋಪ್‌ನ ಕೆಲವು ಸಂಸ್ಥಾನಗಳ ದೊರೆಗಳೂ ಬೆಂಬಲ ಕೊಟ್ಟರು. ಅವರಿಗೂ ಪೋಪ್‌ನ ಹಿಡಿತದಿಂದ ಹೊರ ಬರಬೇಕಾಗಿತ್ತು. ಧರ್ಮ ಮತ್ತು ಲೌಕಿಕ ಅಧಿಕಾರಗಳ ನಡುವಿನ ವ್ಯತ್ಯಾಸ ಹೆಚ್ಚು ಹೆಚ್ಚು ಸ್ಪಷ್ಟವಾಗತೊಡಗಿತು; ಜೊತೆಗೆ ಧರ್ಮದ ಸಂಸ್ಥೆ ಕೂಡ ಹೆಚ್ಚು ಪ್ರಜಾಸತ್ತಾತ್ಮಕ ವಾಯಿತು. ಮಾರ್ಟಿನ್ ಲೂಥರನ ಚಳುವಳಿಯಲ್ಲಿ ಪ್ರಾರಂಭವಾದ ಈ ಪ್ರಕ್ರಿಯೆ ಫ್ರೆಂಚ್ ಮಹಾಕ್ರಾಂತಿಯಲ್ಲಿ (೧೭೮೯) ಪೂರ್ಣಗೊಂಡಿತು. ಈ ಕ್ರಾಂತಿಯಲ್ಲಿ ಫ್ರಾನ್ಸ್‌ನ ಜನತೆ ಪ್ರತಿಭಟಿಸಿದ್ದು ಆಳುವ ಲೂಯಿ ದೊರೆಯ ದುರಾಡಳಿತ ಮತ್ತು ಶ್ರೀಮಂತ ಭೂಮಾಲಿಕರ ದರ್ಪವನ್ನು ಮಾತ್ರವಲ್ಲ. ಅವರ ಜೊತೆ ಕೈ ಜೋಡಿಸಿದ್ದ ಚರ್ಚ್‌ನ ಬಲಾತ್ಕಾರದ ಶುಲ್ಕ ವಸೂಲಿ ಮತ್ತು ಧರ್ಮಗುರುಗಳ ಲೋಲುಪ ಜೀವನ ಶೈಲಿಗಳನ್ನೂ ಜನ ಧಿಕ್ಕರಿಸಿದರು. ಸಮಾನತೆ ಮತ್ತು ಸ್ವಾತಂತ್ರ್ಯಗಳಿಗಾಗಿ ನಡೆದ ಹೋರಾಟ, ಚರ್ಚ್‌ನ ವಿರುದ್ಧ ಪ್ರತಿಭಟನೆಯಾಗಿ ಮಾರ್ಪಡುವುದು ಆಕಾಲದ ಅನಿವಾರ್ಯವಾಗಿತ್ತು. ಸಮಾನತೆಗಾಗಿ ನಡೆಯುವ ರಾಜಕೀಯ ಹೋರಾಟಗಳು ಒಂದಲ್ಲ ಒಂದು ಹಂತದಲ್ಲಿ ಮತಧರ್ಮಗಳ ಸಾಂಸ್ಥಿಕ ಸ್ವರೂಪವನ್ನು

ಎದುರುಹಾಕಿಕೊಳ್ಳುವುದು ಅನಿವಾರ್ಯವಾಗಿದೆ. ಭಾರತದಲ್ಲೂ ಬುದ್ಧನಿಂದ ಹಿಡಿದು ಅಂಬೇಡ್ಕರ್ ಮತ್ತು ಗಾಂಧೀಜಿಯವರ ವರೆಗೆ, ಇದಕ್ಕೆ ಹಲವು ಉದಾಹರಣೆಗಳನ್ನು ಕೊಡಬಹುದು. ಸಮಾನತೆಗಾಗಿ ಧರ್ಮದ ಒಳಗೇ ಹೋರಾಟ ನಡೆದಾಗ, ಅದು ಲೌಕಿಕ ಸತ್ತೆಯ ವಿರುದ್ಧ ಹೋರಾಟವಾಗಿ ಪರಿವರ್ತಿತವಾದದ್ದೂ ಇದೆ. ಉದಾ: ಕರ್ನಾಟಕದ ವಚನಕಾರರ ಚಳುವಳಿ. ಧರ್ಮ ಆಶ್ವಾಸನೆಕೊಡುವ ಸ್ವಾತಂತ್ರ್ಯ ಸಮಾನತೆಗಳನ್ನು ಅದು ಈಡೇರಿಸದೆ ಹೋದಾಗ, ಆ ಮೌಲ್ಯಗಳನ್ನು ರಾಜಕೀಯದಲ್ಲಿ ಅರಸುವುದರ ವ್ಯಕ್ತರೂಪವೇ ಫ್ರೆಂಚ್ ಮಹಾಕ್ರಾಂತಿ. ಆ ಕ್ರಾಂತಿ ಸೋತರೂ ಅದರ ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವಗಳ ಘೋಷಣೆ ಈಗಲೂ ಜಗತ್ತಿನಾದ್ಯಂತ ಪ್ರತಿಧ್ವನಿಸುತ್ತಿದೆ. ನಮ್ಮ ದೇಶದ ಸಂವಿಧಾನ ಕೂಡ ಆ ಶಬ್ದಗಳನ್ನು ತನ್ನ ತಲೆ ಬರಹದಲ್ಲೇ ಸೇರಿಸಿಕೊಂಡಿದೆ. ಫ್ರೆಂಚ್ ಮಹಾಕ್ರಾಂತಿಯ ಮಾನವ ಹಕ್ಕುಗಳ ಘೋಷಣೆ, ಧರ್ಮದ ಲೌಕಿಕ ಅಧಿಪತ್ಯವನ್ನು ಸಂಪೂರ್ಣವಾಗಿ ತಿರಸ್ಕರಿಸಿತು. ಈಗ ಜಗತ್ತಿನಾದ್ಯಂತ, ಪ್ರಜಾಪ್ರಭುತ್ವ ದೇಶಗಳು ಅಂಗೀಕರಿಸಿರುವ ಈ ಘೋಷಣೆಯ ೪ ನಾಲ್ಕು ಮುಖ್ಯ ಅಂಶಗಳು, ಸೆಕ್ಯುಲರಿಸಂನ ತತ್ವಕ್ಕೆ ಮೂಲಾಧಾರವಾಗಿರುವಂತಹವು.

೧. ಎಲ್ಲ ಮನುಷ್ಯರೂ ಹುಟ್ಟಿನಿಂದ ಸಮಾನರು ಮತ್ತು ಸಮಾನಹಕ್ಕು ಉಳ್ಳವರು. (ಈ ಮೌಲ್ಯವನ್ನು ಭಾರತದ ಅಸ್ಪೃಶ್ಯತೆ ಮತ್ತು ಜಾತಿಪದ್ಧತಿಗಳಿಗೆ ಹೋಲಿಸಿ ನೋಡಿ).

೨. ಕಾನೂನುಗಳನ್ನು ಮಾಡುವವರನ್ನು ಆಯ್ಕೆ ಮಾಡಲು ಎಲ್ಲ ಪ್ರಜೆಗಳಿಗೂ ಸಮಾನಹಕ್ಕು.

೩. ಮಾತು,ಬರವಣಿಗೆ, ಅಭಿಪ್ರಾಯ ಮತ್ತು ಮುದ್ರಣದ ಸ್ವಾತಂತ್ರ್ಯ.

೪. ಸಂಪತ್ತಿಗೆ ಅನುಗುಣವಾಗಿ ಸರಕಾರ ಮಾತ್ರ ತೆರಿಗೆ ವಿಧಿಸುವುದು.

ಫ್ರೆಂಚ್ ಕ್ರಾಂತಿ ಪ್ರಾರಂಭವಾದ ವರ್ಷವೇ, ಆ ಕ್ರಾಂತಿಯ ಮಹಾದಾರ್ಶನಿಕ ಎಂದು ಪರಿಗಣಿತವಾಗಿರುವ ರೂಸ್ಸೋ ತೀರಿಕೊಂಡ. ಆದರೆ ಫ್ರೆಂಚ್ ವ್ಯವಸ್ಥೆಗೆ ಆತ ಹಾಕಿದ ಎರಡು ಸವಾಲುಗಳನ್ನು ಫ್ರಂಚ್ ಕ್ರಾಂತಿ ತನ್ನದನ್ನಾಗಿ ಮಾಡಿಕೊಂಡಿತು. ೧. ಸ್ವಾತಂತ್ರ್ಯ ಮತ್ತು ಅಸಮಾನತೆಗಳು ಒಟ್ಟಿಗೆ ಇರುವುದು ಹೇಗೆ ಸಾಧ್ಯ? ೨. ಸಂಪತ್ತಿನ ಒಡೆತನದಲ್ಲಿ ಅಸಮಾನತೆ ಇರುವಷ್ಟು ಕಾಲ ಕಾನೂನಿನ ದೃಷ್ಟಿಯಲ್ಲಿ ಎಲ್ಲರೂ ಸಮಾನರಾಗುವುದು ಹೇಗೆ ಸಾಧ್ಯ? ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಸಹ ಈ ಪ್ರಶ್ನೆಗಳು ಮತ್ತೆ ಮತ್ತೆ ಕೇಳಿಬಂದಿವೆ. ಗಾಂಧೀಜಿ ಮತ್ತು ಅಂಬೇಡ್ಕರ್ ಅವರ ನಡುವಿನ ಭಿನ್ನಾಭಿಪ್ರಾಯದ ಕೇಂದ್ರದಲ್ಲಿ ಇದ್ದುದೂ ಇವೇ ಎರಡು ಪ್ರಶ್ನೆಗಳು. ಜನ ಒಪ್ಪಿಕೊಳ್ಳದ ಯಾವ ಕಾನೂನೂ ತನಗೆ ಮಾನ್ಯವಲ್ಲ ಎಂದು ರೂಸ್ಸೋ ಘೋಷಿಸಿದ್ದ.



ಈ ಘೋಷಣೆ ಭಾರತದ ಸ್ವಾತಂತ್ರ್ಯ ಚಳುವಳಿಗೂ ಮೂಲಮಂತ್ರವಾಗಿತ್ತು.

ಆಧುನಿಕ ಯುಗದಲ್ಲಿ ಸಮಾಜದ ಮೇಲೆ ಧರ್ಮದ ಹಿಡಿತ ಸಡಿಲವಾಗುವುದಕ್ಕೆ ಇನ್ನೊಂದು ಬಹುಮುಖ್ಯ ಕಾರಣವೆಂದರೆ ಯುರೋಪ್‌ನ ಔದ್ಯಮಿಕ ಕ್ರಾಂತಿ. ವಸ್ತುಗಳ ರಾಶ್ಯುತ್ಪನ್ನ ಮತ್ತು ಬೃಹತ್ ಮಾರಾಟ ವ್ಯವಸ್ಥೆ ಈ ಕ್ರಾಂತಿಯ ಪರಿಣಾಮಗಳು. ವಸ್ತುಗಳ ಉತ್ಪಾದನೆಯಲ್ಲಿ ಔದ್ಯಮಿಕ ಕ್ರಾಂತಿ ಬರಮಾಡಿದ ಹೊಸ ವಿಧಾನಗಳಿಂದ, ಕೆಲಸಗಾರರು ಒಂದೇ ಕಡೆ ದೊಡ್ಡ ಸಂಖ್ಯೆಯಲ್ಲಿ ಸೇರಿ ದುಡಿಯುವುದು ಕೂಡ ಅನಿವಾರ್ಯವಾಯಿತು. ಸಂಪತ್ತಿನ ಉತ್ಪಾದನೆಯಲ್ಲಿ ಕೃಷಿಯ ಬದಲು ಕೈಗಾರಿಕೆ ಮೊತ್ತಮೊದಲಬಾರಿಗೆ ಮೇಲುಗೈ ಪಡೆದದ್ದರಿಂದ ಜನರ ನಂಬಿಕೆಗಳಲ್ಲೂ ಮೂಲಭೂತ ಬದಲಾವಣೆಗಳಾದವು. ಕೃಷಿ ಮನುಷ್ಯಪ್ರಯತ್ನದ ಜೊತೆಗೆ ಮನುಷ್ಯನನ್ನು ಮೀರಿದ ಪ್ರಾಕೃತಿಕ ಶಕ್ತಿಗಳನ್ನೂ ಅವಲಂಬಿಸಿದೆ. ಆದರೆ ಕೈಗಾರಿಕೆಗಳಲ್ಲಿ ಉತ್ಪಾದನೆ, ಸಂಪೂರ್ಣವಾಗಿ ಮನುಷ್ಯನ ಸಂಕಲ್ಪದಿಂದಲೇ ನಡೆಯುವಂತಹದ್ದು. ಇದರಿಂದ ಧರ್ಮದ ಸ್ವರೂಪ ಬೇರೆಯಾಗುವುದು ಅನಿವಾರ್ಯವಾಯಿತು. ಒಂದು ಸ್ಥಳೀಯ ಉದಾಹರಣೆಯ ಮುಖಾಂತರ ಇದನ್ನು ಸ್ಪಷ್ಟಪಡಿಸಬಹುದು. ಕರ್ನಾಟಕದ ಹಳ್ಳಿಗಳ ಜನ ಆಚರಿಸುವ ನಾಗರಪಂಚಮಿ, ಭೂಮಿಹುಣ್ಣಿಮೆ, ದೀಪಾವಳಿಯಂತ, ಹಬ್ಬಗಳಿಗೂ, ಅವರ ಧಾರ್ಮಿಕ ಶ್ರದ್ಧೆಗೂ ಅವರ ಬೇಸಾಯ ವೃತ್ತಿಗೂ, ಋತುಮಾನದ ವ್ಯತ್ಯಾಸಗಳಿಗೂ ಹತ್ತಿರದ ಸಂಬಂಧವಿದೆ. ಆದರೆ ನಮ್ಮ ನಗರಗಳ ಜನ ಇದೇ ಹಬ್ಬಗಳನ್ನು ಆಚರಿಸುವಾಗ ಇಂತಹ ಜೀವಂತ ಸಂಬಂಧ ಕಾಣಿಸುವುದಿಲ್ಲ.

ಔದ್ಯಮಿಕ ಕ್ರಾಂತಿಯ ಜೊತೆಜೊತೆಗೆ ವಿಜ್ಞಾನ ಮತ್ತು ತಂತ್ರಜ್ಞಾನಗಳ ಬೆಳವಣಿಗೆ, ಡಾರ್ವಿನ್‌ನ ವಿಕಾಸವಾದ ಮತ್ತು ಮಾರ್ಕ್ಸ್‌ವಾದ ಸೆಕ್ಯುಲರಿಸಂನ ತತ್ವಕ್ಕೆ ತಮ್ಮದೇ ಆದ ಅಂಶಗಳನ್ನು ಸೇರಿಸಿವೆ. ಡಾರ್ವಿನ್‌ನ ವಿಕಾಸವಾದದ ಬಗ್ಗೆ ಹೆಚ್ಚಿಗೆ ಹೇಳುವ ಅಗತ್ಯವಿಲ್ಲ. ಈ ಜಗತ್ತು ಮತ್ತು ಇಲ್ಲಿನ ಜೀವಜಾಲ, ದೇವರ ಸೃಷ್ಟಿ ಎಂಬ ನಂಬಿಕೆಯನ್ನೇ ಅದು ನಾಶಪಡಿಸಿತು. ಅದಕ್ಕಿಂತ ಮುಖ್ಯವಾಗಿ ಇಹಲೋಕದ ಬದುಕಿಗೆ, ಇಲ್ಲಿನದ್ದೇ ಸಾಕ್ಷಿಗಳು ಹೇರಳವಾಗಿದ್ದು, ಇದನ್ನು ಮೀರಿದ ದೈವಸಾಕ್ಷಿಯಾಗಲೀ ಪ್ರಮಾಣವಾಗಲೀ ಬೇಕಿಲ್ಲ ಎಂಬ ಧರ್ಮನಿರಪೇಕ್ಷ ನಂಬಿಕೆಯನ್ನು ಡಾರ್ವಿನ್ ವಿಕಾಸವಾದ ಜನಪ್ರಿಯಗೊಳಿಸಿತು. ಯುರೋಪ್‌ನಲ್ಲಿ ಗೆಲಿಲಿಯೋ ಪ್ರಾರಂಭಿಸಿದ ಪ್ರತಿಕ್ರಿಯೆಯನ್ನು ಡಾರ್ವಿನ್ ಪೂರ್ತಿಗೊಳಿಸಿದ. ಮಾರ್ಕ್ಸ್, ಮನುಷ್ಯನ ಪ್ರಜ್ಞೆಯನ್ನು ರೂಪಿಸುವುದು ಈ ಲೋಕದ ಸಂಗತಿಗಳೇ ಹೊರತು, ಪ್ರಜ್ಞೆ ಈ ಲೋಕವನ್ನು ರೂಪಿಸಿಲ್ಲ ಎಂದು ಸಾರಿದ. ಧರ್ಮವೂ ಕೂಡ ಈ ಲೋಕದ, ಸೃಷ್ಟಿಯಾಗಿದ್ದು, ನಾಗರಿಕತೆಯ ಚರಿತ್ರೆಯ ಒಂದು ಹಂತದಲ್ಲಿ ಕಾಣಿಸಿಕೊಂಡದ್ದೇ

ಹೊರತು ಅದರಲ್ಲಿ ಅಪೌರುಷೇಯವಾದದ್ದೇನೂ ಇಲ್ಲ ಎಂದು ಅವನು ವಾದಿಸಿದ. ಅಸಮಾನತೆಯ ಈ ಜಗತ್ತು ನಿಜಕ್ಕೂ ಹೃದಯಹೀನವಾದದ್ದು; ಧರ್ಮ ಈ ಜಗತ್ತಿನ ಹೃದಯವಾಗಲು ಯತ್ನಿಸುತ್ತಿದೆ; ನಿಷ್ಕರುಣಿ ಜಗತ್ತಿನ ಕರುಣೆಯಾಗಲು ಅದು ಬಯಸುತ್ತದೆ; ತುಳಿತಕ್ಕೆ ಒಳಗಾದ ಬಡಜನರ ನಿಟ್ಟುಸಿರಾಗಿ ಅದು ಹೊರ ಹೊಮ್ಮುತ್ತದೆ. ಆದರೆ ಅದೊಂದು ಅಫೀಮು ಮಾತ್ರ ಎಂಬ ಅವನ ಮಾತುಗಳು ಸುಪ್ರಸಿದ್ಧವಾಗಿವೆ.

ಸೆಕ್ಯುಲರಿಸಂನ ಮತ್ತು ಅದನ್ನು ಬೆಳೆಸಿದ ಪಶ್ಚಿಮದ ಜ್ಞಾನಯುಗದ ವೈಚಾರಿಕತೆಯನ್ನು ಈಗ ಅನೇಕ ಚಿಂತಕರು ಪ್ರಶ್ನಿಸತೊಡಗಿದ್ದಾರೆ. ಔದ್ಯಮಿಕ ಕ್ರಾಂತಿ ಮತ್ತು ವಿಜ್ಞಾನದ ಬೆಳವಣಿಗೆ, ಮನುಷ್ಯನನ್ನು ವಿಶ್ವದ ಕೇಂದ್ರ ಎಂದು ಪರಿಗಣಿಸಿದವು. ಈ ಭೂಮಿಯ ಸಮಸ್ತವೂ ಮನುಷ್ಯನ ಉಪಭೋಗಕ್ಕೆ ಮೀಸಲಾಗಿ ಇರುವಂತಹದ್ದು ಎಂಬ ವಿಶ್ವಾಸದಲ್ಲಿ ವಿಜ್ಞಾನ ಪ್ರಕೃತಿಯನ್ನು ಮನುಷ್ಯನ ಪ್ರಯೋಗಾಲಯ ಎಂದು ಭಾವಿಸಿತು. ಪ್ರಕೃತಿಯ ನಿಯಂತ್ರಣ ವಿಜ್ಞಾನದ ಹಿರಿಯ ಸಾಧನೆ ಎನಿಸಿಕೊಂಡಿತು. ಮನುಷ್ಯನೂ ಪ್ರಕೃತಿಯ ಒಂದು ಭಾಗ ಎಂಬುದನ್ನು ಮರೆತು, ವಿಜ್ಞಾನ ಪ್ರಜ್ಞೆಯನ್ನು ಪ್ರಕೃತಿಯಿಂದ ಪ್ರತ್ಯೇಕಿಸಿತು. ಇದರಿಂದ ಮನುಷ್ಯ ಪ್ರಕೃತಿಯನ್ನು ಅಭ್ಯಸಿಸುವವನೂ, ಪರಿವರ್ತಿಸುವವನೂ ಬಳಸಿಕೊಳ್ಳುವವನೂ ಆಗಿ ಮಾರ್ಪಾಡುಹೊಂದಿದ. ಆದರೆ ಅಭ್ಯಾಸಕ್ಕೆ ಮತ್ತು ಪರಿಶೀಲನೆಗೆ ಒಳಪಡುವ ಯಾವುದೂ ಪವಿತ್ರವಾಗಿ ಉಳಿಯುವುದಿಲ್ಲ; ಹೆಚ್ಚೆಂದರೆ ಅದು ಬಳಕೆಗೆ ಯೋಗ್ಯ ಎಂದು ಮಾತ್ರ ಅನ್ನಿಸಿಕೊಳ್ಳ ಬಹುದು. ವಿಜ್ಞಾನ ಪ್ರಕೃತಿಯನ್ನು ಬಳಕೆಯ ವಸ್ತುವನ್ನಾಗಿ ಮಾರ್ಪಡಿಸಿತು. ಜೊತೆಗೆ ವಿಜ್ಞಾನ, ಪ್ರತ್ಯಕ್ಷ ಪ್ರಮಾಣ ಅಥವಾ ಪ್ರಯೋಗದಿಂದ ಸಾಬೀತು ಮಾಡಬಹುದಾದ ಈ ಜಗತ್ತಿನ ಸಂಗತಿಗಳನ್ನು ಮಾತ್ರ ಸತ್ಯವೆಂದು ಭಾವಿಸುತ್ತದೆ. ಈ ಬಗೆಯ ಪ್ರಮಾಣಗಳಿಗೆ ನಿಲುಕದ ಬದುಕಿನ ಸತ್ಯಗಳನ್ನು ಅದು ಗೌಣವೆಂದು ತಿಳಿಯುತ್ತದೆ. ಜ್ಞಾನಯುಗದ ಸತ್ಯದ ಗ್ರಹಿಕೆಯ ಈ ವಿಧಾನವನ್ನು ಆ ಕಾಲದ ಸುಪ್ರಸಿದ್ಧ ಚಿಂತಕ ಡೇಕಾರ್ಟೆಯ; ''I think, therefore I am'' ಎಂಬ ಮಾತು ಸಮರ್ಪಕವಾಗಿ ಪ್ರತಿನಿಧಿಸುತ್ತದೆ. 'ಸ್ವ'ದ ಈ ನಿರ್ವಚನೆಯನ್ನು ತಿರಸ್ಕರಿಸಿದ ಆಫ್ರಿಕಾದ ಸೆನೆಗಾಲ್‌ನ ಕವಿ ಸೆನೆಟ್ ಸೆಂಘೋರ್, ''I feel; therefore I am'' ಎಂದು ಹೇಳಿದ. ಭಾವನೆಗಳನ್ನು ವಿಜ್ಞಾನದ empirical ಪ್ರಮಾಣಗಳಿಂದ ಸಾಬೀತು ಪಡಿಸಲು ಬರುವುದಿಲ್ಲ. ವಿಜ್ಞಾನ ಭಾವನೆಗಳನ್ನು ಗೌಣವೆಂದು ಭಾವಿಸುವುದರಿಂದ ನೈತಿಕ ಪ್ರಶ್ನೆಗಳ ಬಗೆಗೂ ತಲೆಕೆಡಿಸಿಕೊಳ್ಳುವುದಿಲ್ಲ. ಹೀಗಾಗಿ ಅಣುಬಾಂಬ್ ಸ್ಫೋಟವನ್ನು ಕೂಡ ವಿಜ್ಞಾನಿಗಳು ಒಂದು ಪ್ರಯೋಗವೆಂದು ಪರಿಗಣಿಸುತ್ತಾರೆ. ಅದರ ಸಾವು ನೋವು ತನಗೆ ಸಂಬಂಧಿಸಿದ್ದಲ್ಲ ಎಂಬುದು ವಿಜ್ಞಾನದ ನಿಲುವು. ನೈತಿಕ ಅನುಮಾನಗಳು ತನ್ನ ವಸ್ತುನಿಷ್ಠತೆಗೆ



ಅಡ್ಡಬರುತ್ತವೆ ಎಂಬ ತಿಳುವಳಿಕೆ ವಿಜ್ಞಾನದ ವಿಧಾನದಲ್ಲೇ ಸೇರಿಹೋಗಿದೆ.

ಆಧುನಿಕ ಯುರೋಪ್‌ನ ಜ್ಞಾನಯುಗಕ್ಕೆ ಇನ್ನೊಂದು ಕರಾಳ ಮುಖವೂ ಇದೆ. ಕೈಗಾರಿಕಾ ಕ್ರಾಂತಿ, ವಿಜ್ಞಾನದ ಬೆಳವಣಿಗೆ ಮತ್ತು ಉಪಭೋಗವಾದ – ಎಲ್ಲವೂ ಆಧುನಿಕ ಯುರೋಪ್‌ನ ಸಾಮ್ರಾಜ್ಯಶಾಹಿಗೆ ನೆರವಾದವು. ಭೂಮಂಡಲದ ಕೆಳಗಿನ ಅರ್ಧದ ದೇಶಗಳು ಯುರೋಪ್‌ನ ವಸಾಹತುಗಳಾದದ್ದು ಜ್ಞಾನಯುಗದ ಪರಿಣಾಮಗಳಲ್ಲಿ ಒಂದಾಗಿದೆ. ಈ ದೇಶಗಳ ಜನ ಯುರೋಪ್‌ನ ರಾಜಕೀಯ ಆಳ್ವಿಕೆಗೆ ಅಧೀನರಾದದ್ದು ಮಾತ್ರವಲ್ಲ; ಇವರ ಚಿಂತನೆ ಮತ್ತು ಗ್ರಹಿಕೆಯ ವಿಧಾನಗಳು ಕೂಡ ಪಶ್ಚಿಮಕ್ಕೆ ಅಧೀನವಾದವು. ಪರಿಣಾಮವಾಗಿ ವಸಾಹತುಗಳ ಜನ ಹಿಂದುಳಿದವರು ಎಂಬ ಜ್ಞಾನಯುಗದ ತೀರ್ಪನ್ನು ಈ ಜನರೂ ತಲೆಬಾಗಿ ಒಪ್ಪಿಕೊಂಡರು. ವಸಾಹತು ದೇಶಗಳು ಹಿಂದುಳಿದ ದೇಶಗಳು; ಎಂದರೆ ನಾಗರಿಕತೆಯ ಚರಿತ್ರೆಯಲ್ಲಿ ಈ ದೇಶಗಳು ಇನ್ನೂ ಬಾಲ್ಯಾವಸ್ಥೆಯಲ್ಲಿವೆ; ಪಶ್ಚಿಮವಾದರೋ ಪ್ರಬುದ್ಧಾವಸ್ಥೆಯನ್ನು ತಲುಪಿಯಾಗಿದೆ. ಹಿಂದುಳಿದ ದೇಶಗಳಿಗೆ ಪಶ್ಚಿಮದ ಐಹಿಕ ಸಂಪತ್ತಿನ ಸದ್ಯದ ಸ್ಥಿತಿಯೇ, ತಾವು ತಲುಪಬೇಕಾದ ನಿಲ್ದಾಣ ಎಂಬ ಅಭಿವೃದ್ಧಿಯ ಸರಳರೇಖಾತ್ಮಕವಾದ ಒಂದು ಪರಿಕಲ್ಪನೆಯನ್ನೂ ಜ್ಞಾನಯುಗ ಹುಟ್ಟುಹಾಕಿತು. ಇದರಿಂದಾಗಿ ಲೌಕಿಕ ಅಭಿವೃದ್ಧಿಯ ನೆಪದಲ್ಲಿ, 'ಹಿಂದುಳಿದ' ಜನಗಳನ್ನು ಬಗ್ಗು ಬಡಿಯುವುದು ಪಶ್ಚಿಮದ ದೇಶಗಳಿಗೆ ಮತ್ತು ಅವುಗಳ ನೇರ ಪ್ರಭಾವಕ್ಕೆ ಒಳಪಟ್ಟ ಬಡದೇಶಗಳ ಆಳುವ ವರ್ಗಗಳಿಗೆ ಸುಲಭವಾಯಿತು. ಮನುಷ್ಯನನ್ನು ಕೇಂದ್ರವಾಗಿರಿಸಿಕೊಂಡ ವಿಜ್ಞಾನ ಪ್ರಕೃತಿಯನ್ನು ಕೊಳ್ಳೆಹೊಡೆಯುವುದಕ್ಕೆ ಕಾರಣವಾದರೆ, ಜ್ಞಾನಯುಗದ ಲೌಕಿಕ ಅಭಿವೃದ್ಧಿಯ ಕಲ್ಪನೆಗಳು 'ಹಿಂದುಳಿದವರ' ಮೇಲೆ ಹಿಂಸೆ ದಬ್ಬಾಳಿಕೆಗಳಿಗೆ ಕಾರಣವಾದವು. ಚರಿತ್ರೆಯಲ್ಲಿ ಯುದ್ಧಗಳಿಂದ ಆದ ಹಿಂಸೆಯ ನಿಖರ ಮಾಹಿತಿ ದೊರೆಯುತ್ತದೆ. ಆದರೆ ಅಭಿವೃದ್ಧಿಯ ನೆಪದಲ್ಲಿ ನಡೆದ ಹಿಂಸೆಯನ್ನು ಮುಚ್ಚಿಹಾಕಲಾಗಿದೆ. ನರ್ಮದಾ ಆಂದೋಲನದಂತಹ ಅಪರೂಪದ ಕೆಲವು ಚಳುವಳಿಗಳಿಂದ ಈ ಹಿಂಸೆಯನ್ನು ಈಗ ಕೆಲವರಾದರೂ ಗಮನಿಸುತ್ತಿದ್ದಾರೆ. ಧಾರ್ಮಿಕ ಹಿಂಸೆಯನ್ನು ವಿರೋಧಿಸುವ ಸೆಕ್ಯುಲರಿಸಂ ಈ ಅಭಿವೃದ್ಧಿಯ ಹಿಂಸೆಯನ್ನು ಮತ್ತು ಪ್ರಭುತ್ವದ ಹಿಂಸೆಯನ್ನು ಕಣ್ಣುಮುಚ್ಚಿ ಒಪ್ಪಿಕೊಳ್ಳುತ್ತದೆ. ಅಷ್ಟು ಮಾತ್ರವಲ್ಲ ಸೆಕ್ಯುಲರ್ ವಿಜ್ಞಾನ ಮತ್ತು ಸೆಕ್ಯುಲರ್ ರಾಜಕೀಯ ಇಂತಹ ಹಿಂಸೆಗೆ ಕಾರಣವೂ ಆಗಿರುತ್ತದೆ.

ಇದು ಸ್ಥೂಲವಾಗಿ ಸೆಕ್ಯುಲರಿಸಂ ಬಗ್ಗೆ ಈಗ ಕೇಳಿಬರುತ್ತಿರುವ ಟೀಕೆಗಳ ಸಾರಾಂಶ. ಸಂಕ್ಷಿಪ್ತಗೊಳಿಸುವ ತವಕದಲ್ಲಿ ನಾನು ಅನೇಕ ಸಂಗತಿಗಳನ್ನು ಇಲ್ಲಿ ತುಂಬ

ಸರಳಗೊಳಿಸಿದ್ದೇನೆ. ಸೆಕ್ಯುಲರಿಸಂ ಪರಿಕಲ್ಪನೆಯನ್ನು ವಿಮರ್ಶೆಗೆ ಒಳಪಡಿಸಿದ ಸಮಕಾಲೀನ ಚಿಂತಕರಲ್ಲಿ ಅಗ್ರಗಣ್ಯರಾದ ಅಶೀಶ್ ನಂದಿ, ಗಾಂಧೀಜಿಯವರ ವ್ಯಕ್ತಿತ್ವದ ಕುರಿತು ಮಂಡಿಸಿದ ವಾದದ ಪರಿಚಯದೊಂದಿಗೆ ನನ್ನ ಮಾತು ಮುಗಿಸುತ್ತೇನೆ. ಇದು ಕೂಡ ಬಹಳ ಸರಳವಾದ ಮತ್ತು ಒರಟಾದ ಒಂದು ನಿರೂಪಣೆ ಎಂಬುದನ್ನು ಮೊದಲಿಗೇ ಹೇಳಿಬಿಡುತ್ತೇನೆ. ಅಶೀಶ್ ನಂದಿ, ಎಂತಹ ಸೂಕ್ಷ್ಮಜ್ಞನೂ ಬಹುಶ್ರುತನೂ ಆದ ಚಿಂತಕನೆಂದರೆ ಅವರ ವಾದದ ಪರಿಚಯ ಮಾಡಲು ಅವರ ಪ್ರತಿಯೊಂದು ಮಾತನ್ನೂ ವಿಶ್ಲೇಷಿಸಬೇಕು. ಅದಕ್ಕೆ ಈಗ ವೇಳೆ ಇಲ್ಲ; ಇದು ಸಂದರ್ಭವೂ ಅಲ್ಲ. ಹಾಗಾಗಿ ಅವರನ್ನು ಸಂಕ್ಷೇಪಿಸುವ ನನ್ನ ಈ ಉದ್ಧಟತನಕ್ಕೆ ಕ್ಷಮೆ ಇರಲಿ.

ಗಾಂಧೀಜಿ ತನ್ನನ್ನು ತಾನು ಒಬ್ಬ ಸನಾತನಿ ಹಿಂದು ಎಂದು ಕರೆದುಕೊಂಡಿದ್ದರು. ಅವರನ್ನು ಕೊಲೆಮಾಡಿದ ನತ್ಥೂರಾಮ ಗೋಡ್ಸೆ ಕೂಡ ತನ್ನನ್ನು ಹಿಂದು ಧರ್ಮದ ಜೊತೆ ಗುರುತಿಸಿಕೊಂಡಿದ್ದ. ಇವರಿಬ್ಬರ ವ್ಯಕ್ತಿತ್ವವನ್ನು ವಿಶ್ಲೇಷಿಸುತ್ತ ಅಶೀಶ ನಂದಿ ಗಾಂಧೀಜಿಯನ್ನು ಆಳವಾದ ಧಾರ್ಮಿಕ ಶ್ರದ್ಧೆ ಉಳ್ಳವರೆಂದೂ ಗೋಡ್ಸೆ ಒಬ್ಬ ಆಧುನಿಕ ಸೆಕ್ಯುಲರ್ ಮನುಷ್ಯನೆಂದೂ ಹೇಳುತ್ತಾರೆ. ಗಾಂಧೀಜಿ ಆಸ್ತಿಕ ಹಿಂದುವಾಗಿದ್ದರೂ, ಅವರಿಗೆ ಸಂಸ್ಕೃತಿಗಳ ಪ್ರತ್ಯೇಕತೆ ಮತ್ತು ಅನನ್ಯತೆಗಳಲ್ಲಿ ನಂಬಿಕೆ ಇರಲಿಲ್ಲ. ಪೌರ್ವಾತ್ಯ ಮತ್ತು ಪಾಶ್ಚಾತ್ಯ, ಪ್ರಾಚೀನ ಮತ್ತು ಆಧುನಿಕ ಮೂಲದ ವಿಚಾರಗಳಲ್ಲಿ ತನಗೆ ಸರಿಕಂಡದ್ದನ್ನು ಸ್ವೀಕರಿಸಲು ಅವರಿಗೆ ಯಾವ ಪೂರ್ವಗ್ರಹವಾಗಲೀ, ಸಂಕೋಚವಾಗಲೀ ಇರಲಿಲ್ಲ. ಭಗವದ್ಗೀತೆಯ ಹಾಗೆ ಬೈಬಲ್ ಕೂಡ ಅವರು ಸದಾ ಓದುತ್ತಿದ್ದ ಗ್ರಂಥಗಳಲ್ಲಿ ಒಂದಾಗಿತ್ತು. ಅಹಿಂಸೆಯ ವಿಚಾರವನ್ನು ತಾನು ಬೈಬಲ್‌ನ Sermon of the mount ಅಧ್ಯಾಯದಿಂದ ಪಡೆದುಕೊಂಡದ್ದೇ ಹೊರತು ಯಾವುದೇ ಹಿಂದು ಶಾಸ್ತ್ರಪಂಡಿತರಿಂದಲ್ಲ ಎಂದು ಅವರು ಒಂದೆಡೆ ಹೇಳಿದ್ದಾರೆ. ಹೀಗಿದ್ದೂ ಗಾಂಧೀಜಿ ತನ್ನನ್ನು ಒಬ್ಬ ಸನಾತನಿ ಹಿಂದು ಎಂದು ಪರಿಗಣಿಸಿದ್ದು ಪಶ್ಚಿಮದ ಬಂಡವಾಳಶಾಹಿ ಯಂತ್ರನಾಗರೀಕತೆ, ದುರಾಶೆ, ಅಸಮಾನತೆ, ಹಿಂಸೆ ಮತ್ತು ಯುದ್ಧಗಳನ್ನು ವಿರೋಧಿಸುವ ನೆಲೆಯಲ್ಲಿ ಮಾತ್ರ. ಗಾಂಧೀಜಿ ಪಶ್ಚಿಮದ ನಾಗರಿಕತೆಯನ್ನು ಅದರ ಸೆಕ್ಯುಲರ್ ಮತ್ತು ವೈಜ್ಞಾನಿಕ ಜೀವನದೃಷ್ಟಿಗಳ ಕಾರಣಕ್ಕೆ ತಿರಸ್ಕರಿಸಿದರು. ಗಾಂಧೀಜಿಯನ್ನು ಕೊಂದ ಗೋಡ್ಸೆ ಒಬ್ಬ ಸ್ವಘೋಷಿತ ಹಿಂದು ಧರ್ಮ ದುರಂಧರನಾಗಿದ್ದರೂ ಅವನಿಗೆ ಪಶ್ಚಿಮದ ಬಗ್ಗೆ ಗಾಂಧೀಜಿಗಿದ್ದ ಹೇವರಿಕೆ ಇರಲಿಲ್ಲ. ಅವನು ಪ್ರಭುತ್ವ ಬಲಿಷ್ಠವೂ ಆಧುನಿಕವೂ ಆಗಿರಬೇಕು ಎಂದು ಪ್ರತಿಪಾದಿಸುವ ರಾಜಕೀಯ ನಿಲುವಿನವನು. ಗಾಂಧೀಜಿಯ ನೀತಿಬೋಧೆ ಗೊಡ್ಡು ಮತ್ತು ಹೃದಯ ಪರಿವರ್ತನೆಯ ವಿಚಾರ ಅವೈಜ್ಞಾನಿಕ ಎಂದು ಗೋಡ್ಸೆ ಭಾವಿಸಿದ್ದ. ಭಾರತದ ಹಲವು ಬಗೆಯ



ಅಸಮಾನತೆಗಳ ಕುರಿತ ತನ್ನ ತಿರಸ್ಕಾರಕ್ಕೆ, ಗಾಂಧೀಜಿ ಆಧುನಿಕ ವಿಜ್ಞಾನ ಮತ್ತು ಆಧುನಿಕ ರಾಜಕೀಯ ಸಿದ್ಧಾಂತಗಳನ್ನು ಒಂದು ಮಾನದಂಡವಾಗಿ ಇಟ್ಟುಕೊಂಡಿರಲಿಲ್ಲ. ಧರ್ಮ ಮತ್ತು ಪರಂಪರೆಗಳ ದೃಷ್ಟಿಕೋನದಿಂದಲೇ ಅವರು ಭಾರತದ ಸ್ಥಿತಿಗತಿಯನ್ನು ಅರಿಯಲು ಯತ್ನಿಸಿದರು. ಮಾರ್ಕ್ಸ್‌ನ ಹಾಗೆ ಗಾಂಧೀಜಿ ಕೂಡ ಧರ್ಮ ತುಳಿತಕ್ಕೆ ಒಳಗಾದವರ ನಿಟ್ಟುಸಿರು ಮತ್ತು ಹೃದಯಹೀನ ಜಗತ್ತಿನ ಹೃದಯ ಎಂದು ಭಾವಿಸಿದ್ದರು. ಆದರೆ ಮಾರ್ಕ್ಸ್‌ನಂತೆ ಅವರು ಧರ್ಮವನ್ನು ರಾಜಕೀಯದಿಂದ ಪ್ರತ್ಯೇಕಿಸಲಿಲ್ಲ; ಬದಲಿಗೆ ಧರ್ಮದ ಅರಿವನ್ನೇ ಒಂದು ರಾಜಕೀಯ ಅಸ್ತ್ರವನ್ನಾಗಿ ಮಾರ್ಪಡಿಸಲು ಯತ್ನಿಸಿದರು. ಈ ಅರ್ಥದಲ್ಲಿ ಅವರು ಒಬ್ಬ ಧಾರ್ಮಿಕ ವ್ಯಕ್ತಿ ಮತ್ತು ಅವರ ಎದುರಾಳಿಯಾದ ಗೋಡ್ಸೆ ಸೆಕ್ಯುಲರ್ ಪ್ರಭುತ್ವವಾದಿ. ವ್ಯಕ್ತಿಗಳನ್ನು ಮತ್ತು ನೈತಿಕ ಪ್ರಶ್ನೆಗಳನ್ನು ಹೊರಗಿಟ್ಟ ವಸ್ತುನಿಷ್ಠ ಜ್ಞಾನವಾಗಲೀ ಚರಿತ್ರೆಯಾಗಲೀ ಇರಬಲ್ಲದು ಎಂದು ಗಾಂಧೀಜಿ ಯಾವತ್ತೂ ಭಾವಿಸಿರಲಿಲ್ಲ. ಹಾಗಾಗಿ ವ್ಯಕ್ತಿ ಒಳ್ಳೆಯವನಾಗಿರಬೇಕಾದ ಅಗತ್ಯವನ್ನು ನೀಗಿಕೊಂಡ ಪರಿಪೂರ್ಣ ವ್ಯವಸ್ಥೆಯೊಂದು ಇರಲು ಸಾಧ್ಯ ಎಂಬುದನ್ನು ಗಾಂಧೀಜಿ ನಿರಾಕರಿಸಿದರು. ರಾಜಕೀಯದಲ್ಲೂ ಪಾಪಪುಣ್ಯಗಳ ಬಗ್ಗೆ ಯೋಚಿಸಿದ ಗಾಂಧೀಜಿ ಧಾರ್ಮಿಕ ವ್ಯಕ್ತಿ. ಆದರೆ ಪಾಪ ಪುಣ್ಯದ ವಿವೇಚನೆಗೆ ವ್ಯವಧಾನವಿಲ್ಲದ ದುಡುಕಿನ ಪ್ರಭುತ್ವವಾದಿ ಗೋಡ್ಸೆ ಒಬ್ಬ ಸೆಕ್ಯುಲರ್‌ವ್ಯಕ್ತಿ. ಅವನು ಎತ್ತಿ ಹಿಡಿಯುವ ಹಿಂದುತ್ವ ಸಲೀಸಾಗಿ ಆಧುನಿಕ ತಂತ್ರಜ್ಞಾನವನ್ನೂ, ಅಣೆಕಟ್ಟು ಗಳನ್ನೂ ಅಣುಬಾಂಬನ್ನೂ ಒಳಗೊಳ್ಳುತ್ತದೆ ಮಾತ್ರವಲ್ಲ, ಬಲಿಷ್ಠ ರಾಷ್ಟ್ರನಿರ್ಮಾಣಕ್ಕೆ ಅವು ಅವಶ್ಯ ಎಂದೂ ಪ್ರತಿಪಾದಿಸುತ್ತದೆ. ಗೋಡ್ಸೆಯ ಅರ್ಥದಲ್ಲಿ ರಾಷ್ಟ್ರ ಬಲಿಷ್ಠವಾಗುವುದನ್ನು ಗಾಂಧೀಜಿ ವಿರೋಧಿಸಿದ್ದರು. ಅದು ಎಷ್ಟು ಹಿಂಸ್ರವಾಗಬಲ್ಲದು ಎಂಬುದು ಅವರಿಗೆ ಗೊತ್ತಿತ್ತು. ಗಾಂಧೀಜಿಗೆ ಧರ್ಮ ಅವರ ಜೀವದ ಉಸಿರು. ಗೋಡ್ಸೆ ಮತ್ತು ಅವನ ಹಿಂದುತ್ವದ ರಾಜಕೀಯಕ್ಕೆ ಧರ್ಮ ಜನರನ್ನು ಒಂದುಗೂಡಿಸುವ ತಂತ್ರ ಮಾತ್ರ. ಬಲಿಷ್ಠ ರಾಷ್ಟ್ರದ ನಿರ್ಮಾಣಕ್ಕೆ ಕತ್ತಿ, ಚೂರಿ, ಪಿಸ್ತೂಲುಗಳಿಂದ ಹಿಡಿದು ಅಣುಬಾಂಬ್‌ನವರೆಗೆ ಯಾವುದಕ್ಕಾದರೂ ಅವನು ಸೈ ಅನ್ನುವವನೆ. ಇಲ್ಲಿ ಗಮನಿಸಬೇಕಾದ ಸಂಗತಿ ಎಂದರೆ ‘‘ರಾಷ್ಟ್ರ‘‘ಎಂಬ ಅಮೂರ್ತ ಮೌಲ್ಯಕ್ಕೆ ಆ ರೀತಿಯ ಏಕೋನಿಷ್ಠೆಯಿಂದ ನಡೆದುಕೊಂಡವನು ಗೋಡ್ಸೆ ಒಬ್ಬನೇ ಅಲ್ಲ. ರಾಜಕೀಯದ ಬಲಪಂಥೀಯರ ಜೊತೆ ಎಡ ಮತ್ತು ಮಧ್ಯದ ನಿಲುವುಗಳು ಉಳ್ಳವರಲ್ಲೂ ಇಂತಹ ಜನ ಸಾಕಷ್ಟು ಸಂಖ್ಯೆಯಲ್ಲಿದ್ದಾರೆ.

ಸೆಕ್ಯುಲರಿಸಂ ಕುರಿತ ಅಶೀಶ್ ನಂದಿಯವರ ಅಭಿಪ್ರಾಯಗಳನ್ನು ವಿಮರ್ಶಿಸುವ ದುಸ್ಸಾಹಸಕ್ಕೆ ನಾನು ಹೋಗುವುದಿಲ್ಲ. ನನ್ನ ಮಾತುಗಳಿಂದ ಅವರು ಸೆಕ್ಯುಲರ್

ವಿರೋಧಿ ಮತ್ತು ಹಿಂದುತ್ವದ ಪರ ಎಂಬ ಭಾವನೆ ನಿಮ್ಮಲ್ಲಿ ಮೂಡಿಲ್ಲ ಎಂದು ಭಾವಿಸುತ್ತೇನೆ. ಪರ ಅಥವಾ ವಿರೋಧಿ ಎಂದು ಅಷ್ಟು ಸುಲಭವಾಗಿ ಹಣೆಪಟ್ಟಿ ಹಚ್ಚುವುದಕ್ಕೆ ಆಗದ ಚಿಂತಕ ಅವರು. ವಾಸ್ತವವಾಗಿ ಹಿಂದುತ್ವದ ರಾಜಕೀಯ ಸಂಘಟನೆಗಳನ್ನೂ ಧರ್ಮದ ಹೆಸರಿನಲ್ಲಿ ಅವು ನಡೆಸಿದ ಹಿಂಸೆ ಮತ್ತು ದ್ವೇಷದ ಅಪಪ್ರಚಾರಗಳನ್ನೂ ಅವರು ಕಟುವಾಗಿ ಟೀಕಿಸಿದ್ದಾರೆ. ಸೆಕ್ಯುಲರಿಸಂ ಕುರಿತ ತನ್ನ ವಾದವನ್ನು ಅಶೀಶ್ ನಂದಿ, ಆಧುನಿಕ ನಾಗರಿಕತೆಯ ತಮ್ಮ ವಿಮರ್ಶೆಯ ಭಾಗವಾಗಿ ಮುಂದಿಟ್ಟಿದ್ದಾರೆ. ಆದರೆ ಭಾರತದಂತಹ ಹಲವು ಮತ ಧರ್ಮಗಳ ಜನರಿರುವ ದೇಶದಲ್ಲಿ ಸರಕಾರದ ಧೋರಣೆ ಯಾವುದಿರಬೇಕು? ಗಾಂಧೀಜಿಯವರ ವಿಚಾರಗಳು ಸರಕಾರದ ದೈನಂದಿನ ನಿರ್ವಹಣೆಗೆ ಹೇಗೆ ಸಹಾಯಕವಾಗಬಲ್ಲದು? ಸೆಕ್ಯುಲರ್ ಅಲ್ಲದ ಸರಕಾರವೊಂದು ಭಾರತದಲ್ಲಿ ಪ್ರಜಾಸತ್ತಾತ್ಮಕವಾಗಿ ಕಾರ್ಯ ನಿರ್ವಹಿಸ ಬಲ್ಲುದೆ? ಇವು ಅಶೀಶ್ ನಂದಿಯವರ ವಾದದ ಬಗ್ಗೆ ನನಗೆ ಇರುವ ಸಂದೇಹಗಳು.

**ನೀನಾಸಮ್ ರಂಗಶಿಕ್ಷಣ ಕೇಂದ್ರ**

ರಂಗಶಿಕ್ಷಣ ಕೇಂದ್ರದ ವಿದ್ಯಾರ್ಥಿಗಳು ತಮ್ಮ ಅಭ್ಯಾಸಮಾಲಿಕೆಯ ಎರಡನೇ ನಾಟಕವಾಗಿ ಡಾ. ಚಂದ್ರಶೇಖರ ಕಂಬಾರರ ಕಾದಂಬರಿ 'ಸಿಂಗಾರೆವ್ವ ಮತ್ತು ಅರಮನೆ' ಯನ್ನು ಆಧರಿಸಿದ ರಂಗಪ್ರಯೋಗವನ್ನು ಡಿಸೆಂಬರ್ ೧,೨,೩ ಮತ್ತು ೪ರಂದು ಪ್ರದರ್ಶಿಸಿದರು. ಈ ನಾಟಕವನ್ನು ಕೇರಳದ ಶ್ರೀ ನರಿಪ್ಪಟ್ಟ ರಾಜು ಅವರು ನಿರ್ದೇಶಿಸಿದ್ದರು. ಮಧ್ಯಾವಧಿ ರಜೆಯ ನಂತರ ಅಭಿನಯ ಮತ್ತು ರಂಗವಿನ್ಯಾಸದ ಜಂಟಿ ಅಭ್ಯಾಸದ ಉದ್ದೇಶದಿಂದ – ಸಿ.ಆರ್. ಜಂಬೆಯವರ ನಿರ್ದೇಶನದಲ್ಲಿ – ನಾಲ್ಕೈದು ಗುಂಪುಗಳಲ್ಲಿ – ವಿವಿಧ ನಾಟಕಗಳ ರಂಗಸಜ್ಜಿಕೆ, ವಸ್ತ್ರಾಲಂಕಾರ, ನಟನೆ ಮುಂತಾದ ವಿಷಯಗಳ ಪ್ರಾಯೋಗಿಕ ಅಧ್ಯಯನ ನಡೆಸಿದ್ದಾರೆ. ಡಿಸೆಂಬರ್ ಕೊನೆಯಲ್ಲಿ ವಿದ್ಯಾರ್ಥಿಗಳೆಲ್ಲ ಸೇರಿ ಸ್ಥಳೀಯ ಪ್ರೌಢಶಾಲೆಯ ಮಕ್ಕಳಿಗಾಗಿ ಮಕ್ಕಳನಾಟಕವೊಂದನ್ನು ಸಿದ್ಧಪಡಿಸಿ ಡಿಸೆಂಬರ್ ೩೦ರಂದು ಪ್ರದರ್ಶಿಸಿದರು. ಕಾವ್ಯಾಭ್ಯಾಸದ ಅಂಗವಾಗಿ ಡಿಸೆಂಬರ್ ೨೨ ಮತ್ತು ೨೩ರಂದು ಶ್ರೀ ನೀ.ನಾ. ಮಧ್ಯಸ್ಥರಿಂದ ಪಂಪಭಾರತ ಮತ್ತು ಕುಮಾರವ್ಯಾಸ ಭಾರತಗಳ ಆಯ್ದ ಭಾಗಗಳ ವಾಚನವನ್ನು ಏರ್ಪಡಿಸಲಾಗಿತ್ತು. ೨೦೦೧ರ ಜನವರಿ ೨೬,೨೭ ಮತ್ತು ೨೮ರಂದು ರಂಗಶಿಕ್ಷಣ ವಿದ್ಯಾರ್ಥಿಗಳಿಗಾಗಿ ಪ್ರೊ.ಜಿ.ಕೆ.ಗೋವಿಂದರಾಯರು ಪಾಶ್ಚಾತ್ಯ ನಾಟಕ, ಸೊಫೋಕ್ಲಿಸ್, ಆರ್ಥರ್ ಮಿಲ್ಲರ್, ಸ್ಯಾಮುಯೆಲ್ ಬೆಕೆಟ್‌ರ ನಾಟಕಗಳು ಹಾಗೂ ಪಿ. ಲಂಕೇಶ್ ಮತ್ತು ಗಿರೀಶ್ ಕಾರ್ನಾಡರ ನಾಟಕಗಳ ಕುರಿತು ವಿಶೇಷ ಉಪನ್ಯಾಸಗಳನ್ನು ನೀಡಿದರು.

## ನೀನಾಸಮ್ ಪ್ರತಿಷ್ಠಾನದ
## ನಾಟಕ ಮತ್ತು ಸಾಹಿತ್ಯ ಶಿಬಿರಗಳು

೨೦೦೦ನೇ ಡಿಸೆಂಬರ್ ೨ ಮತ್ತು ೩ರಂದು ಕುಂದಾಪುರದಲ್ಲಿ ಭಂಡಾರ್‌ಕಾರ್ಸ್ ಕಾಲೇಜಿನ ಸಹಯೋಗದೊಂದಿಗೆ 'ನಾಟಕ ರಸಗ್ರಹಣ ಶಿಬಿರ'ವು ನಡೆಯಿತು. ಶ್ರೀಯುತರಾದ ಟಿ.ಪಿ. ಅಶೋಕ, ಗುರುರಾವ್ ಬಾಪಟ್, ರಘುನಂದನ, ಸಿ.ಆರ್.ಜಂಬೆ, ಕೆ.ವಿ.ಅಕ್ಷರ ಮುಂತಾದವರು ಸಂಪನ್ಮೂಲವ್ಯಕ್ತಿಗಳಾಗಿ ಸಹಕರಿಸಿದ್ದರು. ಡಿಸೆಂಬರ್ ೨೪ ಮತ್ತು ೨೫ರಂದು ಸಾಗರದಲ್ಲಿ ಲಾಲ್‌ಬಹಾದೂರ್ ಕಾಲೇಜಿನ ಆಶ್ರಯದಲ್ಲಿ 'ಶತಮಾನದ ತಿರುವಿನ ಬಿಕ್ಕಟ್ಟುಗಳು' ಎಂಬ ವಿಷಯದ ಕುರಿತು ಅಧ್ಯಯನ ಶಿಬಿರವೊಂದನ್ನು ನಡೆಸಲಾಯಿತು. ಶ್ರೀಯುತರಾದ ರಾಜೇಂದ್ರ ಚೆನ್ನಿ, ರಾಜಾರಾಮ ಹೆಗಡೆ, ಡಾ.ಸದಾನಂದ, ಜಿ.ರಾಜಶೇಖರ, ಫಣಿರಾಜ್, ನಾಗೇಶ ಹೆಗಡೆ, ಎಲ್.ಜಿ.ಮೀರಾ, ಎಂ.ಜಿ. ನರಸಿಂಹನ್, ಗುರುರಾವ್ ಬಾಪಟ್, ಟಿ.ಪಿ.ಅಶೋಕ, ಅಕ್ಷರ ಕೆ.ವಿ. ಮುಂತಾದವರು ಉಪನ್ಯಾಸಗಳನ್ನು ನೀಡಿ ಗೋಷ್ಠಿಗಳನ್ನು ನಡೆಸಿಕೊಟ್ಟರು. ಡಿಸೆಂಬರ್ ೩೦ ಮತ್ತು ೩೧ರಂದು ಧಾರವಾಡದಲ್ಲಿ ಕರ್ನಾಟಕ ವಿಶ್ವವಿದ್ಯಾನಿಲಯದ ಸಿದ್ಧರಾಮೇಶ್ವರ ಮಾರ್ಗದರ್ಶಿ ಕನ್ನಡ ಅಧ್ಯಯನ ಪೀಠದ ಸಹಯೋಗದಲ್ಲಿ 'ಕಾವ್ಯ ಸಹೃದಯತೆ'ಯ ಶಿಬಿರವನ್ನು ನಡೆಸಲಾಯಿತು. ಶ್ರೀಯುತರಾದ ಕೀರ್ತಿನಾಥ ಕುರ್ತಕೋಟಿ, ಚೆನ್ನವೀರ ಕಣವಿ, ಜಿ.ಎಸ್.ಆಮೂರ್, ಗಿರಡ್ಡಿ ಗೋವಿಂದರಾಜ, ಕಿ.ರಂ.ನಾಗರಾಜ, ಪ್ರಭುಸ್ವಾಮಿಮಠ, ಜಿ.ಕೆ.ಶ್ರೀಕಂಠ ಮೂರ್ತಿ, ಟಿ.ಪಿ.ಅಶೋಕ ಮುಂತಾದವರು ಸಂಪನ್ಮೂಲ ವ್ಯಕ್ತಿಗಳಾಗಿದ್ದರು. ವರ್ಷ ೨೦೦೧ರ ಜನವರಿ ೬ ಮತ್ತು ೭ರಂದು ಉಜಿರೆಯಲ್ಲಿ ಎಸ್.ಡಿ.ಎಂ. ಕಾಲೇಜಿನ ಆಶ್ರಯದಲ್ಲಿ 'ಕಾವ್ಯ ಸಹೃದಯತೆ'ಯ ಶಿಬಿರವು ನಡೆಯಿತು. ಸಂಪನ್ಮೂಲ ವ್ಯಕ್ತಿಗಳಾಗಿ ಪ್ರೊ.ಕಿ.ರಂ.ನಾಗರಾಜ್, ಎಂ.ಎಸ್.ನಾಗರಾಜರಾವ್, ಎಲ್.ಸಿ. ಸುಮಿತ್ರಾ, ಕೆ.ಎಸ್.ಪೂರ್ಣಿಮಾ, ಟಿ.ಪಿ.ಅಶೋಕ ಸಹಕರಿಸಿದ್ದರು. ಜನವರಿ ೨೦ ಮತ್ತು ೨೧ರಂದು ಬೆಳಗಾವಿಯಲ್ಲಿ ಸ್ಥಳೀಯ ಶ್ರೀನಾಗನೂರಮಠ ಮತ್ತು ಕರ್ನಾಟಕ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರದ ಸಹಯೋಗದಲ್ಲಿ 'ಕಾವ್ಯ ಸಹೃದಯತೆ'ಯ ಶಿಬಿರವೊಂದು ನಡೆಯಿತು. ಶ್ರೀಯುತರಾದ ಕೀರ್ತಿನಾಥ ಕುರ್ತಕೋಟಿ, ಕಿ.ರಂ.ನಾಗರಾಜ, ಪ್ರಭುಸ್ವಾಮಿಮಠ, ಗುರುರಾವ್ ಬಾಪಟ್, ಜಿ.ಕೆ.ಶ್ರೀಕಂಠಮೂರ್ತಿ ಮತ್ತು ಟಿ.ಪಿ.ಅಶೋಕ ಮುಂತಾದವರು ಶಿಬಿರವನ್ನು ನಡೆಸಿಕೊಟ್ಟರು.

**ಮಾತುಕತೆ ೫೭**

ನೀನಾಸಮ್ ಹೆಗ್ಗೋಡು (ಸಾಗರ) ಕರ್ನಾಟಕ ೫೭೭ ೪೧೭

ದೂರವಾಣಿ: ೦೮೧೮೩-೬೫೬೪೬

ಖಾಸಗಿ ಪ್ರಸಾರದ ತ್ರೈಮಾಸಿಕ ಸಂಪರ್ಕಪತ್ರ

(ಫೆಬ್ರವರಿ-ಮೇ-ಆಗಸ್ಟ್-ನವೆಂಬರ್)

ಸಂಪಾದಕ: ಜಶವಂತ ಜಾಧವ್

ಸಹ ಸಂಪಾದಕ: ವೆಂಕಟರಮಣ ಐತಾಳ ಬಿ. ಆರ್.

ವಾರ್ಷಿಕ ವರ್ಗಣಿ: ಇಪ್ಪತ್ತೈದು ರೂಪಾಯಿ

ಅಕ್ಷರ ಜೋಡಣೆ: ಅಕ್ಷರ ಗಣಕ, ಹೆಗ್ಗೋಡು

ಮುದ್ರಣ: ಅಶ್ವಿನಿ ಗ್ರಾಫಿಕ್ಸ್, ಅರಳೇಪೇಟೆ, ಬೆಂಗಳೂರು

**ಫೆಬ್ರವರಿ ೨೦೦೧** **ವರ್ಷ ಹದಿನೈದು** **ಸಂಚಿಕೆ ಒಂದು**

೧. ಬಾಲುರಾಯರಿಗೆ ನಮಸ್ಕಾರ
ಅಕ್ಷರ ಕೆ.ವಿ. ಪುಟ ೧

೨. ಭಾರತದಲ್ಲಿ ಹಿಂದುತ್ವವಾದದ ಬೆಳವಣಿಗೆ
ಕೆ. ಫಣಿರಾಜ ಪುಟ ೭

೩. ಸೆಕ್ಯುಲರಿಸಂ ಎಂಬ ಪರಿಕಲ್ಪನೆ
ಜಿ. ರಾಜಶೇಖರ ಪುಟ ೩೬

**MAATHUKATHE** FEB. 2001 (YEAR 15 ISSUE 1)
NINASAM QUARTERLY NEWS LETTER
PUBLISHED EVERY FEB;MAY;AUG;NOV.
ANNUAL SUBSCRIPTION: Rs.25(TWENTY FIVE ONLY)
FOR PRIVATE CIRCULATION
**NINASAM HEGGODU (SAGAR) KARNATAKA 577 417**

**ಅಕ್ಷರ ಪ್ರಕಾಶನ**

ಹೆಗ್ಗೋಡು (ಸಾಗರ) ಕರ್ನಾಟಕ - ೫೭೭ ೪೧೭

**ಈಚಿನ ಪ್ರಕಟಣೆಗಳು**

**ಮಹಾಮಾಯಿ** (ನಾಟಕ - ಚಂದ್ರಶೇಖರ ಕಂಬಾರ) ರೂ. ೬೦
**ಸಕ್ಕರೆ ಗೊಂಬೆ** (ನಾಟಕ - ವಿವೇಕ ಶಾನಭಾಗ) ರೂ. ೫೫
**ಎರಡು ರಷ್ಯನ್ ನೀಳ್ಗತೆಗಳು**
(ಟಾಲ್‌ಸ್ಟಾಯ್ ಮತ್ತು ಗೊಗೋಲ್ ಅನುವಾದ - ಟಿ.ಪಿ. ಅಶೋಕ) ರೂ. ೫೫
**ರಂಗಪ್ರಯೋಗ**
(ಅಭಿನಯ, ರಂಗತಂತ್ರ, ರಂಗಸಿದ್ಧತೆಯ ಪರಿಚಯ - ಅಕ್ಷರ ಕೆ.ವಿ.) ರೂ.೨೦೦
**ಬಹುಮುಖ** (ಅಕ್ಷರ ಚಿಂತನ ಮಾಲೆ -
ಮನು ಚಕ್ರವರ್ತಿ, ಅನು: ಎಲ್. ಜಿ. ಮೀರಾ) ರೂ. ೫೫
**ಜಾಗತಿಕ ಪರಿಸರ ಚರಿತ್ರೆ** (ಅಕ್ಷರ ಚಿಂತನ ಮಾಲೆ -
ರಾಮಚಂದ್ರ ಗುಹಾ, ಅನು: ಮಾಧವ ಐತಾಳ) ರೂ. ೭೫

**ಹೊಸ ಪ್ರಕಟಣೆಗಳು**

**ರಂಗದಲ್ಲಿ ಅಂತರಂಗ**
(ಸ್ತಾನಿಸ್ಲಾವ್‌ಸ್ಕಿಯ ಆ್ಯನ್ ಆ್ಯಕ್ಟರ್ ಪ್ರಿಪೇರ್ಸ್
ಅನುವಾದ: ಕೆ.ವಿ. ಸುಬ್ಬಣ್ಣ) ರೂ. ೧೬೦
**ಅಮ್ಮಚ್ಚಿಯೆಂಬ ನೆನಪು** (ಕಥೆಗಳು - ವೈದೇಹಿ) ರೂ. ೮೦
**ಸಿಂಗಾರೆವ್ವ ಮತ್ತು ಅರಮನೆ**
(ಕಾದಂಬರಿ-ಮರುಮುದ್ರಣ- ಚಂದ್ರಶೇಖರ ಕಂಬಾರ) ರೂ. ೮೫
**ಕಾರಂತ ಚಿಂತನ**
(ಕಡಲಾಚೆಯ ಕನ್ನಡಿಗರಿಂದ ಕಾರಂತರ ಕುರಿತ ಬರಹಗಳು) ರೂ. ೧೫೦
**ಕವಿರಾಜಮಾರ್ಗ ಮತ್ತು ಕನ್ನಡಜಗತ್ತು** (ಕೆ.ವಿ.ಸುಬ್ಬಣ್ಣ) ರೂ. ೭೦
**ಭವ** (ಕಾದಂಬರಿ-ಮರುಮುದ್ರಣ- ಯು.ಆರ್. ಅನಂತಮೂರ್ತಿ) ರೂ. ೬೦
**ಒಳಸೊನ್ನೆ ಹೊರಸೊನ್ನೆ**
(ಕವನಗಳು - ಕೆ.ಎಚ್. ಶ್ರೀನಿವಾಸ್) ರೂ. ೪೫
**ಚೂರಿಕಟ್ಟೆ ಅರ್ಥಾತ್ ಕಲ್ಯಾಣಪುರ**
(ನಾಟಕ - ಕೆ.ವಿ. ಅಕ್ಷರ) ರೂ. ೪೫
**ಯು.ಆರ್. ಅನಂತಮೂರ್ತಿ: ಒಂದು ಅಧ್ಯಯನ** (ಟಿ.ಪಿ. ಅಶೋಕ) ರೂ. ೫೦
**ಮಾಮಾಮೋಶಿ** (ಮೋಲಿಯೆರ್ ಅನುವಾದ - ಕೆ.ವಿ. ಸುಬ್ಬಣ್ಣ) ರೂ. ೪೫